ಅಕ್ಟೋಬರ್ 13, 2024
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

1954
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಸಾಲ ಕೇಳಿದ ಸ್ನೇಹಿತನ ಹೆಂಡತಿ ರೇಟ್ ಕೇಳಿ

# ಹೆಣವಾದ ದಾಸರಹಳ್ಳಿ ಬಿಡ್ಡಿ ಮೋಹನ!





## ಸಾಲ ಕೊಟ್ಟವಳನ್ನೇ ಹತ್ಯೆ ಮಾಡಿದ ರಿಯಲ್ ಎಸ್ಟೇಟ್ ಉದ್ಯಮಿ!

## ಮನೆ ಓನರ್‌ನನ್ನೇ ಕೊಂದ ಶಿವು!



## ಖಾಕಿ ಬಲೆಗೆ ಬಿದ್ದ ಗಾಂಜಾ ಪೆಡ್ಲರ್ಸ್!






## ವಿದ್ಯಾರ್ಥಿನಿಯರ ನಗ್ನ ಫೋಟೋ ತೆಗೆದ ಶಿಕ್ಷಕ ಅರೆಸ್ಟ್!

## ಅಕ್ರಮವಾಗಿ ಮುಂಬೈನಿಂದ ಹುಬ್ಳಿಗೆ ಸಾಗಿಸುತ್ತಿದ್ದ ಚಿನ್ನ ವಶ!

# ಅಂಡರ್‌ವರ್ಲ್ಡ್ ನಿಗೂಢ ಸತ್ಯಗಳು

# ಅಮರ್ ಆಳ್ವ ಹತ್ಯೆ ಯಾಕಾಯಿತು?



ಮಂಗಳೂರು ಭೂಗತ ಜಗತ್ತಿನಲ್ಲಿ ನಡೆದ ಭಯಾನಕ ಘಟನೆಗಳಲ್ಲಿಫಿ, ರಕ್ತ ಹೆಪ್ಪುಗಟ್ಟಿಸುವ ಆಕ್ರಂದನಗಳಲ್ಲಿಫಿ, 1980-95ರ ದಶಕ ಕಂಡ ಅಂಡರ್ ವರ್ಲ್ಡ್ ಬಡಿದಾಟಗಳಲ್ಲಿ ಒಮ್ಮೆಗೆ ಕಾಣಿಸಿಕೊಂಡು ಅಷ್ಟೇ ಬೇಗ ಮರೆಯಾದ ಎರಡು ಹೆಸರುಗಳಿವೆ. ಮೊದಲನೆಯವರು ಅಮರ್ ಆಳ್ವ ಮಂಗಳೂರಿನವರು. ಎರಡನೆಯ ಹೆಸರು ಪುತ್ತೂರಿನ ಜಯಂತ್ ರೈಫಿ.

ಒಬ್ಬರು ಮುಂಬೈ ಭೂಗತ ಜಗತ್ತಿನ ಸರ್ವ ಶಕ್ತ ಡಾನ್ ಆಗಿದ್ದ ಅಶೋಕ್ ಶೆಟ್ಟಿಯ ಅಗೋಚರ ಸಾಮ್ರಾಜ್ಯದ ವಿರುದ್ಧ ತೊಡೆತಟ್ಟಿ ಹತರಾದವರು. ಇನ್ನೊಬ್ಬರು ಬೆಂಗಳೂರಿನ ಡಾನ್ ಮುತ್ತಪ್ಪ ರೈ ಶಕ್ತಿ ಕೇಂದ್ರಕ್ಕೆ ಕಾವಲು ನಿಂತು ಜೀವ ಕಳೆದುಕೊಂಡವರು.

ನಾನೇಕೆ ಈ ಹೋಲಿಕೆ ಮಾಡುತ್ತಿದ್ದೇನೆಂದರೆ ಅಮರ್ ಮತ್ತು ಜಯಂತ್ ಇಬ್ಬರಲ್ಲೂ ಪರಸ್ಪರ ಸಾಮ್ಯತೆಗಳಿತ್ತುಫಿ. ಇಬ್ಬರೂ ಪ್ರತಿಷ್ಠಿತ ಬಂಟ ಮನೆತನದವರು. ಧೈರ್ಯ, ತಾಕತ್ತು ಮತ್ತು ನಾಯಕತ್ವ ಗುಣ, ಸುರದ್ರೂಪ ಇಬ್ಬರಲ್ಲೂ ಇತ್ತುಫಿ. ಸಿಕ್ಕ ಅವಕಾಶಗಳನ್ನು ಸರಿಯಾಗಿ ಬಳಸಿಕೊಂಡು ರಾಜಕೀಯವಾಗಿ ಬೆಳೆಯುವ ಕೆಲಸಕ್ಕೇನಾದರೂ ಕೈ ಹಾಕಿದ್ದಾರೆ. ಇವರಿಬ್ಬರೂ ಇವತ್ತು ವಿಧಾನಸೌಧದ ಮೂರನೇ ಮಹಡಿಯಲ್ಲಿ ಅಧಿಪತ್ಯ ಸಾಧಿಸುತ್ತಿದ್ದರೇನೋ. ಎಲ್ಲರನ್ನೂ ಒಂದುಗೂಡಿಸಿಕೊಂಡು ಮುಂದೆ ಹೋಗುವ ಗುಣ, ಸಾಮಾಜಿಕ ಕಳಕಳಿ ಇಬ್ಬರಲ್ಲೂ ಸರಿಸಮನಾಗಿತ್ತುಫಿ. ಆದರೆ ದುರಾದೃಷ್ಟ ಇಬ್ಬರನ್ನು ಕೈ ಹಿಡಿದೆಳೆದಿತ್ತುಫಿ.

ಇರಲಿ ಬಿಡಿ. ನಾನೀಗ ಸಹೇಳಲು ಹೊರಟಿರುವುದು ಜೀವಿತಕಾಲದಲ್ಲಿಯೇ ದಂತಕತೆಯಾಗಿ ಹೋದ ಅಮರ್ ಆಳ್ವ ಹತ್ಯೆಯ ಕಥೆ.

ಅದು 1985-90ರ ದಶಕ.

ಆವತ್ತಿಗಾಗಲೇ ಮಂಗಳೂರು, ಬೆಂಗಳೂರು ಮತ್ತು ಮುಂಬೈ ಅಂಡರ್ ವರ್ಲ್ಡ್ ಪಾಲಿಗೆ ಅಮರ್ ಆಳ್ವ ಪ್ರಜ್ವಲಿಸುತ್ತಿದ್ದ ಸೂರ್ಯ. ಭೂಗತ ಲೋಕಕ್ಕೆ ಬೇರೆಯದೇ ರೀತಿಯ ಖದರು ತಂದುಕೊಟ್ಟ ಬುದ್ಧಿವಂತ. ಯುವಕರ ಕ್ರೇಜಿ, ಯುವತಿಯರ ಪಾಲಿನ ಕ್ರಶ್, ಭಾಯಿಲೋಗ್‌ಗಳ ಅಭಿಮನ್ಯು.

ಅಮರ್ ಸುಂದರದ್ರೂಪಿ. ಯಾವ ಸಿನಿಮಾ ಹೀರೋರೂ ಕಡಿಮೆ ಏನಿರಲಿಲ್ಲಫಿ. ಎಂತಹ ಪತಿವ್ರತೆಯಾದರೂ ಆಸೆಪಡುವಂತಹ ಸುಂದರದ್ರೂಪವಿತ್ತುಫಿ ಅಮರ್ ಆಳ್ವರಿಗೆ!

ಅಮರ್ ಆಳ್ವ ಸ್ಮಾರ್ಟ್ ಫೆಲೋ. ಮಂಗಳೂರಿನ ಬಂಟರ ಮನೆತನವರಾದ್ದರಿಂದ ಒಳ್ಳೆಯ ಬಣ್ಣವಿತ್ತುಫಿ. ವಿಪರೀತ ಸುತ್ತಾಡುವ ಕಲರ್‌ಫುಲ್ ಬಟರ್‌ಫ್ಲೈ ಎಂದು ಸ್ನೇಹಿತರು ತಮಾಷೆ ಮಾಡುತ್ತಿದ್ದುದೂ ಉಂಟು.

ಅಮರ್ ಶ್ರೀಮಂತ ಮನೆಯ ಯುವಕ. ಪ್ರತಿಷ್ಠಿತ ಬೆಳ್ಳಿಪಾಡಿ ಮನೆತನದವರು ಅನ್ನುವುದಕ್ಕಿಂತಲೂ ಅಂಡರ್ ವರ್ಲ್ಡ್ ಸಂಪರ್ಕವೇ ಶ್ರೀಮಂತಿಕೆಯನ್ನು ಮೀರಿ ಅವರನ್ನು ಪ್ರಸಿದ್ಧರನ್ನಾಗಿ ಮಾಡಿತು.

ಅವರು ಕಟ್ಟಿದ ಟೀಮ್‌ನಲ್ಲಿ ಪಳಗಿದ ಶೂಟರ್‌ಗಳಿದ್ದರು. ಹೊಡೆದಾಟಕ್ಕೆ ನಿಂತರೆ ಪ್ರಾಣದ ಹಂಗುತೊರೆದು ಬಡಿದಾಡುವ ಫೈಟರ್‌ಗಳಿದ್ದರು. ಅಮರ್ ಒಂದು ಮಾತು ಹೇಳಿದರೆ ಸಾಕು. ಪ್ರಾಣ ಕೊಡಲು ಮತ್ತು ಪ್ರಾಣ ತೆಗೆಯಲು ರೆಡಿಯಾದ ಜೀವದ ಗೆಳೆಯರ ಗುಂಪೇ ಜೊತೆಗಿತ್ತುಫಿ.

ಇಷ್ಟೆಲ್ಲ ತಾಕತ್ತಿದ್ದರೂ ಅಮರ್ ಯಾವತ್ತೂ ಗ್ಯಾಂಗ್‌ಸ್ಟರ್ ಆಗಿ ಗುರುತಿಸಿಕೊಂಡಿರಲಿಲ್ಲಫಿ. ಪೊಲೀಸ್ ಠಾಣೆಗಳ ಯಾವ ಕಾಲಂನಲ್ಲೂ ಹೆಸರು ಕಾಣಿಸಿಕೊಂಡಿರಲಿಲ್ಲಫಿ. ಯಾರೊಬ್ಬರ ಮೇಲೂ ಹಲ್ಲೆ ಮಾಡಿದ ಉದಾಹರಣೆಗಳಿಲ್ಲಫಿ. ತಲವಾರು ಹಿಡಿಯಲಿಲ್ಲಫಿ. ಹಫ್ತಾ ವಸೂಲು ಮಾಡಲಿಲ್ಲಫಿ. ಆದರೆ ಹತ್ತೇ ಹತ್ತು ನಿಮಿಷದಲ್ಲಿ ಕನಿಷ್ಠ 500 ಮಂದಿ ಬಲಿಷ್ಟ ಯುವಕರ ತಂಡವನ್ನು ಯಾವಾಗ, ಯಾರೆದುರು ಬೇಕಾದರೂ ತಂದು ನಿಲ್ಲಿಸುವ ತಾಕತ್ತು ಅವರಿಗಿತ್ತುಫಿ. ಅವರ ವ್ಯಕ್ತಿತ್ವವೇ ಹಾಗಿತ್ತುಫಿ.

ಆ ಕಾಲಘಟ್ಟದ ಅಂಡರ್‌ವರ್ಲ್ಡ್ ವಿಭಿನ್ನವಾದದ್ದುಫಿ. ಭೂಗತ ಜಗತ್ತಿಗೆ ಕಾಲಿಡಬಯಸುವ ನಿರುದ್ಯೋಗಿ ಯುವಕರಿಗೆ ದುಬೈನಲ್ಲಿ ಕುಳಿತಿದ್ದ ಶರತ್ ಶೆಟ್ಟಿ ಮತ್ತು ಅಶೋಕ್ ಶೆಟ್ಟಿಯ ಹೆಸರು ಹೇಳುವುದು ಮತ್ತು ಕೇಳುವುದೇ ರೋಮಾಂಚನ ತರುತ್ತಿದ್ದ ಕಾಲವದು. ಅಮರ್‌ಗೆ ಇವರೊಬ್ಬರೊಂದಿಗೂ ಸಮಾನ ಗೆಳೆತನವಿತ್ತುಫಿ.

80-95ರ ದಶಕದಲ್ಲಿ ಮಂಗಳೂರಿನಲ್ಲಿ ಅಮರ್ ಆಳ್ವರದ್ದು ದೊಡ್ಡ ಹೆಸರು. ಹೊಸ ತಲೆಮಾರಿನ ಯುವಕರಿಗಿರುವ ತಾಕತ್ತುಫಿ, ಸಾವಿನೊಂದಿಗೆ ಬೇಕಾದರೂ ಕೈ ಕುಲುಕಬಲ್ಲ ನಿರ್ಭೀತ ಮನಸ್ಥಿತಿ ಅವರದ್ದುಫಿ. ಮುಂಬೈ ಅಂಡರ್ ವರ್ಲ್ಡ್‌ನ ಅನಾಹುತಕಾರಿ ಶೂಟರ್‌ಗಳಾದ ಸುಭಾಷ್‌ಸಿಂಗ್ ಠಾಕೂರ್, ಬಚ್ಚಿ ಪಾಂಡೆ, ಬಾಬಾ ಗೇಬ್ರಿಯಲ್, ಸುನಿಲ್ ಸಾವಂತ್, ಗುರು ಸಾಟಮ್, ಅನಿಲ್ ಪರಬ್, ಫ್ರಾನ್ಸಿಸ್ ಕುಟಿನ್ಹಾಫಿ, ರಮೇಶ್ ಪೂಜಾರಿ ಹೀಗೆ ಸಾಲು ಸಾಲು ಮಂದಿಯ ಕೈ ಅಮರ್ ಹೆಗಲ ಮೇಲಿತ್ತುಫಿ. ಮಂಗಳೂರಿನಲ್ಲಿ ಪದೇಪದೇ ಇವರೆಲ್ಲರೂ ಜೊತೆಯಾಗುತ್ತಿದ್ದರು. ದುಬೈನಲ್ಲಿದ್ದೇ ಇಲ್ಲಿನ ಭೂಗತ ಲೋಕದ ಮೇಲೆ ಹಿಡಿತವಿಟ್ಟುಕೊಂಡಿದ್ದ ಶರತ್ ಶೆಟ್ಟಿ ಮತ್ತು ಅಶೋಕ್ ಶೆಟ್ಟಿಯೊಂದಿಗೆ ಅಮರ್ ಗೆಳೆತನವಿತ್ತುಫಿ.

ಆ ದಶಕದ ಮಂಗಳೂರಿನ ಗ್ಯಾಂಗ್‌ವಾರ್‌ಗಳನ್ನು ಹೋಲಿಕೆ ಮಾಡಿದರೆ ಅಮರ್‌ಗೆ ಸಾವಿರಾರು ಬೆಂಬಲಿಗರಿದ್ದರು. ಅದೊಂದು ಚಿಕ್ಕ ಸೈನ್ಯಫಿ. ಅಲ್ಲಿ ಫೈಟರ್‌ಗಳಿದ್ದರು. ಶೂಟರ್‌ಗಳಿದ್ದರು. ಚಾಣಾಕ್ಷರಿದ್ದರು. ಜನಸಾಮಾನ್ಯರಿದ್ದರು. ಪೊಲೀಸರೂ ಇದ್ದರು. ಮಂಗಳೂರು, ಬೆಂಗಳೂರು, ಮುಂಬೈನ ಯಾವ ಏರಿಯಾದ, ಯಾವ ಬೀದಿಗಳಲ್ಲಿ ಹುಡುಕಿದರೂ ಅವರಿಗೆ ಹತ್ತಾರು ಮಂದಿ ಗೆಳೆಯರು ಸಿಕ್ಕೇ ಸಿಗುತ್ತಿದ್ದರು ಅಮರ್ ಗಿದ್ದ ತಾಕತ್ತೇ ಅದು.

ಸರ್ವ ಕಾಲೇಜು ವಿದ್ಯಾರ್ಥಿ ಸಂಘದ ಚುನಾವಣೆಗಳಿಂದ ಹಿಡಿದು ಮಂಗಳೂರು ಸುತ್ತಮುತ್ತಲಿನ ಬಹು ದೊಡ್ಡ ವಿವಾದ ಮನಸ್ತಾಪಗಳು ಅವರೆದುರು ರಾಜಿ ಪಂಚಾಯ್ತಿಗೆಯಲ್ಲಿ ಮುಗಿಯುತ್ತಿತ್ತು. ಇವೆಲ್ಲ ಕಾರಣಗಳಿಂದಾಗಿಯೇ ಅವರ ಹೆಸರು ಮಂಗಳೂರು ಭೂಗತ ಜಗತ್ತಿನ ಸಿಂಹಾಸನದ ಮೆಟ್ಟಿಲುಗಳ ಹತ್ತಿರ ಬಂದು ನಿಂತಿತ್ತುಫಿ. ಮನಸ್ಸು ಮಾಡಿದ್ದರೆ ಅಮರ್ ಯಾವತ್ತೋ ಡಾನ್ ಅನ್ನಿಸಿಕೊಳ್ಳಬಹುದಿತ್ತೇನೋ. ಹಾಗೇನಾದರೂ ಆಗಿದ್ದರೆ ಭೂಗತ ಲೋಕದ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಗುತ್ತಿತ್ತುಫಿ. ಆದರೆ ಆದದ್ದು ಮಾತ್ರ ಬೇರೆ.

ಇಷ್ಟೆಲ್ಲ ಬೆಳವಣಿಗೆಗಳಾಗುತ್ತಿರುವ ನಡುವೆ ಗೆಳೆತನ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾರೋ ಎಲ್ಲೋ ಕುಳಿತು ಹೇಳಿದ ಒಂದು ಮಾತು, ಕೆಲವೊಂದು ವದಂತಿ, ಸ್ವಲ್ಪ ಸುಳ್ಳು ಅಮರ್ ಆಳ್ವ ಮತ್ತು ಅಶೋಕ್ ಶೆಟ್ಟಿಯ ನಡುವೆ ಮನಸ್ತಾಪ ತಂದುಬಿಟ್ಟಿತು. ''ಅಮರ್ ನನ್ನ ಮಾತು ಮೀರಿ ನಡೆಯುತ್ತಿದ್ದಾನೆ'' ಹಾಗಂತ ದುಬೈನಲ್ಲಿ ಶರತ್ ಶೆಟ್ಟಿಯೊಂದಿಗೆ ಮಾತನಾಡುತ್ತಾ ಅಶೋಕ್ ಹೇಳಿದ್ದರಂತೆ. ಪರಿಸ್ಥಿತಿ ಹೀಗೆ ಮುಂದುವರಿದರೆ ನನ್ನ ಕಡೆಯ ಅಷ್ಟೂ ಹುಡುಗರು ಅಮರ್ ಕಡೆಗೆ ಹೊರಟು ಹೋಗುತ್ತಾರಾ? ಎನ್ನುವ ಅನುಮಾನ ಅವರಲ್ಲಿತ್ತುಫಿ. ಈ ವಿಷಯ ಗೊತ್ತಾದೊಡನೆ ಅಮರ್ ಕೂಡ ಸುಮ್ಮನಿರಲಿಲ್ಲಫಿ. ಅಶೋಕ್ ವಿರುದ್ಧ ಅವರಿಗೂ ಆಕ್ಷೇಪವೂ ಇತ್ತುಫಿ. ''ಮುತ್ತಪ್ಪ ರೈಯೊಂದಿಗೆ ಸೇರಿ ನನ್ನ ಸ್ನೇಹಿತ ಆಯಿಲ್ ಕುಮಾರ್‌ನನ್ನು ಬೆಂಗಳೂರಿನಲ್ಲಿ ಕೊಲೆ ಮಾಡಿಸಿದ್ದು ಯಾಕೆ? ದುಡ್ಡಿಗಾಗಿ ತಾನೆ? ಇವನಿಗೆ ಮಹಾರಾಜನ ಪಟ್ಟ ಕಟ್ಟಲು ನಾವು ಸೈನಿಕರಾಗಬೇಕಾ? ಬಲಿದಾನಕ್ಕೂ ಸಿದ್ಧರಾಗಬೇಕಾ? ಹಾಗಂತ ಅನ್ನುವ ಸಮಯ ಸಂದರ್ಭ ಬಂದಾಗ ಅಮರ್ ತುಂಬಾ ಭಾವುಕರಾಗಿದ್ದಾರಂತೆ.

ಈ ನಡುವೆ ಶರತ್ ಶೆಟ್ಟಿಫಿ, ಅಮರ್‌ರನ್ನು ದುಬೈಗೆ ಕರೆಸಿಕೊಂಡರು. ಅಶೋಕ್ ಶೆಟ್ಟಿಯೊಂದಿಗೆ ರಾಜಿ ಪ್ರಯತ್ನ ನಡೆಸಿದರು. ಆದರೆ ಮಾತುಕತೆ ಮುರಿದು ಬಿದ್ದ ದಿನ ಅಶೋಕ್ ಶೆಟ್ಟಿ ಸಿಟ್ಟು ಮತ್ತು ಅವಮಾನಗಳಿಂದ ಖುದ್ದು ಹೋಗಿದ್ದರಂತೆ. 'ಮಂಗಳೂರಿನ ಭೂಗತಲೋಕದ ಶಕ್ತಿ ಪೀಠದಲ್ಲಿ ನಾನೇ ಕೂರಿಸಿದ್ದ ಹುಡುಗ, ನನ್ನ ಮಾತಿಗೆ ಕ್ಯಾರೆ ಅನ್ನುತ್ತಿಲ್ಲಫಿ. ನನ್ನ ರಾಕ್ಷಸ ಶಕ್ತಿ ಏನೆಂಬುದನ್ನು ತೋರಿಸದೆ ಹೋದರೆ ಅಂಡರ್‌ವರ್ಲ್ಡ್‌ನಲ್ಲಿ ನನಗೊಂದು ತೂಕ ಇರುವುದಿಲ್ಲಫಿ. ಆಮೇಲೆ ಚಪ್ಪರ್‌ಗಳು ಕೂಡ ನನ್ನ ವಿರುದ್ಧ ಮಾತನಾಡಲು ಆರಂಭಿಸಿದರೆ?' ಹಾಗಂತ ಶರತ್ ಶೆಟ್ಟಿ ಎದುರು ಹೇಳಿಯೂ ಬಿಟ್ಟರು. ಕೇಳಿಸಿಕೊಂಡವರು ಸುಮ್ಮನಿದ್ದರು!

## ಹುಲಿ ಮುಂದೆ ಅಬ್ಬರಿಸಿದ ಅಮರ್ ಆಳ್ವ



ದುಬೈನಿಂದ ಮಂಗಳೂರಿಗೆ ಅಮರ್ ಹಿಂದಿರುಗಿದ ನಂತರ ಭೂಗತ ಲೋಕದಲ್ಲಿ ಬಹಳಷ್ಟು ಬೆಳವಣಿಗೆಗಳು ನಡೆದವು. 'ಅಶೋಕ್ ಶೆಟ್ಟಿಯೊಂದಿಗೆ ಮುತ್ತಪ್ಪ ರೈ ಹೊತ್ತಲ್ಲದ ಹೊತ್ತಿನಲ್ಲಿ ಅಗತ್ಯಕ್ಕಿಂತ ಹೆಚ್ಚು ವಿಷಯಗಳನ್ನು ಚರ್ಚಿಸುತ್ತಿದ್ದಾನೆ' ಎಂಬ ಸುದ್ದಿ ಅಮರ್ ಕಿವಿಗೆ ಬೀಳುತ್ತಿತ್ತುಫಿ. 'ಮಂಗಳೂರಿನಲ್ಲಿ ಅಮರ್ ಪದೇ ಪದೇ ತನ್ನ ಬಗ್ಗೆ ಬಹಿರಂಗವಾಗಿ ಮತ್ತು ತೀರಾ ಹಗುರವಾಗಿ ಮಾತಾಡುತ್ತಿದ್ದಾನೆ' ಎಂಬ ಸುದ್ದಿ ದಿನ ಬೆಳಗಾದರೆ ಬೆಂಗಳೂರಿನ ಇಂದಿರಾನಗರದಲ್ಲಿದ್ದ ಮುತ್ತಪ್ಪ ರೈ ಮನೆಯಿಂದ ಅಶೋಕ್ ಶೆಟ್ಟಿಯ ದುಬೈ ಬಂಗಲೆಗೆ ತಲುಪುತ್ತಿತ್ತುಫಿ.

'ಮಲಗಿರುವ ಹುಲಿಗಿಂತ ಗಾಯಗೊಂಡಿರುವ ಹುಲಿ ಹೆಚ್ಚು ಅಪಾಯಕಾರಿ' ಅನ್ನುವ ಮಾತೊಂದಿದೆ. ಇವರಿಬ್ಬರ ವಿಷಯದಲ್ಲಾದದ್ದೂ ಇದೇ. ಅಶೋಕ್ ಶೆಟ್ಟಿಯಂತಹ ಹೆಬ್ಬುಲಿಯನ್ನು ಅಮರ್ ಆಳ್ವ ತನ್ನ ಮಾತಿನಲ್ಲೇ ಅರೆ ಜೀವ ಮಾಡಿ ಬಂದಿದ್ದರು. ಅದಕ್ಕೆ ಇನ್ನೊಂದು ಬಲವಾದ ಕಾರಣವೂ ಇತ್ತುಫಿ. ಶರತ್ ಶೆಟ್ಟಿ ಎದುರು ನಡೆದ ರಾಜಿ ಮಾತುಕತೆಯಲ್ಲಿ ಅಮರ್ ತೀರ ಅವಮಾನವಾಗುವಂತಹ ಮಾತುಗಳನ್ನಾಡಿದ್ದರಂತೆ. ರಾಜಿ ಮಾತುಕತೆಯ ಮಧ್ಯದಲ್ಲೊಮ್ಮೆ ಅಶೋಕ್ ಶೆಟ್ಟಿಯೊಂದಿಗೆ ಕಾಂಪ್ರಮೈಸ್ ಮಾಡಿಕೊಳ್ಳುವಂತೆ ಶರತ್ ಸೂಚಿಸಿದ್ದರು. 'ಅದು ಸಾಧ್ಯವೇ ಇಲ್ಲ' ಅಂತ ಕಡ್ಡಿಮುರಿದಂತೆ ಹೇಳಿದ್ದು ಅಮರ್ ಆಳ್ವಫಿ.

''ಮಂಗಳೂರಿನಲ್ಲಿ ಬಾಯಿಗಿರಿ ನಡೆಸಲು ನಿಮಗೆ ನನ್ನ ಜನ ಬೇಕು. ನಿಮ್ಮೆಲ್ಲಾ ಕೆಲಸಗಳನ್ನು ಆವು ಮಾಡಿಕೊಡಬೇಕು. ಆದರೆ ನೀವು ಮಾತ್ರ ಬೆನ್ನಿಗಿರಿಯುವ ಕೆಲಸ ಮಾಡುತ್ತಲೇ ಇದ್ದೀರಿ. ನಾನಿಲ್ಲದೆ ನೀನ್ಯಾವ ದೊಡ್ಡ ಮಹಾರಾಜ? ಇವತ್ತಿನ ದಿನ ನಾನೂ ಚಾಲೆಂಜ್ ಮಾಡ್ತೇನೆ. ನಿನ್ನ ಕೈಲಾದದ್ದು ನೀನು ಮಾಡು. ನನ್ನ ತಾಕತ್ತೇನೂ ಅಂತ ನಾನು ತೋರಿಸ್ತೇನೆ'' ಹಾಗಂತ ಅಶೋಕ್ ಶೆಟ್ಟಿ ಎಂಬ ಭೂಗತ ಲೋಕದ ಹುಲಿ ಮನೆಯ ಬಾಗಿಲಲ್ಲಿ ನಿಂತು ಅಬ್ಬರಿಸಿಬಿಟ್ಟಿದ್ದರು.

ಯುದ್ಧ ಕೊನೆಯ ಹಂತ ತಲುಪಿತ್ತುಫಿ!

ಅಮರ್ ಸಾವು ಆವತ್ತೇ ನಿಶ್ಚಯವಾಗಿತ್ತುಫಿ!

(ಮುಂದಿನ ಸಂಚಿಕೆಯಲ್ಲಿ)







ಸತ್ಯಗಾಲ ಹ್ಯಾಂಡ್ ಪೋಸ್ಟ್ ಬಳಿ ಕಾರಿನಲ್ಲಿ ಪತ್ತೆಯಾದ ಮೋಹನ್ ಶವವನ್ನು ಪರಿಶೀಲಿಸುತ್ತಿರುವ ಪೊಲೀಸರು

# ಸಾಲ ಕೇಳಿದ ಸ್ನೇಹಿತನ ಹೆಂಡತಿ ರೇಟ್ ಕೇಳಿ ಹೆಣವಾದ ದಾಸರಹಳ್ಳಿ ಬಡ್ಡಿ ಮೋಹನ್!

ಕೊಳ್ಳೇಗಾಲ

✍ ಎಸ್. ಸ್ವಾಮಿ

**ಸೆಪ್ಟೆಂಬರ್ 21ರಂದು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಹ್ಯಾಂಡ್ ಪೋಸ್ಟ್‌ನ ಕಾವೇರಿ ಹೋಟೆಲ್ ಮುಂದೆ ನಿಲ್ಲಿಸಿದ್ದ ಶಿಫ್ಟ್ ಕಾರಿನ ಒಳಗೆ ವ್ಯಕ್ತಿ ಯೋರ್ವನ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಅದು ಬೆಂಗಳೂರಿನ ಅಗ್ರಹಾರ ದಾಸರಹಳ್ಳಿಯ ಜಯಮುನಿರಾವ್ ಸರ್ಕಲ್‌ನ ನಿವಾಸಿ ಮೋಹನ್ ಆಲಿಯಾಸ್ ರಘು ಎಂಬಾತನದು ಎಂದು ಪತ್ತೆಹಚ್ಚಿದ ಪೊಲೀಸರಿಗೆ ಕೊಲೆಗಾರ ಯಾರು? ಕೊಲೆ ಏಕೆ ಮಾಡಿದ? ಎಂಬುದನ್ನು ಪತ್ತೆಹಚ್ಚುವುದು ಅಷ್ಟು ಸುಲಭವಾಗಿರಲಿಲ್ಲ. ಏಕೆಂದರೆ ಆರೋಪಿ ಮೊಬೈಲ್ ಬಳಸುತ್ತಿರಲಿಲ್ಲ. ಘಟನೆಗೆ ಸಂಬಂಂಸಿದಂತೆ ಯಾವುದೇ ಸುಳಿವು ಬಿಟ್ಟಿರಲಿಲ್ಲ. ಶವ ಸಿಕ್ಕಿದ ದಿನ ಪೊಲೀಸರು ಸ್ಥಳಕ್ಕೆ ಶೋಕೊ ತಂಡ ಹಾಗೂ ಶ್ವಾನದಳವನ್ನು ಕರೆಸಿಕೊಂಡು ಪರಿಶೀಲನೆ ನಡೆಸುತ್ತಾರೆ. ಆದರೆ ಕೊಲೆಗಾರನ ಬಗ್ಗೆ ಯಾವುದೇ ಸುಳಿವು ದೊರಕುವುದಿಲ್ಲ. ಇದು ಪ್ರಕರಣವನ್ನು ಭೇದಿಸಬೇಕಾದ ಪೊಲೀಸರಿಗೆ ತಲೆ ನೋವಾಗಿ ಪರಿಣಮಿಸಿತ್ತು. ಆದರೂ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಸುಮ್ಮನೆ ಕೂರಲಿಲ್ಲ. ಇಂತಹ ಸವಾಲಿನ ಪ್ರಕರಣವನ್ನು ಕೇವಲ ಹತ್ತು ದಿನಗಳಲ್ಲಿ ಭೇದಿಸಿ ಆರೋಪಿಯ ಎಡೆಮುರಿ ಕಟ್ಟಿ ತಂದು ಜೈಲಿಗಟ್ಟಿದ್ದಾರೆ.**



ಮೋಹನ್ ಬದುಕಿದ್ದಾಗ

ಬೆಂಗಳೂರಿನ ಅಗ್ರಹಾರ ದಾಸರಹಳ್ಳಿಯ ಜಯಮುನಿರಾವ್ ಸರ್ಕಲ್‌ನ ಲೇ. ಬಾಲಕೃಷ್ಣ ಹಾಗೂ ಲಕ್ಷ್ಮೀದೇವಿ ದಂಪತಿಗಳಿಗೆ ಮೂವರು ಮಕ್ಕಳು. ಮೊದಲನೆಯವನು ಮಂಜುನಾಥ್, ಎರಡನೆಯವನು ಮೃತ ಮೋಹನ್ ಆಲಿಯಾಸ್ ರಘು ಹಾಗೂ ಕಿರಿಯವನು ಶರತ್ ಒಟ್ಟು ಮೂರು ಮಕ್ಕಳು. ಬಾಲಕೃಷ್ಣ ಬದುಕಿದ್ದಾಗಲೇ ಮಕ್ಕಳಿಗೆಲ್ಲ ಮದುವೆ ಮಾಡಿದ್ದ. ಅದೇ ರೀತಿ ಕಳೆದ 10 ವರ್ಷಗಳ ಹಿಂದೆ ಮೋಹನ್‌ಗೂ ಸಹ ಪುಷ್ಪಲತಾ ಎಂಬಾಕೆಯನ್ನು ತಂದು ಮದುವೆ ಮಾಡಿಕೊಟ್ಟಿದ್ದ. ಆಕೆಗೆ ಒಂದು ಹೆಣ್ಣು ಮಗುವಿದೆ.



ಎಸ್ಪಿ ಡಾ. ಬಿ.ಟಿ. ಕವಿತಾ



ಡಿವೈಎಸ್ಪಿ ಧರ್ಮೇಂದ್ರ



ಸಿಪಿಐ ಶಿವಮಾದಯ್ಯ

ಮದುವೆಯಾದ ಎಂಟು ತಿಂಗಳಿಗೆಲ್ಲ ಹೆಂಡತಿಯಿಂದ ವಿಚ್ಛೇದನ ಪಡೆದುಕೊಂಡಿದ್ದ. ಹೆಂಡತಿ ಬಿಟ್ಟ ನಂತರ ಮತ್ತೊಂದು ವಿವಾಹಕ್ಕೆ ಹುಡುಗಿ ನೋಡುತ್ತಿದ್ದ ಅದಕ್ಕಾಗಿ ಆಗಾಗ ದೇವಾಲಯಗಳಿಗೆ ಭೇಟಿ ನೀಡುತ್ತಿದ್ದ.

ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ. ಮೃತ ಮೋಹನ್ ಆಸ್ತಿವಂತ. ದಾಸರಹಳ್ಳಿಯಲ್ಲಿ ಸಾಕಷ್ಟು ಆಸ್ತಿ ಇದ್ದು ವಾಣಿಜ್ಯ ಸಂಕೀರ್ಣಗಳಿಂದ ಬರುವ ಬಾಡಿಗೆ ಹಣದಿಂದ ಬಡ್ಡಿ ವ್ಯವಹಾರ ಮಾಡಿಕೊಂಡು ಕುಡಿದು ತಿಂದು ಬೀದಿ ಧನದಂತೆ ಸುತ್ತಾಡಿಕೊಂಡಿದ್ದ ಈತ ಪ್ರತಿದಿನ ಬೆಳಗಿನ ಜಾವ ದಾಸರಹಳ್ಳಿ ಜಂಕ್ಷನ್‌ನಲ್ಲಿ ಟೀ ಕುಡಿಯಲು ಹೋಗುತ್ತಿದ್ದ ವೇಳೆ ಅದೇ ಏರಿಯಾದಲ್ಲಿ ವಾಸವಾಗಿರುವ ಸಂತೋಷ್ ಅಲಿಯಾಸ್ ಹೊಟ್ಟೆಹಸಿ ಎಂಬಾತನ ಪರಿಚಯವಾಗಿದೆ. ಸಂತೋಷ್ ಮೃತ ಮೋಹನ್‌ನ ಕಿರಿಯ ಸಹೋದರ ಶರತ್‌ನ ಸ್ನೇಹಿತ.

ಅಲ್ಲೇ ದಾಸರಹಳ್ಳಿಯಲ್ಲಿ ವಾಸವಾಗಿರುವ ಸಂತೋಷ್ ಮೂಲತಃ ಕುಣಿಗಲ್‌ನವನು. ತಂದೆ ರಾಮಪ್ಪ ಈಗ ಬದುಕಿಲ್ಲ, ಒಬ್ಬ ಅಣ್ಣ ಇದ್ದಾರೆ. ಹೆಂಡತಿ ನೇತ್ರಾವತಿ ಟೈಲರಿಂಗ್ ಕೆಲಸ ಮಾಡಿಕೊಂಡಿದ್ದಾರೆ. ಈ ದಂಪತಿಗಳಿಗೆ ಒಬ್ಬ ಮಗ ಇದ್ದಾನೆ. ತಮ್ಮ ತಂದೆಯ ಕಾಲದಲ್ಲಿ ಬೆಂಗಳೂರು ಸೇರಿರುವ ಸಂತೋಷ್ ಕುಟುಂಬಕ್ಕೆ ದಾಸರಹಳ್ಳಿಯಲ್ಲಿ ಮೂರು ಅಂತಸ್ತಿನ ಸ್ವಂತ ಮನೆ ಇದೆ. ದಾಸರಹಳ್ಳಿ ಜಂಕ್ಷನ್‌ನಲ್ಲಿ ಹಣ್ಣು ವ್ಯಾಪಾರ ಮಾಡಿಕೊಂಡಿರುವ ಸಂತೋಷ್‌ಗೆ ಚಾಲಕ ವೃತ್ತಿ ಬರುತ್ತಿದ್ದರಿಂದ ಆಗಾಗ ಯಾರಾದರೂ ಲಾಂಗ್ ಡ್ರೈವ್ ಕರೆದರೆ ಅವರೊಡನೆ ಹೋಗಿ ಬರುತ್ತಿದ್ದ.

ಹಣ್ಣು, ತರಕಾರಿ ವ್ಯಾಪಾರ ಮಾಡಿಕೊಂಡಿದ್ದ ಸಂತೋಷ್‌ಗೆ ತನ್ನ ವ್ಯವಹಾರವನ್ನು ಮತ್ತಷ್ಟು ಹೆಚ್ಚಿಸಬೇಕೆಂಬ ಪ್ಲಾನ್ ಇತ್ತು. ಅದಕ್ಕಾಗಿ ಬಡ್ಡಿ ವ್ಯವಹಾರ ಮಾಡುತ್ತಿದ್ದ ಮೋಹನ್‌ನನ್ನು 1 ಲಕ್ಷ ರೂಪಾಯಿಗಳನ್ನು ಸಾಲ ಕೊಡುವಂತೆ ಕೇಳಿಕೊಂಡಿದ್ದ. ಆದರೆ ಮೋಹನ್ ಸಾಲ ಕೊಡುವುದಾಗಿ ಹೇಳಿ ಸತಾಯಿಸುತ್ತಿದ್ದ.



ಕೊಲೆ ಆರೋಪಿ ಸಂತೋಷ್

ಸೆಪ್ಟೆಂಬರ್ 18ರಂದು ಬೆಳಗಿನ ಜಾವ ಐದು ಗಂಟೆಗೆ ತನ್ನ ಶಿಫ್ಟ್ ಕಾರ್‌ನಲ್ಲಿ ದಾಸರಹಳ್ಳಿ ಜಂಕ್ಷನ್‌ಗೆ ಬಂದ ಮೋಹನ್ ಅಲ್ಲಿ ಟೀ ಕುಡಿದು ಹಣ್ಣು, ತರಕಾರಿ ಮಾರುತ್ತಿದ್ದ ಸಂತೋಷ್‌ನನ್ನು ಹೊರಗಡೆ ಹೋಗಿ ಬರೋಣ ಬಾ ಎಂದು ಕರೆದಿದ್ದಾನೆ. ಮೋಹನ ಬಳಿ ಒಂದು ಲಕ್ಷ ಕೇಳಿದ್ದ ಸಂತೋಷ್ ಆತ ಕರೆದ ಕೂಡಲೇ ಕಾರು ಏರಿ ಕುಳಿತು ಸ್ಟೇರಿಂಗ್ ಹಿಡಿದು ಚಾಲನೆ ಮಾಡ ತೊಡಗಿದ್ದಾನೆ. ಮೈಸೂರು ರಸ್ತೆಯಲ್ಲಿ ಹೊರಟ ಇಬ್ಬರು ಶಿವನ ಹಳ್ಳಿಯ ವೆಂಕಟಗಿರಿ ಬಾರ್‌ನಲ್ಲಿ ಎಣ್ಣೆ ಖರೀದಿಸುತ್ತಾರೆ. ಮೋಹನ್ ಕಾರ್‌ನಲ್ಲಿ ಕುಳಿತು ಎಣ್ಣೆ ಹೊಡೆಯುತ್ತಾ ಜೂಮ್‌ನಲ್ಲಿ ತೇಲುತ್ತಿರುತ್ತಾನೆ. 25 ಕಿ.ಮೀ. ಕ್ರಮಿಸುತ್ತಿದ್ದಂತೆ ಕಾರು ಬೈಕ್ ಒಂದಕ್ಕೆ ಟಚ್ ಆಗಿದೆ. ಕಾರಿನ ಸೈಡ್ ಮಿರರ್ ತರಚಿರುತ್ತದೆ. ಇದರಿಂದ ಕೋಪಗೊಂಡ ಮೋಹನ್ ಸಂತೋಷ್‌ನನ್ನು ಹಿಗ್ಗಾಮುಗ್ಗ ಬಯ್ಯುತ್ತಾನೆ. ಸಂತೋಷ್ ಸದ್ದಿಲ್ಲದೆ ಕಾರು ಚಾಲನೆ ಮಾಡುತ್ತಾ ಮೋಹನ್‌ನನ್ನು ಎಲ್ಲಿ ಹೋಗುವುದು ಎಂದು ಕೇಳುತ್ತಾನೆ.



ಪಿಎಸ್‌ಐ ಸುಪ್ರೀತ್



ಪಿಎಸ್‌ಐ (ಕ್ರೈಂ) ಚೆಲುವರಾಜು


☞ 4

# ಹೆಣವಾದ ದಾಸರಹಳ್ಳಿ ಬಡ್ಡಿ ಮೋಹನ್!

3 ☞

ಚನ್ನಪಟ್ಟಣದ ಕಡೆ ನಡೆ ಎಂದು ಹೇಳುವ ಮೋಹನ್ ಬರುತ್ತಾ ಬರುತ್ತಾ ಮಹದೇಶ್ವರ ಬೆಟ್ಟದ ಕಡೆ ಹೋಗುವ ವ್ಯಕ್ತಪಡಿಸುತ್ತಾನೆ. ಆದರೆ ಅಲ್ಲಿ ಇಲ್ಲಿ ಸುತ್ತಾಡಿ ಎಣ್ಣೆಯ ಮತ್ತಿನಲ್ಲಿ ತೇಲುತ್ತಿದ್ದವರಿಗೆ ಹೊತ್ತು ಹೋಗುವುದೇ ತಿಳಿಯದೆ ಹಲಗೂರಿಗೆ ಬರುವವರೆಗೆ ರಾತ್ರಿ ಆಗುತ್ತದೆ. ಅಂದು ರಾತ್ರಿ ಅಲ್ಲಿಯೇ ತಂಗುತ್ತಾರೆ. ಅಲ್ಲಿ ವಿಶ್ರಾಂತಿ ಪಡೆದು 19ರಂದು ಬೆಳಗಿನ ಜಾವ ಎದ್ದು 6-00 ಗಂಟೆಗೆ ಶಿವನಸಮುದ್ರಕ್ಕೆ ಬರುತ್ತಾರೆ. ಇಲ್ಲಿ ಕುಡಿದು ತಿಂದು ಜಾಲಿಯಾಗಿ ಸುತ್ತಾಡಿಕೊಂಡು ನಂತರ ರಾತ್ರಿಯಾಗಿದ್ದರಿಂದ ಶಿವನಸಮುದ್ರ ದರ್ಗಾದ ಬಳಿ ಶೆಡ್ ಒಂದರಲ್ಲಿ ತಂಗಿದ್ದು ಎಣ್ಣೆ ಹೊಡೆದು ಮಲಗುತ್ತಾರೆ. ಅಂದು ರಾತ್ರಿ ಪೂರ ಕುಡಿದ ಅಮಲಿನಲ್ಲಿ ಮೋಹನ್ ಸಂತೋಷ್‌ನನ್ನು ಬಹಳ ತುಚ್ಚ ತುಚ್ಚ ಬೈಯುತ್ತಿರುತ್ತಾನೆ. ಆದರೂ ಸಂತೋಷ್ ತಿರುಗಿ ಬಿದ್ದರೆ ಮೋಹನ್ ನಾನು ಕೇಳಿರುವ ಒಂದು ಲಕ್ಷ ಸಾಲ ಕೊಡದೆ ಹೋಗುತ್ತಾನೆ ಎಂಬ ಭಯದಲ್ಲಿ ಯಾವುದೇ ಮಾತನಾಡದೆ ತೆಪ್ಪಗಿರುತ್ತಾನೆ.

ಎಣ್ಣೆಯ ಭರದಲ್ಲಿ ಮೋಹನ್ ಮೂರು ದಿನಗಳಿಂದ ಸರಿಯಾಗಿ ಊಟ ಮಾಡಿರುವುದಿಲ್ಲ. ಆದ್ದರಿಂದ ಹೊಟ್ಟೆ ಹಸಿಯಲು ಶುರುವಾಗುತ್ತದೆ.




ಘಟನಾ ಸ್ಥಳದಲ್ಲಿ ಶೋಕೂ ತಂಡ ಹಾಗೂ ಶ್ವಾನದಳದವರು

ಸಂತೋಷ್ ಹೊಟ್ಟೆ ಹಸಿಯುತ್ತಿದೆ ಎಲ್ಲಿಯಾದರೂ ಹೋಗೋಣ ನಡೆ ಎನ್ನುತ್ತಾನೆ. ಕೂಡಲೇ ಇಬ್ಬರೂ ಕಾರು ಏರಿ ಹೊರಡುತ್ತಾರೆ. ಕೊಳ್ಳೇಗಾಲಕ್ಕೆ ಹೋಗುವ ಬದಲು ಕಾರು ಮಳವಳ್ಳಿಯ ಕಡೆ ತಿರುಗುತ್ತದೆ. ಅಲ್ಲಿಂದ ಕೆ.ಎಂ. ದೊಡ್ಡಿಯಿಂದ ಮುಂದೆ ಸಾಗಿ ಮದ್ದೂರು ತಲುಪುತ್ತಿದ್ದಂತೆ ಉಚ್ಚೆ ಮಾಡಲು ಕಾರು ಸೈಡಿಗೆ ಹಾಕುವಂತೆ ಸೂಚಿಸುತ್ತಾನೆ. ಅದಾಗಲೇ ಕಾರಿನ ಬ್ಯಾಟರಿ ಡೌನ್ ಆಗಿದ್ದರಿಂದ ಕಾರು ಮತ್ತೆ ಸ್ಟಾರ್ಟ್ ಆಗುವುದಿಲ್ಲ. ಅಲ್ಲಿಯೂ ಮೋಹನ್ ಸರಿಯಾಗಿ ನೀನು ಕಾರನ್ನು ಓಡಿಸಲ್ಲ, ಬ್ಯಾಟರಿ ಚೆಕ್ ಮಾಡಿಕೊಂಡಿಲ್ಲ. ಈಗ ಬ್ಯಾಟರಿ ಕೆಟ್ಟು ನಿಂತಿದೆ ಎಂದು ಮೋಹನ್‌ನನ್ನು ಕೆಟ್ಟದಾಗಿ ಬೈಯುತ್ತಿದ್ದ. ಈ ವೇಳೆ ಹೆದ್ದಾರಿ ಗಸ್ತಿನ ವಾಹನ 112 ಪೊಲೀಸರು ಬಂದು ವಾಹನವನ್ನು ಏಕೆ ನಿಲ್ಲಿಸಿದ್ದೀರಾ ಎಂದು ಕೇಳುತ್ತಾರೆ ಬ್ಯಾಟರಿ ಡೌನ್ ಆಗಿದೆ ಎಂದು ಹೇಳಿದ ಕೂಡಲೇ ಪೊಲೀಸರು ಪಕ್ಕದ ಬ್ಯಾಟರಿ ಶಾಪ್‌ಗೆ ಫೋನ್ ಮಾಡಿ ಕರೆಸುತ್ತಾರೆ. ಬ್ಯಾಟರಿ ಚಾರ್ಜ್ ಮಾಡಿದ ಮೆಕಾನಿಕ್‌ಗೆ ಸ್ಥಳದಲ್ಲೇ 2 ಸಾವಿರ ರೂಪಾಯಿ ಫೋನ್ ಪೇ ಮಾಡುತ್ತಾನೆ.

ಮತ್ತೆ ಅಲ್ಲಿಂದ ಹೊರಟು ರಾತ್ರಿಯೆಲ್ಲ ಅಲ್ಲಿ ಇಲ್ಲಿ ನಿಲ್ಲಿಸಿಕೊಂಡು ಸಿಕ್ಕ ಸಿಕ್ಕ ಕಡೆ ಎಣ್ಣೆ ಹೊಡೆಯುತ್ತಾ ಸೆಪ್ಟಂಬರ್ 20ರಂದು ಸಂಜೆ 6.00 ಗಂಟೆಗೆಲ್ಲ ಮತ್ತೆ ಸತ್ತೇಗಾಲಕ್ಕೆ ಬರುತ್ತಾರೆ. ಅಲ್ಲಿನ ಬಾರ್‌ನಲ್ಲಿ ಎಣ್ಣೆ ಖರೀದಿಸಿ ಮತ್ತೆ ದರ್ಗಾದ ಬಳಿ ಇರುವ ಶೆಡ್‌ಗೆ ಹೋಗಿ ಸೇರುತ್ತಾರೆ. ಅಲ್ಲಿ ಚಾಪೆ ಹಾಕಿಕೊಂಡು ಎಣ್ಣೆ ಏರಿಸಲು ಶುರು ಮಾಡುತ್ತಾರೆ. ಈ ವೇಳೆ ಸಂತೋಷ್ ಮೋಹನ್‌ನ ಬಳಿ 1 ಲಕ್ಷ ರೂ. ಹಣ ಕೇಳಿದ್ದರಿಂದ ಅಂದೂ ಸಹ ಹಣ ಕೊಡುವಂತೆ ಕೇಳುತ್ತಾನೆ. ಅದನ್ನೇ ನೆಪವಾಗಿ ಇಟ್ಟುಕೊಂಡು ಎಣ್ಣೆ ಹೊಟ್ಟೆಗೆ ಇಳಿಯುತ್ತಿದ್ದಂತೆ ಮತ್ತೆ ಸಂತೋಷ್ ಮೋಹನ್‌ನನ್ನು ಬೈಯ್ಯಲು ಶುರು ಮಾಡುತ್ತಾನೆ. ಆದರೆ ಈ ವೇಳೆ ಮೋಹನ್ ಬೈಯ್ಯೋದು ಬಹಳ ಅತಿರೇಖಕ್ಕೆ ತಿರುಗುತ್ತದೆ. ಸಂತೋಷ್‌ನ ಹೆಂಡತಿ ಹಾಗೂ ತಾಯಿಯ ಮೇಲೆ ತುಚ್ಚವಾಗಿ ಬೈಯುತ್ತಿರುತ್ತಾನೆ. ನಿನ್ನ ಹೆಂಡತಿಯನ್ನು ಕಳುಹಿಸು ಎಷ್ಟು ನಿನ್ನ ಹೆಂಡತಿಯ ರೇಟು ನಿನ್ನ ತಾಯಿಯನ್ನು ಕಳುಹಿಸು ಎಂದು ನಿಯಂತ್ರಣ ಕಳೆದುಕೊಂಡು ಇನ್ನೂ ತುಚ್ಚವಾಗಿ ಬೈಯುತ್ತಿರುತ್ತಾನೆ.

ಆದರೆ ಸಾಕಷ್ಟು ದಿನಗಳಿಂದ ಇವನ ವಿಕೃತ ಮನಸ್ಸಿನ ತುಚ್ಚ ಬೈಗುಳಗಳಿಂದ ಬೇಸತ್ತಿದ್ದ ಸಂತೋಷ್ ಅಂದು ತಿರುಗಿಬಿದ್ದು ಜಾಡಿಸಿ ಒದೆಯುತ್ತಾನೆ. ಇದರಿಂದ ಕುಪಿತಗೊಂಡ ಮೋಹನ್ ಸಂತೋಷ್ ಕುತ್ತಿಗೆ ಪಟ್ಟಿ ಹಿಡಿದು ಒಡೆಯಲು ಮುಂದಾಗುತ್ತಾನೆ. ಮೋಹನ್‌ನಿಂದ ರೂ. 1,00,000 ನಿರೀಕ್ಷೆಯಲ್ಲಿದ್ದ ಸಂತೋಷ್ ತಾಳ್ಮೆ ಕಳೆದುಕೊಂಡು ಮೋಹನ್‌ನನ್ನು ಕೆಳಗಡೆ ಕೆಡವಿಕೊಂಡು ಎದೆಯ ಮೇಲೆ ಬಲವಾಗಿ ತುಳಿಯುತ್ತಾನೆ. ಆದರೆ ಮೋಹನ್ ಸರಿಯಾಗಿ ಊಟ ತಿಂಡಿ ಮಾಡದೆ ಸೊರಗಿ ಕೃಷವಾಗಿದ್ದರಿಂದ ಈತನ ಬಲವಾದ ಹೊಡೆತ ತಳಲಾರದೆ ಅಲ್ಲಿಯೇ ಪ್ರಾಣ ಬಿಡುತ್ತಾನೆ. ಇದರಿಂದ ಒಂದು ಕ್ಷಣ ಗಾಬರಿಯಾದ ಸಂತೋಷ್ ಮೋಹನ್ ಶವವನ್ನು ಕಾರಿನ ಹಿಂಬದಿಯ ಸೀಟಿಗೆ ಎತ್ತಿ ಹಾಕಿಕೊಂಡು ಕಾರು ಚಾಲನೆ ಮಾಡುತ್ತಾ ಬರಚುಕ್ಕಿ ಜಲಪಾತದ ಕಡೆಗೆ ಹೋಗುತ್ತಾನೆ. ಅಲ್ಲಿ ಅರಣ್ಯ ಇಲಾಖೆಯವರು ಚೆಕ್‌ಪೋಸ್ಟ್ ಗೇಟ್ ಹಾಕಿದ್ದರಿಂದ ಸದ್ದಿಲ್ಲದೇ ವಾಪಸ್ ಬರುತ್ತಾನೆ. ವಾಪಸ್ ಬಂದು ಸಂತೋಷ್ ಶವವನ್ನು ಕಾರಿನಲ್ಲಿ ಇಟ್ಟುಕೊಂಡು ಅಲ್ಲಿ ಇಲ್ಲಿ ಸುತ್ತಾಡಿ ಕೊನೆಗೆ ಸತ್ತೇಗಾಲ ಹ್ಯಾಂಡ್ ಪೋಸ್ಟ್‌ನಲ್ಲಿರುವ ಕಾವೇರಿ ಹೋಟೆಲ್ ಮುಂದೆ ಕಾರು ನಿಲ್ಲಿಸಿ ಕೆಎಸ್‌ಆರ್‌ಟಿ ಸಿ ಬಸ್ ಏರಿ ಸದ್ದಿಲ್ಲದೆ ಬೆಂಗಳೂರು ಸೇರಿಕೊಳ್ಳುತ್ತಾನೆ.

ಇತ್ತ ಮಾರನೆಯ ದಿನ ಸೆಪ್ಟಂಬರ್ 21 ರಂದು ಶನಿವಾರ ಹೋಟೆಲ್ ಮುಂದೆ ಕಾರು ನಿಂತಿರುವುದನ್ನು ಗಮನಿಸಿದ ಸ್ಥಳೀಯರು ಯಾರೋ ಪ್ರವಾಸಿಗರು ಕಾರನ್ನು ಇಲ್ಲಿ ನಿಲ್ಲಿಸಿ ಹೋಗಿರಬಹುದು ಎಂದು ಕೊಂಡಿದ್ದರು. ಆದರೆ ಸಂಜೆ ಕಾರಿನ ಒಳಗಿಂದ ದುರ್ವಾಸನೆ ಬರುತ್ತಿದ್ದನ್ನು ಗಮನಿಸಿದ ಸಾರ್ವಜನಿಕರು ಅನುಮಾನ ವ್ಯಕ್ತಪಡಿಸಿ ಕಾರಿನ ಬಳಿ ಬಂದು ಇಣುಕಿ ನೋಡಿದ್ದಾರೆ. ಕಾರಿನೊಳಗೆ ಹಿಂಬದಿಯ ಸೀಟಿನಲ್ಲಿ ವ್ಯಕ್ತಿ ಯೋರ್ವ ಮಲಗಿರುವುದು ಕಂಡಿದೆ. ಕಾರಿನೊಳಗೆ ದುರ್ವಾಸನೆ ಬರುತ್ತಿರುವುದರಿಂದ ವ್ಯಕ್ತಿ ಮೃತಪಟ್ಟಿರಬಹುದು ಎಂದು ಅನುಮಾನಗೊಂಡಿದ್ದಾರೆ. ನಂತರ ಹೋಟೆಲ್ ಮಾಲೀಕ ರವಿಶಂಕರ್‌ರವರು ದೂರವಾಣಿ ಕರೆ ಮಾಡಿ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರಿಗೆ ವಿಚಾರ ಮುಟ್ಟಿಸಿದ್ದಾರೆ.

ಮಾಹಿತಿ ತಿಳಿದು ಸಂಜೆ 4 ಗಂಟೆಗೆ ಸ್ಥಳಕ್ಕೆ ಆಗಮಿಸಿದ ಕೊಳ್ಳೇಗಾಲ ವೃತ್ತ ನಿರೀಕ್ಷಕ ಶಿವಮಾದಯ್ಯ ಹಾಗೂ ಗ್ರಾಮಾಂತರ ಠಾಣೆ ಪಿಎಸ್‌ಐ ಸುಪ್ರೀತ್‌ರವರು ತಮ್ಮ ಸಿಬ್ಬಂದಿಗಳೊಡನೆ ಪರಿಶೀಲನೆ ನಡೆಸಿದಾಗ ಕಾರಿನಲ್ಲಿ ವ್ಯಕ್ತಿಯೋರ್ವರು ಹಿಂಬದಿಯ ಸೀಟಿನಲ್ಲಿ ಸತ್ತು ಮಲಗಿರುವುದು ಕಂಡು ಬರುತ್ತದೆ. ಕೂಡಲೇ ಸ್ಥಳಕ್ಕೆ ಶೋಕೂ ತಂಡ ಹಾಗೂ ಶ್ವಾನದಳವನ್ನು ಕರೆಸಿಕೊಂಡು ಪರಿಶೀಲನೆ ನಡೆಸುತ್ತಾರೆ. ಆದರೆ ಯಾವುದೇ ಸುಳಿವು ದೊರಕುವುದಿಲ್ಲ.

ನಂತರ ಮೃತದೇಹದ ವಾರಸುದಾರರ ಪತ್ತೆಗೆ ಇಳಿದ ಕೊಳ್ಳೇಗಾಲ ಪೊಲೀಸರಿಗೆ ಮೃತ ವ್ಯಕ್ತಿ ಬೆಂಗಳೂರಿನ ಅಗ್ರಹಾರ ದಾಸರಹಳ್ಳಿಯ ಮೋಹನ್ ಎಂಬ ಮಾಹಿತಿ ಲಭ್ಯವಾಗುತ್ತದೆ. ನಂತರ ಅವರ ಸಂಬಂಧಿಕರನ್ನು ಸಂಪರ್ಕಿಸಲಾಗಿ ಮೃತ ಮೋಹನ್ ಹೆಂಡತಿ ಬಿಟ್ಟ ನಂತರ ಮತ್ತೊಂದು ವಿವಾಹಕ್ಕೆ ಹುಡುಗಿ ನೋಡುತ್ತಿದ್ದ.



ಕೊಲೆಯಾದ ಮೋಹನ್

ಅದಕ್ಕಾಗಿ ಆಗಾಗ ದೇವಾಲಯಗಳಿಗೆ ಭೇಟಿ ನೀಡುತ್ತಿದ್ದರು ಎಂಬುದು ತಿಳಿದು ಬಂದಿದೆ. ವಾರಸುದಾರರಿಗೆ ವಿಚಾರ ಮುಟ್ಟಿಸಿದ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಶವವನ್ನು ಕೊಳ್ಳೇಗಾಲ ಉಪ ವಿಭಾಗ ಆಸ್ಪತ್ರೆಯ ವೈದ್ಯರಿಂದ ಪರೀಕ್ಷೆ ನಡೆಸಿ ವಾರಸುದಾರರಿಗೆ ನೀಡುತ್ತಾರೆ. ವಾರಸುದಾರರಿಗೆ ಶವ ಹಸ್ತಂತರಿಸಿದ ಪೊಲೀಸರಿಗೆ ಈ ಪ್ರಕರಣ ಭೇದಿಸುವುದು ಸುಲಭವಾಗಿರಲಿಲ್ಲ ಏಕೆಂದರೆ ಆರೋಪಿ ಮೊಬೈಲ್ ಬಳಸುತ್ತಿರಲಿಲ್ಲ. ಘಟನೆಗೆ ಸಂಬಂಧಿಸಿದಂತೆ ಯಾವುದೇ ಸುಳಿವು ಬಿಟ್ಟಿರಲಿಲ್ಲ. ಅಂದು ಪೊಲೀಸರು ಸ್ಥಳಕ್ಕೆ ಶೋಕೂ ತಂಡ ಹಾಗೂ ಶ್ವಾನದಳವನ್ನು ಕರೆಸಿಕೊಂಡು ಪರಿಶೀಲನೆ ನಡೆಸುತ್ತಾರೆ. ಆದರೆ ಯಾವುದೇ ಸುಳಿವು ದೊರಕುವುದಿಲ್ಲ. ಇದು ಪ್ರಕರಣವನ್ನು ಭೇದಿಸಬೇಕಾದ ಪೊಲೀಸರಿಗೆ ತಲೆ ನೋವಾಗಿ ಪರಿಣಮಿಸಿತ್ತು. ಆದರೂ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಸುಮ್ಮನೆ ಕೂರಲಿಲ್ಲ.


ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತ, ಡಿವೈಎಸ್ಪಿ ಧರ್ಮೇಂದ್ರ, ಸಿಪಿಐ ಶಿವಮಾದಯ್ಯರವರ ನೇತೃತ್ವದಲ್ಲಿ ಪ್ರಕರಣ ಭೇದಿಸಲು ಮುಂದಾದ ಗ್ರಾಮಾಂತರ ಠಾಣೆಯ ಪಿಎಸ್‌ಐ ಸುಪ್ರೀತ್ ಮೊದಲು ಹ್ಯಾಂಡ್ ಪೋಸ್ಟ್‌ನಲ್ಲಿರುವ ಔಟ್‌ಪೋಸ್ಟ್ ಪೊಲೀಸ್ ಠಾಣೆಯ ಸಿಸಿಟಿವಿ ಫುಟೇಜ್‌ಗಳನ್ನು ತೆರೆದು ಪರಿಶೀಲನೆ ನಡೆಸಿದ್ದಾರೆ. ಅಲ್ಲಿ ಬಿಳಿ ಶರ್ಟ್ ಹಾಗೂ ಬಿಳಿ ಪಂಚೆ ಧರಿಸಿ ಧರಿಸಿದ ವ್ಯಕ್ತಿಯೊಬ್ಬ ಅನುಮಾನಸ್ಪದವಾಗಿ ತಿರುಗಾಡುತ್ತಿರುವುದು ರೆಕಾರ್ಡ್ ಆಗಿರುತ್ತದೆ. ಹಾಗೆ ಕಾವೇರಿ ಹೋಟೆಲ್‌ನಲ್ಲಿ ಇದ್ದ ಸಿಸಿ ಕ್ಯಾಮರಾದಲ್ಲಿ ಚೌಕಳಿ ಶರ್ಟ್ ಧರಿಸಿದ್ದ ವ್ಯಕ್ತಿ ಒಬ್ಬ ಕಾರಣ ನಿಲ್ಲಿಸಿ ಬೆಂಗಳೂರು ಕಡೆಗೆ ತಿರುಳುವ ಕೆಎಸ್‌ಆರ್‌ಟಿಸಿ ಬಸ್ಸು ಏರಿ ಹೋಗುತ್ತಿರುವುದು ದಾಖಲಾಗಿತ್ತು. ಈ ಎರಡು ಸಿಸಿಟಿವಿ ಫುಟೇಜ್‌ಗಳನ್ನು ಮೃತನ ಸಹೋದರ ಶರತ್ ಗೆ ತೋರಿಸಲಾಗಿ ಸಿಸಿಟಿವಿಯಲ್ಲಿ ದಾಖಲಾಗಿರುವ ವ್ಯಕ್ತಿ ಸಂತೋಷ್ ಎಂದು ಗುರುತಿಸಿದ್ದ. ಹಾಗೆಯೇ ಶವ ಪರೀಕ್ಷೆಯ ವೈದ್ಯಕೀಯ ದೃಢೀಕರಣ ಪತ್ರದಲ್ಲಿ ಪಕ್ಕೆಲುಬಿನ ಮೂರು ಮೂಳೆಗಳಿಗೆ ಪೆಟ್ಟು ಬಿದ್ದಿರುವುದಾಗಿ ವೈದ್ಯರು ದಾಖಲಿಸಿದ್ದರು.

ಇತ್ತ ಬೆಂಗಳೂರು ಸೇರಿದ ಸಂತೋಷ್ ಸುಮ್ಮನೆ ಇರಲಿಲ್ಲ. ತನ್ನ ಸ್ನೇಹಿತ ಹಾಗೂ ಮೃತನ ಸಹೋದರ ಶರತ್ ಹಾಗೂ ಸ್ನೇಹಿತರ ಜೊತೆ ಒಬ್ಬೊಬ್ಬರ ಬಳಿ ಒಂದೊಂದು ರೀತಿಯ ಮಾತನಾಡಿರುತ್ತಾನೆ. ಒಬ್ಬನ ಜೊತೆ ಹುಲಿಯೂರುದುರ್ಗದ ಕಡೆ ಹೋಗಿದ್ದೆವು ಎಂದರೆ, ಇನ್ನೊಬ್ಬನ ಬಳಿ ಮದ್ದೂರು ಕಡೆ ಹೋಗಿದ್ದೆವು ಎನ್ನುತ್ತಾನೆ. ಮೃತನ ಸಹೋದರ ಶರತ್‌ನೊಡನೆ ಶಿಂಸದ ಕಡೆಗೆ ಹೋಗಿದ್ದೆವು ನಿಮ್ಮ ಅಣ್ಣ ಮಾರ್ಗ ಮಧ್ಯೆ ಬಿಟ್ಟುಹೋದ. ನಾನು ಬಸ್‌ನಲ್ಲಿ ಬಂದೆ ಎಂದು ಹೇಳಿಕೊಂಡಿರುತ್ತಾನೆ. ಇದರಿಂದ ಅನುಮಾನಗೊಂಡ ಶರತ್ ಸಂತೋಷ್‌ನ ಮೇಲೆ ಅನುಮಾನ ವ್ಯಕ್ತಪಡಿಸಿ ಪೊಲೀಸರೊಡನೆ ಸಂತೋಷನನ್ನು ಕರೆದು ವಿಚಾರಣೆ ನಡೆಸಿ ಈತ ಒಂದೊಂದು ಕಡೆ ಒಂದೊಂದು ರೀತಿ ಹೇಳಿಕೊಂಡು ತಿರುಗುತ್ತಿದ್ದಾನೆ ಎಂದು ಸುಳಿವು ನೀಡುತ್ತಾನೆ.

ಶರತ್ ಮಾಹಿತಿಯಿಂದ ಎಚ್ಚೆತ್ತ ಪೊಲೀಸರು ಕೂಡಲೇ ಸಂತೋಷ್‌ನನ್ನ ಠಾಣೆಗೆ ಕರೆತಂದು ವಿಚಾರಣೆ ನಡೆಸುವ ನಿರ್ಧಾರ ಮಾಡುತ್ತಾರೆ. ಅದಕ್ಕಾಗಿ ಸಂತೋಷ್ ಎಲ್ಲಿ ಸಿಗುತ್ತಾನೆ ಎಂದು ಪೊಲೀಸರು ಶರತ್‌ನನ್ನೆ ಕೇಳುತ್ತಾರೆ. ಅದಕ್ಕೆ ಶರತ್ ಅವನು ಮಾಮೂಲಿ ಪ್ರತಿದಿನ ಮುಂಜಾನೆ 5.30 ಕ್ಕೆ ದಾಸರಹಳ್ಳಿ ಜಂಕ್ಷನ್ ಬಳಿ ಬರುತ್ತಾನೆ ಎಂದು ಮಾಹಿತಿ ನೀಡುತ್ತಾನೆ.

ಕೂಡಲೇ ಪ್ರವೃತ್ತರಾದ ಗ್ರಾಮಾಂತರ ಪೊಲೀಸ್ ಠಾಣೆ ಪಿಎಸ್‌ಐ ಸುಪ್ರೀತ್‌ರವರು ತಮ್ಮ ಸಿಬ್ಬಂದಿಗಳಾದ ಎಎಸ್‌ಐ ಮಧುಕುಮಾರ್, ಪೇದೆಗಳಾದ ಪುನೀತ್ ಚೌಹಾನ್ ಹಾಗೂ ಶಿವಕುಮಾರ್ ಅವರನ್ನು ಬೆಂಗಳೂರಿಗೆ ಕಳುಹಿಸುತ್ತಾರೆ. ಅಲ್ಲಿ ಬೆಳಗಿನ ಜಾವ ಐದು ಗಂಟೆಗೆಲ್ಲ ದಾಸರಹಳ್ಳಿ ಜಂಕ್ಷನ್ ಬಳಿ ಕಾಯ್ದು ನಿಲ್ಲುವ ಈ ತಂಡ ಸಂತೋಷ್ ಬಂದ ಕೂಡಲೇ ಆತನನ್ನು ವಶಕ್ಕೆ ಪಡೆದು ಠಾಣೆಗೆ ಕರೆತರುತ್ತಾರೆ. ಪಿಎಸ್‌ಐ ಸುಪ್ರೀತ್ ಆರೋಪಿಯನ್ನು ಪೊಲೀಸ್ ಭಾಷೆಯಲ್ಲಿ ಮಾತನಾಡಿಸಿದಾಗ ಕೊಲೆ ಮಾಡಿದ ವಿಚಾರವನ್ನೆಲ್ಲ ಬಾಯಿ ಬಿಟ್ಟಿದ್ದಾನೆ.

ಆರೋಪಿ ಸಂತೋಷ್ ಮೋಹನನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡ ಬಳಿಕ ಕೊಳ್ಳೇಗಾಲ ವೃತ್ತ ನಿರೀಕ್ಷಕ ಶಿವಮಾದಯ್ಯರವರ ಮುಂದೆ ಕರೆತಂದು ನಿಲ್ಲಿಸುತ್ತಾರೆ. ಆರೋಪಿಯನ್ನು ವಶಕ್ಕೆ ಪಡೆದ ಶಿವಮಾದಯ್ಯರವರು ವಿಚಾರಣೆ ನಡೆಸಿದ ಬಳಿಕ ನ್ಯಾಯಾಧೀಶರಿಗೆ ಒಪ್ಪಿಸಿ ಜೈಲು ಸೇರಿಸಿ ಪ್ರಕರಣದ ತನಿಖೆ ಮುಂದುವರಿಸಿದ್ದಾರೆ.




# ಮಾಲೂರು : ಹಿಟ್ ಅಂಡ್ ರನ್ ಆಕ್ಸಿಡೆಂಟ್ ಎಂದು ಬಿಂಬಿಸಿ ಮಹಿಳೆ ಹತ್ಯೆ ಮಾಡಿದ್ದ ರಿಯಲ್ ಎಸ್ಟೇಟ್ ಉದ್ಯಮಿ ಅರೆಸ್ಟ್!


ಪ್ರಮುಖ ಆರೋಪಿ ತಿಮ್ಮೇಗೌಡ

**ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬ ಕೃಷಿಕನೊಬ್ಬನಿಗೆ ಸೇರಿದ ಜಮೀನನ್ನು 1 ಕೋಟಿಗೆ ಮಾರಾಟ ಮಾಡಿಸಿ, ಅವರಿಂದ 35 ಲಕ್ಷ ಹಣವನ್ನು ಸಾಲವಾಗಿ ಪಡೆದಿದ್ದರು. ಇದರ ಜೊತೆಗೆ ಕೃಷಿಕನ ಪತ್ನಿಯಿಂದ 7 ಲಕ್ಷ ಹಣವನ್ನು ಕೆಲ ದಿನಗಳ ಮಟ್ಟಿಗೆ ಕೈ ಬದಲಿಗೆಂದು ಸಾಲವಾಗಿ ಪಡೆದಿದ್ದ ಹಣವನ್ನು ತಿಂಗಳಾದರೂ ವಾಪಸ್ಸು ಕೊಡದೆ ಇದ್ದಾಗ ಹಣಕ್ಕಾಗಿ ಡಿಮ್ಯಾಂಡ್ ಮಾಡಿದಳು. ಈಕೆ ನೀಡುತ್ತಿದ್ದ ಟಾರ್ಚರನ್ನು ತಡೆಯಲಾಗದೆ ರಿಯಲ್ ಎಸ್ಟೇಟ್ ಉದ್ಯಮಿ ತನ್ನ ಸಹಚರನೊಂದಿಗೆ ಸೇರಿ ಪ್ಲಾನ್ ಮಾಡಿ, ಗಣೇಶ ಹಬ್ಬದ ಸಾಮಾನುಗಳನ್ನು ತೆಗೆದುಕೊಂಡು ಊರಿಗೆ ಹೊರಟಿದ್ದ ಸಾಲ ಕೊಟ್ಟಿದ್ದ ಮಹಿಳೆಗೆ ಸಾಲದ ಹಣವನ್ನು ಕೊಟ್ಟು ಊರಿಗೆ ಬಿಡುವುದಾಗಿ ನಂಬಿಸಿ ಕಾರಿನಲ್ಲಿ ಕರೆದುಕೊಂಡು ಹೋಗುವಾಗ ಕತ್ತು ಹಿಸುಕಿ ಕೊಲೆ ಮಾಡಿ, ಹಿಟ್ ಅಂಡ್ ರನ್ ಆಕ್ಸಿಡೆಂಟ್ ಎಂದು ಬಿಂಬಿಸಲು ಮಹಿಳೆಯ ಶವವನ್ನು ರಸ್ತೆಬದಿ ಬಿಸಾಡಿ, ಪರಾರಿಯಾಗಿದ್ದ ಇಬ್ಬರು ಖತರ್‌ನಾಕ್ ಆರೋಪಿಗಳನ್ನು ಮಾಲೂರು ಪೊಲೀಸರು ಬಂಧಿಸಿ ಜೈಲಿನಲ್ಲಿ ಮುದ್ದೆ ಮುರಿಯುವಂತೆ ಮಾಡಿದ್ದಾರೆ.**


ಕೊಲೆಯಾದ ಲಕ್ಷ್ಮಿ

**ಕೋಲಾರ** ಜಿಲ್ಲೆ, ಮಾಲೂರು ತಾಲ್ಲೂಕಿನ ನಂಬಿಗಾನಹಳ್ಳಿ ಗ್ರಾಮದ ಕೃಷಿಕ ಹಾಗೂ ಜಮೀನು ವ್ಯವಹಾರ ಮಾಡುತ್ತಿದ್ದ ಆನಂದ್‌ಕುಮಾರ್ ಮತ್ತು ಈತನ ಪತ್ನಿ ಲಕ್ಷ್ಮಿ ಇವರಿಗೆ ಇಬ್ಬರು ಮಕ್ಕಳಿರುತ್ತಾರೆ. ಆನಂದ್‌ಕುಮಾರ್ ಕೃಷಿಕನಾಗಿ ವ್ಯವಸಾಯ ಮಾಡುವುದರ ಜೊತೆಗೆ ಜಮೀನು, ಸೈಟ್ ಮತ್ತು ಮನೆಗಳನ್ನು ಮಾರಾಟ ಮಾಡಿಸುವ ಕೆಲಸ ಮಾಡುತ್ತಿದ್ದರು. ಬರುವ ಆದಾಯದಲ್ಲಿ ಆನಂದ್‌ಕುಮಾರ್ ತನ್ನ ಕುಟುಂಬದೊಂದಿಗೆ ಸುಖವಾಗಿ ಜೀವನ ಮಾಡಿಕೊಂಡಿದ್ದರು. ರಾಮನಗರ ಜಿಲ್ಲೆ, ಸಾತನೂರು ಗ್ರಾಮದ ಕೆಮ್ಮೋಳಿಯ ವಾಸಿ ರಿಯಲ್ ಎಸ್ಟೇಟ್ ಉದ್ಯಮಿ ತಿಮ್ಮೇಗೌಡ ಎನ್ನುವವರು ಕಡಿಮೆ ಬೆಲೆಗೆ


ಎಸ್ಪಿ ನಿಖಿಲ್


ಎಎಸ್ಪಿ ರವಿಶಂಕರ್

ಭೂಮಿ, ಸೈಟ್‌ಗಳನ್ನು ತೆಗೆದುಕೊಂಡು ಅವುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದು, ಜೊತೆಗೆ ಜಮೀನುಗಳನ್ನು ಗುತ್ತಿಗೆಗೆ ತೆಗೆದುಕೊಂಡು ಅದನ್ನು ವ್ಯವಸಾಯ ಮಾಡಲು ಬೇರೆಯವರಿಗೆ ಪಾಲುದಾರಿಕೆಯಾಗಿ ಕೊಡುತ್ತಿದ್ದರು. ಕಳೆದ ಎರಡು ವರ್ಷಗಳ ಹಿಂದೆ ತಿಮ್ಮೇಗೌಡ ಕೆಮ್ಮೋಳಿಯನ್ನು ಬಿಟ್ಟು ಮಾಲೂರು ಸಮೀಪ ಜಮೀನೊಂದನ್ನು ತೆಗೆದುಕೊಂಡು ಅದರಲ್ಲಿ ವ್ಯವಸಾಯ ಮಾಡುವುದರ ಜೊತೆಗೆ ಅಲ್ಲಿಯೇ ಮನೆ ಕಟ್ಟಿಕೊಂಡು ಹೆಂಡತಿ ಲೀಲಾ ಮತ್ತು ಇಬ್ಬರು ಮಕ್ಕಳೊಂದಿಗೆ ವಾಸವಾಗಿದ್ದರು. ರಿಯಲ್ ಎಸ್ಟೇಟ್ ಉದ್ಯಮಿ ತಿಮ್ಮೇಗೌಡ ಹುಂಗೇನಹಳ್ಳಿ ಸುತ್ತಮುತ್ತ ಜಮೀನುಗಳ ಮಾರಾಟದ ಸಂದರ್ಭದಲ್ಲಿ ನಂಬಿಗಾನಹಳ್ಳಿಯ ಆನಂದ್‌ಕುಮಾರ್ ಪರಿಚಯವಾಗಿ ಮುಂದೆ ಹೋಗುತ್ತಿದ್ದಂತೆ ಒಳ್ಳೆಯ ಸ್ನೇಹಿತರಾಗಿದ್ದರು. ಇಬ್ಬರು ಒಟ್ಟಿಗೆ ಒಂದೆರಡು ಜಮೀನುಗಳ ವ್ಯವಹಾರ ಮಾಡಿ ಒಂದಷ್ಟು ಹಣ ಸಂಪಾದನೆ ಮಾಡಿಕೊಂಡಿದ್ದರು. ವರ್ಷಗಳು ಕಳೆದಂತೆ ತಿಮ್ಮೇಗೌಡ, ಆನಂದ್‌ಕುಮಾರ್ ಅವರ ಕುಟುಂಬಕ್ಕೆ ತೀರಾ ಹತ್ತಿರವಾಗುತ್ತಾ ಹೋದರು.. ಇದರ ಜೊತೆಗೆ ತಿಮ್ಮೇಗೌಡನ ಪತ್ನಿ ಲೀಲಾ ಮತ್ತು ಆನಂದ್‌ಕುಮಾರ್‌ರವರ ಪತ್ನಿ ಲಕ್ಷ್ಮಿ ಕೂಡಾ ಒಳ್ಳೆಯ ಸ್ನೇಹಿತೆಯರಾಗಿದ್ದರು. ಹಬ್ಬಹರಿದಿನಗಳಲ್ಲಿ ಇವರ ಮನೆಗೆ ಅವರು ಬರೋದು, ಹೋಗೋದು ನಡೆಯುತ್ತಿತ್ತು.

ಗೌರಿ ಗಣೇಶ ಹಬ್ಬದ ಅಂಗವಾಗಿ ಲಕ್ಷ್ಮಿ ಸೆಪ್ಟೆಂಬರ್ 6ರಂದು ಶುಕ್ರವಾರ ಸಂಜೆ 5-15 ಗಂಟೆಗೆ ಮಾಲೂರು ಪಟ್ಟಣಕ್ಕೆ ಹೋಗಿ ಹಬ್ಬದ ಸಾಮಾನುಗಳನ್ನು ತೆಗೆದುಕೊಂಡು ಹಾಗೆಯೇ ತಿಮ್ಮೇಗೌಡರ ಮನೆಗೆ ಹೋಗಿ ಅವರ ಪತ್ನಿ ಲೀಲಾರವರನ್ನು ಹಬ್ಬಕ್ಕೆ ಬರುವಂತೆ ಕರೆದು ಬರುವುದಾಗಿ ಹೇಳಿ ತನ್ನ ಮಗ ಕಿರಣ್‌ಕುಮಾರ್ ಜೊತೆ ದ್ವಿಚಕ್ರ ವಾಹನದಲ್ಲಿ ಗ್ರಾಮದಿಂದ ಹುಂಗೇನಹಳ್ಳಿ ಗೇಟ್‌ವರೆಗೂ ಹೋಗಿ ಅಲ್ಲಿಂದ ಬಸ್ಸಿನಲ್ಲಿ ಮಾಲೂರಿಗೆ ಹೊರಟರು. ಅಲ್ಲಿಗೆ ಹೋದ ಮೇಲೆ ಸಂಜೆ ಶ್ರೀ ಮಾರಮ್ಮನ

## ಕೋಲಾರ

✍ ಕೋ.ನಾ. ಪ್ರಭಾಕರ್

ದೇವಸ್ಥಾನಕ್ಕೆ ಹೋಗಿ ಅಮ್ಮನವರ ದರ್ಶನ ಪಡೆದುಕೊಂಡು ಅಲ್ಲಿಂದ ಮಾರುಕಟ್ಟೆಗೆ ಹೋಗಿ ಹಬ್ಬಕ್ಕೆ ಬೇಕಾದ ಸಾಮಾನುಗಳು ಹಾಗೂ ಪೂಜಾ ಸಾಮಾನುಗಳನ್ನು ಖರೀದಿ ಮಾಡಿದ ಲಕ್ಷ್ಮಿ ರಾತ್ರಿ 8.15ಕ್ಕೆ ಗಂಡ ಆನಂದ್‌ಕುಮಾರ್‌ರವರಿಗೆ ಫೋನ್ ಮಾಡಿ ಊರಿಗೆ ಬಸ್ಸಿನಲ್ಲಿ ಬರುತ್ತಿದ್ದೇನೆ. ಹುಂಗೇನಹಳ್ಳಿ ಗೇಟ್‌ಗೆ ಬಂದಾಗ ಮಗನಿಗೆ ಫೋನ್ ಮಾಡಿ ದ್ವಿಚಕ್ರ ವಾಹನದಲ್ಲಿ ಮನೆಗೆ ಬರುವುದಾಗಿ ಹೇಳಿದರು. ಆದರೆ ರಾತ್ರಿ 9.30 ಗಂಟೆಯಾದರೂ ಲಕ್ಷ್ಮಿ ಮಗನ ಮೊಬೈಲ್‌ಗೆ ಕರೆ ಮಾಡಲೇ ಇಲ್ಲ. ಆಗ ಲಕ್ಷ್ಮಿಯ ಮೊಬೈಲ್‌ಗೆ ಕರೆ ಮಾಡಿದರೆ ಮೊಬೈಲ್ ನಾಟ್ ರೀಚಬಲ್ ಆಗಿತ್ತು. ಇದರಿಂದ ಮನೆಯವರಿಗೆಲ್ಲ ಗಾಬರಿ ಜೊತೆಗೆ ಎಲ್ಲಿಗೆ ಹೋಗಿರಬೇಕೆಂಬ ಭಯವಾಗಿ ಲಕ್ಷ್ಮಿಯನ್ನು ಹುಡುಕಾಡಲು ಪ್ರಾರಂಭಿಸಿದರು. ಆದರೆ ಯಾವುದೇ ಸುಳಿವು ಸಿಗಲಿಲ್ಲ. ಹಬ್ಬಕ್ಕೆ ಕರೆಯಲು ತಿಮ್ಮೇಗೌಡರ ಮನೆಗೆ ಹೋಗಿ ಬರುವುದಾಗಿ ಹೇಳಿದ್ದರು ಎಂದು ಮಗ ಕಿರಣ್ ಕುಮಾರ್ ಹೇಳಿದನು. ಆಗ ಆನಂದ್‌ಕುಮಾರ್ ತಿಮ್ಮೇಗೌಡರಿಗೆ ಫೋನ್ ಮಾಡಿ ಪತ್ನಿ ಲಕ್ಷ್ಮಿ ಬಗ್ಗೆ ಕೇಳಿದಾಗ ರಾತ್ರಿ 8 ಗಂಟೆಗೆ ನಮ್ಮ ಮನೆಗೆ ಬಂದಿದ್ದರು. ಹಬ್ಬಕ್ಕೆ ಎಲ್ಲರೂ ಬರುವಂತೆ ಕರೆದು ರಾತ್ರಿ 8.30 ಗಂಟೆಗೆ ಮನೆಯಿಂದ ಹೊರಟರೆಂದು ತಿಳಿಸಿದರು. ನಂತರ ಪತ್ನಿ ಲಕ್ಷ್ಮಿ ಮನೆಗೆ ಬರುತ್ತಾರೆಂದು ಕಾದಿದ್ದ ಆನಂದ್‌ಕುಮಾರ್ ಕುಟುಂಬದವರು ರಾತ್ರಿಯೆಲ್ಲ ಕಾದಿದ್ದು, ಬೆಳ್ಳಂಬೆಳಿಗ್ಗೆಯೇ ಒಬ್ಬಿಬ್ಬರು ಒಂದೊಂದು ಕಡೆ ಹುಡುಕಲು ಹೊರಟರು.


ಆರೋಪಿ ಮುನಿಯಪ್ಪ

ಹುಂಗೇನಹಳ್ಳಿಯ ಗ್ರಾಮಸ್ಥರು ಸೆಪ್ಟೆಂಬರ್ 7ರಂದು ಬೆಳಿಗ್ಗೆ ತಮ್ಮ ಮನೆಗಳಲ್ಲಿ ಹಾಗೂ ಗ್ರಾಮದಲ್ಲಿ ಸಾರ್ವಜನಿಕ ಗಣೇಶನನ್ನು ಇಡೋದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುತ್ತಿದ್ದರು. ಇನ್ನು ಕೆಲವರು ಪೇಟೆಗೆ ಹೋಗಿ ಹಬ್ಬಕ್ಕೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಬರಲು ಗ್ರಾಮದಿಂದ ಮಾಲೂರಿಗೆ ಹೊರಟರು. ಕೋಲಾರ ಮುಖ್ಯರಸ್ತೆ ಹುಂಗೇನಹಳ್ಳಿ ಗೇಟ್‌ನ ರಸ್ತೆ ಪಕ್ಕದಲ್ಲಿ ಮಹಿಳೆಯೊಬ್ಬರು ಬೋರಲಾಗಿ ಬಿದ್ದಿದ್ದು, ಯಾವುದೋ ಅಪರಿಚಿತ ವಾಹನ ಡಿಕ್ಕಿ ಹೊಡೆದಿದ್ದರಿಂದ ಮಹಿಳೆಯರು ಸಾವನ್ನಪ್ಪಿರಬೇಕೆನ್ನುವ ಅನುಮಾನದಿಂದ ಗ್ರಾಮಸ್ಥರು ಮಾಲೂರು ಪೊಲೀಸ್ ಠಾಣೆಗೆ ಫೋನ್ ಮಾಡಿ ಅಪರಿಚಿತ ಮಹಿಳೆ ಮೃತಪಟ್ಟಿರುವ ಬಗ್ಗೆ ವಿಷಯ ತಿಳಿಸಿದರು.


ಡಿವೈಎಸ್ಪಿ ಎಂ.ಹೆಚ್. ನಾಗ್ತೆ


ಪಿಐ ವಸಂತ್

ತಕ್ಷಣ ಮಾಲೂರು ಪೊಲೀಸ್ ಠಾಣೆಯ ಪಿಐ ವಸಂತ್ ಮತ್ತು ಸಿಬ್ಬಂದಿ ವರ್ಗದವರು ಹುಂಗೇನಹಳ್ಳಿ ಗೇಟ್ ಬಳಿಗೆ ಬಂದು ರಸ್ತೆಬದಿಯಲ್ಲಿ ಬಿದ್ದಿದ್ದ ಮಹಿಳೆಯ ಶವವನ್ನು ಪರಿಶೀಲಿಸಲಾಗಿ ಆಕೆಯ ಬಳಿಯಲ್ಲಿ ದಿನಸಿ ಮತ್ತು ಪೂಜಾ ಸಾಮಗ್ರಿಗಳಿದ್ದ ಬ್ಯಾಗ್‌ವೊಂದು ಬಿದ್ದಿತು. ಮಹಿಳೆಯ ಶವ ಮುಖ ಕಾಣದ ರೀತಿಯಲ್ಲಿ ಬೋರಲಾಗಿ ಬಿದ್ದಿದ್ದು, ಶವದ ಗುರುತು ಪತ್ತೆಗಾಗಿ ಶವವನ್ನು ತಿರುಗಿಸಿ ನೋಡಲಾಗಿ ಶವದ ಮೇಲೆ ಯಾವುದೇ ಗಾಯಗಳಾಗಿರಲಿಲ್ಲ. ಜೊತೆಗೆ ಮಹಿಳೆ ಈ ಸ್ಥಳದಲ್ಲಿ ಅಪಘಾತದಿಂದ ಮೃತಪಟ್ಟಿರಬೇಕೆಂದು ನೋಡುವುದಾದರೆ ಆಕೆಯ ಚಪ್ಪಲಿಗಳು ಇರಬೇಕಿತ್ತು. ಆದರೆ ಸ್ಥಳದಲ್ಲಿ ಚಪ್ಪಲಿಗಳು ಇರಲಿಲ್ಲ, ಬರಿಗಾಲಲ್ಲಿ ಈ ರಸ್ತೆಯಲ್ಲಿ ನಡೆದುಕೊಂಡು ಬಂದಿದ್ದರೆ ಈಕೆಯ ಕಾಲಿನ ಪಾದಗಳು ಧೂಳಾಗಿರಬೇಕಾಗಿತ್ತು. ಆದರೆ ಕಾಲಿನ ಪಾದಗಳು ಕ್ಲೀನ್ ಆಗಿತ್ತು ಹಾಗೂ ಆಕೆಯ ಮೊಬೈಲ್ ಫೋನನ್ನು ಪರಿಶೀಲಿಸಲಾಗಿ ಫ್ಲೈಟ್ ಮೋಡ್‌ನಲ್ಲಿತ್ತು. ಇದನ್ನೆಲ್ಲ ಪರಿಶೀಲಿಸಿದ ಪೊಲೀಸರಿಗೆ ಅನುಮಾನವನ್ನು ಹೆಚ್ಚಿಸಿ ಇದೊಂದು ಅಪಘಾತದಿಂದ ನಡೆದಿರುವ ಸಾವಲ್ಲ, ಅಪಘಾತ ಎಂದು ಬಿಂಬಿಸುವಂತೆ ಮಾಡಿರುವ ಪ್ರೀಪ್ಲಾನ್ ಮರ್ಡರ್ ಇರಬಹುದೆಂದು ಅನುಮಾನದ ಹಿನ್ನೆಲೆಯಲ್ಲಿ ಶವದ ಸುತ್ತ ಪರಿಶೀಲನೆ ನಡೆಸುತ್ತಿದ್ದಾಗ ಪತ್ನಿ ಲಕ್ಷ್ಮಿಯನ್ನು ಹುಡುಕಿಕೊಂಡು ಮಾಲೂರು ಕಡೆಗೆ ಹೊರಟಿದ್ದ ಆನಂದ್ ಕುಮಾರ್ ಹುಂಗೇನಹಳ್ಳಿ ಗೇಟ್ ಬಳಿ ಗುಂಪು ಸೇರಿರುವ ಜನರ ಮಧ್ಯೆ ಹೋಗಿ ನೋಡಲಾಗಿ ತನ್ನ ಪತ್ನಿ ಲಕ್ಷ್ಮಿ ಶವವಾಗಿ ನೆಲದ ಮೇಲೆ ಮಲಗಿರುವುದನ್ನು ನೋಡಿ ಅಯ್ಯೋ ಸಾರ್ ಇದು ನನ್ನ ಹೆಂಡತಿ ಲಕ್ಷ್ಮಿ ಎಂದು ಹೇಳಿ ಗೋಳಾಡದಕ್ಕೆ ಶುರು ಮಾಡಿದರು. ಆಗ ಪೊಲೀಸರು ಸಮಾಧಾನಪಡಿಸಿ ಪತ್ನಿ ಸಾವಿನ ಬಗ್ಗೆ ಕೇಳಿದರು.

### ಸಾಲ ತೆಗೆದುಕೊಂಡು ವಾಪಸ್ಸು ಕೊಟ್ಟಿಲ್ಲ

ರಿಯಲ್ ಎಸ್ಟೇಟ್ ಉದ್ಯಮಿ ತಿಮ್ಮೇಗೌಡ ಮತ್ತು ಕುಟುಂಬದವರು ನಮಗೆ ತುಂಬಾ ಹತ್ತಿರವಾಗಿದ್ದು, ಇತ್ತೀಚಿಗೆ ಕೆಲವು ತಿಂಗಳ ಹಿಂದೆ ತಿಮ್ಮೇಗೌಡರಿಗೆ ಯಾವುದೋ ಒಂದು ಹಣದ ವ್ಯವಹಾರದಲ್ಲಿ ಸಮಸ್ಯೆ ಎದುರಾಗಿ ಹಣಕ್ಕಾಗಿ ತುಂಬಾ ಕಷ್ಟಪಡುತ್ತಿದ್ದರು. ಇದೇ ಸಮಯದಲ್ಲಿ ನನಗೆ ಸೇರಿದ ಜಮೀನನ್ನು ತಿಮ್ಮೇಗೌಡ 1 ಕೋಟಿಗೆ ಮಾರಾಟ ಮಾಡಿಸಿಕೊಟ್ಟಿದ್ದರು. ಈ ಸಂದರ್ಭದಲ್ಲಿ ಕಷ್ಟದಲ್ಲಿದ್ದೇನೆ ಹಣದ ಸಹಾಯ ಮಾಡುವಂತೆ ಕೇಳಿಕೊಂಡನು. ಆಗ ನಾನು ಅವರಿಗೆ ಕೈ ಬದಲಿಗೆಂದು 35 ಲಕ್ಷ ಹಣವನ್ನು ಸಾಲವಾಗಿ ಕೊಟ್ಟಿದ್ದೆನು. ನನ್ನ ವ್ಯವಹಾರವನ್ನು ಹತ್ತಿರದಿಂದ ನೋಡುತ್ತಿದ್ದ ತಿಮ್ಮೇಗೌಡ ನಮ್ಮಿಬ್ಬರ ನಡುವಿನ ಬಾಂಧವ್ಯವನ್ನು ದುರುಪಯೋಗಪಡಿಸಿಕೊಂಡಿದ್ದನು. ನನಗೆ ತಿಳಿಯದಂತೆ ಪತ್ನಿ ಲಕ್ಷ್ಮಿ ಬಳಿ ತನ್ನ ಕಷ್ಟಗಳನ್ನು ಹೇಳಿಕೊಂಡು ಅವಳ ಬಳಿ 7 ಲಕ್ಷ ಹಣವನ್ನು ಕೆಲ ದಿನಗಳ ಮಟ್ಟಿಗೆ ಸಾಲವಾಗಿ ತೆಗೆದುಕೊಂಡಿದ್ದನು. ಆದರೆ ತಿಂಗಳು ಕಳೆದರೂ ಹಣವನ್ನು ವಾಪಸ್ಸು ಕೊಡದೇ ಇದ್ದಾಗ ಹಣವನ್ನು ಕೊಡುವಂತೆ ಕೇಳಿರಬೇಕು. ಆದರೆ ತಿಮ್ಮೇಗೌಡ ನನ್ನ


ಆರೋಪಿಗಳನ್ನು ಬಂಧಿಸಿರುವ ಪೊಲೀಸ್ ಅಧಿಕಾರಿಗಳು

☞ 14

ಕ್ರೈಂ ಪ್ರಪಂಚ

# ಕ್ರೈಂ ಹಂಟರ್

ಈ ಜೀವನ ಎಂಬುದು ನಾವು ಕಂಡಂತೆ ಇಲ್ಲಿ ಮತ್ತು ಎಲ್ಲರೂ ಸಹ ನಾವು ನಿರೀಕ್ಷೆ ಮಾಡುವ ರೀತಿ ಅಥವಾ ಅಂದುಕೊಂಡಂತೆ ಎಲ್ಲವೂ ಆಗುವುದಿಲ್ಲಫಿ. ಊಹೆ ಮಾಡಿರದಿದ್ದ ರೀತಿ ನಡೆಯುವ ಆಕಸ್ಮಿಕ ಘಟನೆ, ಬದುಕಿನ ವರ್ತಮಾನ ಮತ್ತು ಭವಿಷ್ಯದ ಮೇಲೆ ಯಾವ ರೀತಿ ಬೇಕಾದರೂ ಪರಿಣಾಮ ಬೀರಬಹುದು.

ಕ್ರೈಂ ಬಗ್ಗೆ ಎ ಬಿ ಸಿ ಡಿ ಗೊತ್ತಿಲ್ಲದ ಅಮಾಯಕ, ಮುಗ್ಧ ಯಾಕೆ, ಯಾವ ರೀತಿಯಲ್ಲಿ ಕ್ರೈಂ ಹಂಟರ್ ಆಗಿ ಬದಲಾಗುತ್ತಾನೆ. ಎಲ್ಲವೂ ಅನಿರೀಕ್ಷಿತ ಅಲ್ಲವೆ?

ಇಂತಹ ಒಂದು ರೋಚಕ ಸತ್ಯಘಟನೆ ಪೊಲೀಸ್ ಫೈಲ್ ಎಂಬ ಈ ಶೀರ್ಷಿಕೆಯಲ್ಲಿ ರೂಪಗೊಂಡಿದೆ.

●●●

ಬಾಗೂರಿನಿಂದ ಬೆಂಗಳೂರಿಗೆ ಬಂದ

ಬಾಗೂರು ಎಂಬುದು ಹಾಸನ ಜಿಲ್ಲೆಯಲ್ಲಿರುವ ಸಾಮಾನ್ಯ ಗ್ರಾಮ. ಆ ಗ್ರಾಮದಲ್ಲಿ ರೈತರ ಮಗನಾಗಿ ಬೆಳೆದವನೇ ವೀರಭದ್ರಫಿ.

ತಂದೆ ಈಶ್ವರಪ್ಪಫಿ. ತಾಯಿ ಮಹಾದೇವಮ್ಮಫಿ.

ಎಸ್‌ಎಸ್‌ಎಲ್‌ಸಿ ಮುಗಿದ ನಂತರ ಎರಡು ವರ್ಷ ಚನ್ನರಾಯಪಟ್ಟಣದ ಕಾಲೇಜಿನಲ್ಲಿ ಪಿಯುಸಿ ಶಿಕ್ಷಣ ಮುಗಿಸಿದ. ಅಲ್ಲಿಗೆ ಅವನು ಕಾಲೇಜಿಗೆ ಗುಡ್‌ಬೈ ಹೇಳಬೇಕಾಯಿತು. ಯಾಕೆ ಅಂದರೆ ಅವನ ತಂದೆ ಕಾಯಿಲೆಯಿಂದ ತೀರಿಕೊಂಡಿದ್ದರು.

ಸಂಸಾರದ ಜವಾಬ್ದಾರಿ. ಗದ್ದೆ ಕೆಲಸ ಮತ್ತು ಕೊಬ್ಬರಿ ಮಂಡಿಯ ವ್ಯವಹಾರದ ಕಾರಣದಿಂದ ಓದಲಾಗಲಿಲ್ಲಫಿ.

ಇವನ ಮನೆ ಪಕ್ಕದಲ್ಲೇ ಇದೆ ಪರಮೇಶ್ವರಪ್ಪ ಮತ್ತು ಅವರ ಪತ್ನಿ ಗಿರಿಜಾ ಅವರ ಸಂಸಾರ. ವೀರಭದ್ರನ ಕುಟುಂಬಕ್ಕೆ ತುಂಬಾ ಆತ್ಮೀಯರಾಗಿದ್ದರು ಮತ್ತು ಈ ದಂಪತಿಗಳ ಮಗಳು ಚೈತ್ರ ವೀರಭದ್ರನ ಜೊತೆ ಹೈಸ್ಕೂಲ್ ಮತ್ತು ಕಾಲೇಜಿನ ಶಿಕ್ಷಣದಲ್ಲಿ ಜೊತೆಯಾಗಿದ್ದಳು. ಅವರಿಬ್ಬರ ನಡುವೆ ಸಲಿಗೆ ಮತ್ತು ಆತ್ಮೀಯತೆ ಇತ್ತುಫಿ.

ವೀರಭದ್ರನಿಗೆ ಇಪ್ಪತ್ತಮೂರು. ಅವಳಿಗೆ ಇಪ್ಪತ್ತುಫಿ. ಕಾಲೇಜಿನಲ್ಲಿ ಪಿ.ಯು.ಸಿ. ಓದುತ್ತಿರುವಾಗಲೇ ಅವನಿಂದ ಆಕರ್ಷಿತಳಾಗಿದ್ದರು ಮತ್ತು ಪ್ರೀತಿಸುತ್ತಿದ್ದಳು.

ಒಂದು ಸನ್ನಿವೇಶದಲ್ಲಿ ಅವಳು ತನ್ನ ಪ್ರೀತಿಯ ಭಾವನೆಗಳನ್ನು ಅವನ ಹತ್ತಿರ ಹೇಳಿಕೊಂಡಿದ್ದಳು.

ವೀರಭದ್ರ ಬೆರಗಾಗಿರಲಿಲ್ಲಫಿ. ಪ್ರೀತಿಗೆ ಸ್ಪಂದಿಸಿರಲಿಲ್ಲಫಿ. ಅವನು ಅವಳಿಗೆ ಬುದ್ಧಿ ಹೇಳಿ, ಪ್ರಾಯೋಗಿಕ ಸಮಸ್ಯೆಯ ಬಗ್ಗೆ ತಿಳಿಸಿದ್ದರು.

ಚೈತ್ರ ಚೆಲುವೆಯರಲ್ಲಿ ಚೆಲುವೆ. ಅವಳ ಸೌಂದರ್ಯ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ಪ್ರಸಿದ್ಧತೆ ಪಡೆದಿದೆ. ಕೆಲವು ಶ್ರೀಮಂತರು ಅವಳನ್ನು ವಿವಾಹವಾಗಲು ಬಯಸಿದ್ದರು.

ನಾನು ಬಡಕುಟುಂಬದವನು. ನಿನ್ನಂತ ಚೆಲುವೆನ ನಿನ್ನ ತಂದೆ ಶ್ರೀಮಂತನಿಗೆ ಕೊಟ್ಟು ವಿವಾಹ ಮಾಡಲು ಬಯಸಿದ್ದಾರೆ. ನೀನು ಅವರನ್ನು ಮದುವೆ ಆಗಿ ಸುಖವಾಗಿರು. ನಮ್ಮಿಬ್ಬರ ಪ್ರಣಯದ ಕಾರಣದಿಂದ ಎರಡು ಕುಟುಂಬಗಳ ಶಾಂತಿ, ನೆಮ್ಮದಿ ಹಾಳಾಗಬಾರದು ಎಂದು ವಿವೇಕ ಹೇಳಿದ್ದನು.

ಚೈತ್ರ ಅತ್ತು ಗೋಳಾಡಿದ್ದಳು. ಮತ್ತೊಮ್ಮೆ ಬೇಡಿಕೊಂಡಿದ್ದಳು. ವೀರಭದ್ರನ ನಿಲುವು ಬದ್ಧರಾಗಲಿಲ್ಲಫಿ.

ಎಂತಹ ವಿಪರ್ಯಾಸ!

ದಿನಗಳು ಕಳೆದಂತೆ ಅವಳು ಹಂತ ಹಂತವಾಗಿ ಬದಲಾಗಲಾರಂಭಿಸಿದಳು. ತಂದೆ-ತಾಯಿ ತೋರಿಸಿ ಆಯ್ಕೆ ಮಾಡಿದ್ದ ಗಂಡನ್ನು ವಿವಾಹವಾಗಲು ಒಪ್ಪಿಕೊಂಡಳು.

ಆ ಗಂಡು ಗಜೇಂದ್ರ ಶರ್ಮ!

ಬೆಂಗಳೂರು ಮಹಾನಗರದ ಯಾವುದೇ ಪೊಲೀಸ್ ಸ್ಟೇಷನ್ನಿನಲ್ಲಿ ಡಿವೈಎಸ್‌ಪಿ ಆಗಿ ಸೇವೆ ಸಲ್ಲಿಸುತ್ತಿದ್ದರು.

ಮುವತ್ತರ ಪ್ರಾಯ. ಬಲಾಢ್ಯ ಶರೀರದವನು. ಅಪಿಯರೆನ್ಸ್ ಆಕರ್ಷಕವಾಗಿದೆ.

ಮುಖ್ಯವಾಗಿ ಇವಳ ತಂದೆ-ತಾಯಿಗೆ ಒಪ್ಪಿಗೆ ಆಗಲು ಕಾರಣ ಅವನು ಪೊಲೀಸ್ ಅಧಿಕಾರಿ ಅಂತ ಮತ್ತು ನಗರದಲ್ಲಿ ನಾಲ್ಕು ಮನೆಗಳು, ಸೈಟುಗಳಿವೆ. ಇಲಾಖೆಗೆ ಸೇರಿದ ಕೆಲವೇ ವರ್ಷಗಳಲ್ಲಿ ಭರ್ಜರಿಯಾಗಿ ಆಸ್ತಿ ಮಾಡಿದ್ದಾನೆ.

ವಿವಾಹದ ಶುಭಕಾರ್ಯ ನಡೆಯಿತು.

ಚೈತ್ರ ಈಗ ಶ್ರೀಮತಿ ಗಜೇಂದ್ರಳಾಗಿ ಬೆಂಗಳೂರು ಮಹಾನಗರದಲ್ಲಿ ಸಂಸಾರ ಜೀವನ ಪ್ರಾರಂಭ ಮಾಡಿದ್ದಳು. ವಿವಾಹವಾಗಿ ಕೇವಲ ಒಂದು ವಾರದಲ್ಲಿ ಅವಳು ತತ್ತರಿಸಿ ಹೋಗಿದ್ದಳು.

ಗಂಡನಿಗೆ ಲೈಂಗಿಕ ಶಕ್ತಿ ಇರಲಿಲ್ಲಫಿ. ಪ್ರಾಯ ಬಂದ ಕೂಡಲೇ ಹಲವಾರು ವರ್ಷಗಳಿಂದ ಅಸಂಖ್ಯಾತ ಹೆಣ್ಣುಗಳ ಜೊತೆ ಕಾಮದಾಟ ಆಡಿ ಪುರುಷ ಶಕ್ತಿಯ ತೀವ್ರತೆ ಕಳೆದುಕೊಂಡಿದ್ದನು.

ಸಂಶಯದ ಪಿಶಾಚಿ!

ಅವನಿಗೆ ವಾಸ್ತವಿಕತೆ ತಿಳಿದಿತ್ತುಫಿ.

ಹೆಂಡತಿನ ತೃಪ್ತಿಪಡಿಸಲು ನನ್ನಿಂದ ಆಗಿಲ್ಲಫಿ. ಅವಳು ದಾಂಪತ್ಯ ಸುಖದ ತೃಪ್ತಿಗಾಗಿ ಬೇರೆ ಬೇರೆ ಗಂಡಸರ ಜೊತೆ ಯಾಕೆ ಸಂಬಂಧ ಬೆಳೆಸಿಕೊಂಡಿರಬಾರದು?

ಸಂಶಯ ಹೊಗೆಯಾಡಿತು.

ಅವಳ ಬದುಕು ನರಕವಾಯಿತು.

ಅವಳಿಗೆ ಗೃಹಬಂಧನವಾಯಿತು.

ಅಪರಿಚಿತ ಗಂಡಸರೇ ಆಗಿರಲಿ ಅಥವಾ ಅವಳ ತವರೂರಿನ ಹತ್ತಿರದ ಸಂಬಂಧಿಕರಾಗಿರುವ ಗಂಡಸರನ್ನು ಭೇಟಿ ಮಾಡಲು ಮತ್ತು ಅವರ ಜೊತೆ ಫೋನ್‌ನಲ್ಲಿ ಮಾತಾಡಲು ಅವಕಾಶ ಇರಲಿಲ್ಲಫಿ.

ಅವಳ ಎಲ್ಲಾ ಚಟುವಟಿಕೆಯನ್ನು ಗಮನಿಸಲು ಮತ್ತು ಫೋನ್ ಕಾಲ್‌ಗಳನ್ನು ಪರೀಕ್ಷೆ ಮಾಡಲು ಲೇಡಿ ಸೂಪರ್‌ವೈಸರ್ ಒಬ್ಬಳನ್ನು ನೇಮಕ ಮಾಡಿದನು. ಚೈತ್ರಾಳಿಗೆ ಹೊರಗೆ ಹೋಗಲು ಸ್ವಾತಂತ್ರ್ಯ ಇರಲಿಲ್ಲಫಿ.

ಅರಮನೆಯಂತ ಬಂಗಲೆ ಅವಳಿಗೆ ಸೆರೆಮನೆ ಆಯಿತು.

ಫೋನ್ ಸಂಪರ್ಕ ಇಲ್ಲಫಿ. ಜನಗಳ ಸಂಪರ್ಕ ಇಲ್ಲಫಿ.

ಶ್ರೀಮಂತಿಕೆ ಏನೋ ಇದೆ. ಗಂಡನ ಪ್ರಾಯ ಮತ್ತು ಬಾಹ್ಯರೂಪದಲ್ಲಿ ಆಕರ್ಷಣೆ ಮತ್ತು ವಿಶೇಷತೆ.

ಮುಖ್ಯವಾಗಿ ದಾಂಪತ್ಯ ಸುಖ ಇಲ್ಲಫಿ. ಗಂಡ ರಾಕ್ಷಸನ ಗುಣದವನು. ಸಂಶಯಪಿಶಾಚಿ.

ಅವಳು ತನ್ನ ಸಂಸಾರ ಜೀವನದ ಮಹಾ ದುರಂತದ ಬಗ್ಗೆ ತವರಿನವರಿಗೆ ಹೇಳಿರಲಿಲ್ಲಫಿ.

ಅವಳಿಗೆ ಆಗಾಗ ತನ್ನ ಊರಿನ ಮತ್ತು ಕುಟುಂಬದ ಆತ್ಮೀಯ ಮತ್ತು ಸಲಿಗೆಯಿಂದ ಇರುತ್ತಿದ್ದ ವ್ಯಕ್ತಿ ವೀರಭದ್ರಫಿ. ಅವನನ್ನು ನೆನಪು ಮಾಡಿಕೊಂಡು ಅಳುತ್ತಾಳೆ. ಬಡವನಾದರೂ ಅವನನ್ನು ಮದುವೆ ಆಗಿದ್ದರೆ ಪ್ರೀತಿ ಮತ್ತು ದಾಂಪತ್ಯ ಜೀವನದಲ್ಲಿ ಸುಖದ ತೃಪ್ತಿ ಮತ್ತು ನೆಮ್ಮದಿ ಇರುತ್ತಿತ್ತುಫಿ ಎಂದುಕೊಂಡು ಅಳುತ್ತಾಳೆ.

●●●

ಬಾಗೂರಿನ ಯುವಕ ವೀರಭದ್ರ ಬೆಂಗಳೂರಿಗೆ ಕಾರ್ಯನಿಮಿತ್ತ ಬರಬೇಕಾಯಿತು. ವ್ಯವಹಾರಗಳ ಕಾರಣದಿಂದ ಹಲವಾರು ಸಲ ಬಂದಿದ್ದರಿಂದ ಬೆಂಗಳೂರು ಅವನಿಗೇನು ಹೊಸದಲ್ಲಫಿ.

ರಾತ್ರಿ ಒಂಭತ್ತು ಗಂಟೆ. ಬಾಗೂರು ಎಂಬ ಗ್ರಾಮದಿಂದ ಬಂದ ಬಸ್ಸು ತಾಂತ್ರಿಕ ದೋಷದಿಂದ ಕೆಟ್ಟು ಹೋಗಿತ್ತುಫಿ.

ಸಂಜೆ ಐದು ಗಂಟೆಗೆ ಬರಬೇಕಾಗಿ ಬಂದಿದೆ. ರಾತ್ರಿ ವೇಳೆ ವ್ಯವಹಾರ ಸಾಧ್ಯವೆ? ಬೆಳಿಗ್ಗೆ ಭೇಟಿ ಮಾಡಿದರಾಯಿತು ಎಂದುಕೊಂಡು, ಬೆಂಗಳೂರಿನಲ್ಲಿರುವ ತನ್ನ ದೂರದ ಸಂಬಂಧಿಕರ ಮನೇಲಿ ಉಳಿದುಕೊಳ್ಳಲು ಹೊರಟನು.

ಆಟೋ ಸ್ಟ್ಯಾಂಡ್ ಕಡೆ ಬರುತ್ತಿರುವಾಗ ಆಕಸ್ಮಿಕ ಘಟನೆ ನಡೆಯಿತು. ಇವನು ತನ್ನ ಪಾಡಿಗೆ ತಾನು ಹೋಗುತ್ತಿರುವಾಗ, ಯಾವುದೋ ತುರ್ತು ಕಾರ್ಯದ ನಿಮಿತ್ತ ಬೇಗ ಬೇಗ ಹೋಗುತ್ತಿದ್ದ ದಢೂತಿ ಶರೀರದ ರಫ್ ಕ್ಯಾರೆಕ್ಟರ್ ಅಡ್ಡಲಾಗಿ ಬಂದನು. ಭುಜದಲ್ಲಿ ಬ್ಯಾಗನ್ನು ಹಿಡಿದುಕೊಂಡಿರುವ ವೀರಭದ್ರ ಎದುರಾಗಿದ್ದಾನೆ.

ಆ ರೌಡಿ ಗಡುಸು ಧ್ವನಿಯಲ್ಲಿ ''ಏ ಬೇವಾರ್ಸಿ... ದಾರಿ ಬಿಡು'' ಎಂದು ಎದೆಗೆ ಕೈ ಹಾಕಿ ಬಲವಾಗಿ ತಳ್ಳಿದನು. ವೀರಭದ್ರ ಎತ್ತಿ ಎಸೆದ ರೀತಿಯಲ್ಲಿ ತೂರಿಕೊಂಡು ಹೋಗಿ, ನೆಲದ ಮೇಲೆ ಬೆನ್ನು ಕೆಳಗಾಗಿ ದಬಾಲನೆ ಬಿದ್ದನು.

ಎಲ್ಲಾ ಹಾಳಾಯಿತು.

ತವರೂರಿನ ಗೆಳತಿ ಚೈತ್ರಾಳಿಗೆ ಕೊಡು ಅಂತ ಇವನ ತಾಯಿ, ಚಟ್ನಿಪುಡಿ, ಉಪ್ಪಿನಕಾಯಿ, ತೇಕ್ಕುಫಿ, ಪುಳಿಯೋಗರೆ ಗೊಜ್ಜು ಮತ್ತು ವಿವಿಧ ರೀತಿಯ ತಿಂಡಿಗಳನ್ನು ಪ್ಯಾಕ್ ಮಾಡಿಕೊಟ್ಟಿದ್ದರು. ಆ ರೌಡಿ ತಳ್ಳಿದ ರಭಸಕ್ಕೆ ಬ್ಯಾಗು ಈಗ ರಿವ್ವನೆ ಮೇಲಕ್ಕೆ ಎಗರಿ ಗಿರ್ರನೆ ತಿರುಗುತ್ತಾ ಬಿದ್ದಿತು.

ಸೀಸೆಗಳು ಒಡೆದು ಚೂರಾಗಿದೆ.

ತಿಂಡಿಗಳು ನೆಲದ ಪಾಲಾಗಿದೆ.

ನೆಲದ ಮೇಲೆ ಬಿದ್ದಿದ್ದ ವೀರಭದ್ರನಿಗೆ ತುಂಬಾ ದುಃಖ ವಾಯಿತು ಇಷ್ಟೇ ಆಗಿದ್ದರೆ ವೀರಭದ್ರ ರುದ್ರ ಆಗುತ್ತಿರಲಿಲ್ಲಫಿ.

ಆ ರೌಡಿ, ನೆಲದ ಮೇಲೆ ಬಿದ್ದಿದ್ದ ಇವನ ಹತ್ತಿರ ಬಂದು ತೊಡೆಗೆ ಬಲವಾಗಿ ಜಾಡಿಸುತ್ತಾ ''ಏನೋ ಲೋಫರ್... ಈ ದಾದಾನಿಗೆ ಎದುರಾಗಿ ನಿಲ್ಲುವಷ್ಟು ಪೊಗರ ನಿನಗೆ'' ಎಂದು ಬೂಟುಕಾಲಿನಿಂದ ನೆಲದ ಮೇಲೆ ಬಿದ್ದಿದ್ದ ವೀರಭದ್ರನ ಹೊಟ್ಟೆಗೆ ಬಲವಾಗಿ ಜಾಡಿಸಲು ಪ್ರಯತ್ನ ಮಾಡಿದನು.

ಕೆರಳಿಬಿಟ್ಟನು ವೀರಭದ್ರಫಿ. ಕೋಪ ಭುಗಿಲೆದ್ದಿತು.

ತನ್ನ ಹೊಟ್ಟೆಗೆ ಜಾಡಿಸಲು ನುಗ್ಗುತ್ತಿದ್ದ ಆ ರೌಡಿಯ ಕಾಲನ್ನು ಹಿಡಿದು ಬಲವಾಗಿ ಎತ್ತಿ ಥ್ರೋ ಮಾಡಿದನು.

ವಾಟ್ ಎ ಪವರ್‌ಫುಲ್ ಮ್ಯಾನ್!

ಆ ರೌಡಿ ಎತ್ತಿ ಎಸೆದ ರೀತಿಯಲ್ಲಿ ತೂರಿಕೊಂಡು ಹೋಗಿ ನೆಲದ ಮೇಲೆ ದಡ್ಡನೆ ಬಿದ್ದನು.

ಬೆನ್ನಿನ ಮೂಳೆ ಅಲ್ಲಾಡಿತು. ನೋವಿನಿಂದ ಕಿರುಚಿದನು. ವೀರಭದ್ರ ಅವನನ್ನು ಹಿಡಿದೆತ್ತಿ ಈಗ ಮುಷ್ಠಿ ಬಿಗಿದು, ಶಾಟ್‌ಪುಟ್ ಗುಂಡು ಅಪ್ಪಳಿಸುವ ರಭಸದಲ್ಲಿ ಮುಖದ ಮೇಲೆ ಪಂಚ್ ಮಾಡಿದನು. ಸಾಲಿಡ್ ಐರನ್ ಪಂಚ್!

ಮುಖ ಬಗಾಲ್ ಆಯಿತು. ರಕ್ತ ಸಿಡಿಯಿತು. ತತ್ತರಿಸುತ್ತಾ ತೂರಾಡಿದನು.

ವೀರಭದ್ರ ರಭಸದಿಂದ ನುಗ್ಗಿ ಬಲಗಾಲನ್ನೆತ್ತಿ ರೌಡಿಯ ಹೊಟ್ಟೆಗೆ ಜಾಡಿಸಿದನು.

ಅಬ್ಬಫಿ... ಪವರ್‌ಫುಲ್ ಕಿಕ್!

ವಿಕಾರವಾಗಿ ಕಿರುಚಿದನು.

ಹೊಟ್ಟೆಯಲ್ಲಿರುವ ಕರುಳೆಲ್ಲಾ ಕಲಸಿಕೊಂಡಂತೆ ಆಗಿ ವಿಲವಿಲನೆ ಒದ್ದಾಡಿದನು. ಆ ಕ್ಷಣದಲ್ಲಿ ಕಂಟ್ರೋಲ್ ಕಳೆದುಕೊಂಡಿದ್ದ ವೀರಭದ್ರ ಮತ್ತೊಮ್ಮೆ ಬಲವಾಗಿ ಜಾಡಿಸಿ ದೂರ ಸರಿದನು.

ನೆಲದ ಮೇಲೆ ಬಿದ್ದಿರೋದೇನು?

ಚೈತ್ರಾಳಿಗೆ ಅಂತ ತಾಯಿ ಮಾಡಿಕೊಟ್ಟಿದ್ದ ವಿವಿಧ ರೀತಿಯ ತಿಂಡಿಗಳು, ಪುಳಿಯೋಗರೆ ಗೊಜ್ಜುಫಿ, ಚಟ್ನಿಪುಡಿ, ಉಪ್ಪಿನಕಾಯಿ ಮತ್ತು ಹಸುವಿನ ಬೆಣ್ಣೆಯಿಂದ ಕಾಯಿಸಿದ್ದ ತುಪ್ಪ ಎಲ್ಲಾ ಮಣ್ಣು ಪಾಲಾಗಿದೆ.

ಕೋಪ ಪ್ರಜ್ವಲಿಸುತ್ತಿದೆ.

ಆದರೆ ಆ ರೌಡಿ ಮೇಲೆ ಏಳಲಾರದಂತ ಸ್ಥಿತಿಯಲ್ಲಿದ್ದ ಅವರಿಗೇನು ಮಾಡಲು ಸಾಧ್ಯಫಿ? ಅಲ್ಲಿಂದ ಹೊರಟನು.

ಅವನು ಗಮನಿಸಲಿಲ್ಲಫಿ.

ತಿಂಡಿ, ಪುಡಿ, ಗೊಜ್ಜಿನ ನಡುವೆ ಅವನ ಪರ್ಸ್ ಬಿದ್ದು ಹೋಗಿತ್ತುಫಿ. ಪರ್ಸಲ್ಲಿ ಕೇವಲ ಒಂದು ಸಾವಿರ ಮಾತ್ರ ಇತ್ತುಫಿ. ಉಳಿದ ಹಣ ಪ್ಯಾಂಟಿನ ಸೀಕ್ರೇಟ್ ಪ್ಯಾಕೇಟ್‌ನಲ್ಲಿತ್ತುಫಿ. ಇದೇ ತುಂಬಾ ಮುಖ್ಯಫಿ. ಯಾವುದು ಗೊತ್ತೆಫಿ?

ಹೆಸರು, ವಿಳಾಸ ಮತ್ತು ಫೋನ್ ನಂಬರ್ ಇರುವ ವಿಸಿಟಿಂಗ್ ಕಾರ್ಡ್ ಇತ್ತುಫಿ...!

●●●

ಡಿವೈಎಸ್‌ಪಿ ಗಜೇಂದ್ರ ಶರ್ಮ ಅವರಿಗೆ ಬಂಗಲೆಯ ಸೂಪರ್‌ವೈಸರ್‌ಗಳಿಂದ ಫೋನ್‌ಕಾಲ್ ಬಂದಿತು.

''ಸಾರ್... ನಿಮ್ಮ ಶ್ರೀಮತಿಯವರ ತವರೂರಿನಿಂದ ವೀರಭದ್ರ ಎಂಬ ಯುವಕ ಬರುತ್ತಿದ್ದಾನೆ ಅಂತ ವರ್ತಮಾನ ಬಂದಿದೆ. ಅವರು ಈಗಾಗಲೇ ಬೆಂಗಳೂರು ತಲುಪಿರುತ್ತಾನೆ.''

ವೀರಭದ್ರನನ್ನು ಮದುವೆ ಮತ್ತು ನಿಶ್ಚಿತಾರ್ಥ ಸಮಯದಲ್ಲಿ ಕೆಲವು ಸಲ ನೋಡಿದ್ದನು.

ಸಂಶಯ ಗಟ್ಟಿಯಾಗಿತ್ತುಫಿ.

ಬಲಿಷ್ಠ ಶರೀರದ, ಬಾಹ್ಯರೂಪದ ಆಕರ್ಷಣೆ ಇರುವ ಯುವಕ ವೀರಭದ್ರ ಯಾರು?

ಹೆಂಡತಿಯ ಆತ್ಮೀಯ ಗೆಳೆಯ ಮತ್ತು ಒಂದೇ ಕಾಲೇಜಿನಲ್ಲಿ ಓದಿದ್ದಾರೆ. ಇವರಿಬ್ಬರ ಮನೆ ಅಕ್ಕಪಕ್ಕದಲ್ಲಿವೆ. ಬೇರೆ ರೀತಿಯ ಆಲೋಚನೆಗಳು ಬಂದು ಸಂಶಯ ಕಾಡುತ್ತಿತ್ತುಫಿ.

ಈಗವನು ಬಂದಿದ್ದಾನೆ!

ಹೆಂಡತಿಗೆ ನನ್ನಿಂದ ತೃಪ್ತಿ ಇಲ್ಲಫಿ. ಒಂದು ವೇಳೆ ವೀರಭದ್ರನಿಂದ ಆ ಸುಖವನ್ನು ಬಯಸಿದರೇನು ಗತಿ?

ಗಜೇಂದ್ರ ಶರ್ಮ ಸಿಗರೇಟ್ ಹತ್ತಿಸಿದನು. ಬಾಯಿ ತುಂಬಾ ಹೊಗೆ ತುಂಬಿಸಿಕೊಂಡಿದ್ದಾನೆ ಮತ್ತು ಅದು ಮೂಗಿನ ರಂಧ್ರಗಳು ಮತ್ತು ಬಾಯಿಯ ಮೂಲಕ ಬರುತ್ತಿದೆ.

ತೀರ್ಮಾನ ಗಟ್ಟಿಯಾಯಿತು.

ಪೊಲೀಸ್ ಸ್ಟೇಷನ್‌ನಲ್ಲಿರುವ ಎಸ್.ಐ. ಚಂದ್ರ ಗುಪ್ತನ ಮೊಬೈಲ್‌ಗೆ ವೀರಭದ್ರನ ಫೋಟೋ ಮತ್ತು ಫೋನ್ ನಂಬರ್ ಕಳಿಸಿದನು ಮತ್ತು ಏನು ಮಾಡಬೇಕು ಎಂದು ವಿವರಿಸಿದನು.

●●●

ಆ ರೌಡಿಯ ಸುತ್ತಲು ಜನಗಳು ಸೇರಿದ್ದಾರೆ. ಅವನು ನರಳುತ್ತಲೇ ಈಗ ನೆಲದಲ್ಲಿ ಬಿದ್ದಿದ್ದ ಪರ್ಸ್ ಅನ್ನು ಎತ್ತಿಕೊಂಡನು.

ವೀರಭದ್ರನಿಂದ ಬಾಡಿ ರಿಪೇರಿ ಮಾಡಿಸಿಕೊಂಡಿರುವ ರೌಡಿಯ ಹೆಸರು ಜಲೀಲ್! ಇವರಲ್ಲಿ ಒಗ್ಗಟ್ಟು ಜಾಸ್ತಿಫಿ. ಜೀಪು, ಕಾರು ಮತ್ತು ಬೈಕಲ್ಲಿ ರೌಡಿಗಳು ಬಂದರು. ಜಲೀಲ್ ನರಳುತ್ತಲೇ ಎಲ್ಲವನ್ನೂ ಸಹ ಹೇಳಿದನು.

ಅವನನ್ನು ಬಿಡಬೇಡಿ.

ಅವನಿಗೊಂದು ಗತಿ ಕಾಣಿಸಿ!

ರೌಡಿಗಳು ಅಲರ್ಟ್ ಆದರು. ಅವನು ಎಲ್ಲಿರುತ್ತಾನೆ ಎಂದು ಇವರಿಗೆ ತಿಳಿದಿಲ್ಲಫಿ. ವಿಸಿಟಿಂಗ್ ಕಾರ್ಡಲ್ಲಿ ಫೋನ್ ನಂಬರ್ ಇದೆ. ಅದು ಸಾಕಲ್ಲವೆ?

●●●

ಪೊಲೀಸ್ ಜೀಪು ಸೈರನ್ ಮೊಳಗಿಸುತ್ತಾ ವೇಗವಾಗಿ ಬರುತ್ತಿದೆ. ಎಸ್.ಐ. ಚಂದ್ರಗುಪ್ತ ಮತ್ತು ಮೂರು ಮಂದಿ

☞ 10

# ಮೊರಾರ್ಜಿ ದೇಸಾಯಿ ವಸತಿ ಶಾಲಾ ವಿದ್ಯಾರ್ಥಿನಿಯರ 5 ಸಾವಿರ ನಗ್ನ ಫೋಟೋ ತೆಗೆದ ಶಿಕ್ಷಕ ಕಾಮುಕ ಡ್ರಾಯಿಂಗ್ ಮಾಸ್ಟರ್‌ನ ಪೋಕ್ಸೋ ಕಾಯ್ದೆಯಡಿಯಲ್ಲಿ ಬಂಧನ!



ಮೊರಾರ್ಜಿ ದೇಸಾಯಿ ವಸತಿ ಶಾಲೆ

**ಮೊರಾರ್ಜಿ ದೇಸಾಯಿ ವಸತಿ ಶಾಲಾ ಕೊಠಡಿಗಳಲ್ಲಿ ವಿದ್ಯಾರ್ಥಿನಿಯರು ಬಟ್ಟೆ ಬದಲಿಸುವಾಗ ಮತ್ತು ಬಾತ್‌ರೂಂಗಳಲ್ಲಿ ಸ್ನಾನ ಮಾಡುವಾಗ ಶಾಲೆಯ ಡ್ರಾಯಿಂಗ್ ಮಾಸ್ಟರ್‌ವೊಬ್ಬ ತನ್ನ ಮೊಬೈಲ್‌ಗಳಲ್ಲಿ ಫೋಟೋ ಮತ್ತು ವಿಡಿಯೋಗಳನ್ನು ತೆಗೆಯುವ ಮೂಲಕ 5 ಸಾವಿರ ನಗ್ನ ಫೋಟೋಗಳನ್ನು ದಾಸ್ತಾನು ಮಾಡಿಟ್ಟುಕೊಂಡಿದ್ದ ಅಂಶವು ಬೆಳಕಿಗೆ ಬಂದಿದ್ದ ಹಿನ್ನೆಲೆಯಲ್ಲಿ ಮಾಸ್ತಿ ಠಾಣೆ ಪೊಲೀಸರು ಬಂಧಿಸಿ ಡ್ರಾಯಿಂಗ್ ಮಾಸ್ಟರ್ ವಿರುದ್ಧ ಪೋಕ್ಸೋ ಕಾಯ್ದೆಯಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡಿದ್ದರು. ಇದರ ವಿರುದ್ಧ ಕೆಳಹಂತದ ಕೋರ್ಟ್ ಮೊರೆ ಹೋಗಿದ್ದ ಡ್ರಾಯಿಂಗ್ ಮಾಸ್ಟರ್ ವಿರುದ್ಧವಾದ ತೀರ್ಪು ಬಂದಿದ್ದು, ಮತ್ತೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯವು ಡ್ರಾಯಿಂಗ್ ಮಾಸ್ಟರ್‌ನ ಈ ಕೃತ್ಯ ಅಸಭ್ಯ ಹಾಗೂ ಭಯಾನಕವಾಗಿದೆ ಎಂದು ಅಭಿಪ್ರಾಯಿಸಿ ಡ್ರಾಯಿಂಗ್ ಮಾಸ್ಟರ್‌ನ ಅರ್ಜಿಯನ್ನು ತಿರಸ್ಕಾರ ಮಾಡಿ ಸೂಕ್ತ ತನಿಖೆಗೆ ಆದೇಶ ನೀಡಿದೆ.**


ಶಿಕ್ಷಕ ಮುನಿಯಪ್ಪ

**ಕೋಲಾರ**

✍ ಕೋಲಾರ ಮಂಜು

ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಟೇಕಲ್ ಸಮೀಪ ಇರುವ ಯಲುವನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕಳೆದ ಡಿಸೆಂಬರ್ 17ರಂದು ಶೌಚ ಗುಂಡಿಗೆ ವಿದ್ಯಾರ್ಥಿಗಳನ್ನು ಇಳಿಸಿ ಕ್ಲೀನ್ ಮಾಡಿಸಿದ್ದಾರೆ ಅನ್ನೋ ವಿಚಾರ ದೇಶದಾದ್ಯಂತ ಸುದ್ದಿಯಾಗಿ ಸಾಕಷ್ಟು ಶಬ್ದ ಮಾಡಿತ್ತು. ವಸತಿ ಶಾಲೆಯ ಶಿಕ್ಷಕನೊಬ್ಬ ವಿದ್ಯಾರ್ಥಿನಿಯರ ಅಶ್ಲೀಲ ಫೋಟೋಗಳು ಮತ್ತು ವಿಡಿಯೋಗಳನ್ನು ತೆಗೆದಿಟ್ಟುಕೊಂಡಿರುವ ಬಗ್ಗೆ ವಿದ್ಯಾರ್ಥಿನಿಯರು ಮತ್ತು


ಶೌಚ ಗುಂಡಿ ಶುಚಿತ್ವ ಮಾಡುತ್ತಿರುವ ವಿದ್ಯಾರ್ಥಿಗಳು

ಪೋಷಕರು ಅಧಿಕಾರಿಗಳ ಗಮನಕ್ಕೆ ತಂದರು. ಶೌಚ ಗುಂಡಿ ಕ್ಲೀನಿಂಗ್ ವಿಚಾರದ ಜೊತೆಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಬಗೆದಷ್ಟು ಅಕ್ರಮಗಳು ಬಯಲಾಗುತ್ತಿದ್ದಂತೆ ಆಡಳಿತ ಮತ್ತು ವಿರೋಧ ಪಕ್ಷಗಳ ಜನಪ್ರತಿನಿಧಿಗಳ ದಂಡೇ ವಸತಿ ಶಾಲೆಗೆ ಆಗಮಿಸಿ ವಿದ್ಯಾರ್ಥಿಗಳಿಂದ ಶೌಚ ಗುಂಡಿಯನ್ನು ಕ್ಲೀನ್ ಮಾಡಿಸಿದ್ದ ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದರು. ಈ ಹಿನ್ನೆಲೆಯಲ್ಲಿ ಪ್ರಕರಣದಲ್ಲಿ ಆರೋಪಿಗಳ ಸ್ಥಾನದಲ್ಲಿದ್ದ ಪ್ರಾಂಶುಪಾಲೆ, ವಾರ್ಡನ್ ಹಾಗೂ ಇಬ್ಬರು ಶಿಕ್ಷಕರನ್ನು ಸೇವೆಯಿಂದ ಅಮಾನತ್ತು ಮಾಡಲಾಯಿತು. ಉಳಿದ ಶಿಕ್ಷಕರು ಮತ್ತು ಸಿಬ್ಬಂದಿಯನ್ನು ಸಾಮೂಹಿಕವಾಗಿ ಬೇರೆ ಕಡೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ವರ್ಗ ಮಾಡಲಾಯಿತು. ವಿದ್ಯಾರ್ಥಿಗಳಿಗೆ ಅನಾಗರೀಕ ಶಿಕ್ಷೆ ಕೊಡುತ್ತಿದ್ದರು ಎನ್ನುವ ಆರೋಪದಡಿಯಲ್ಲಿ ಶಿಕ್ಷಕ ಮುನಿಯಪ್ಪ ಸೇರಿದಂತೆ ನಾಲ್ಕು ಮಂದಿಯ ವಿರುದ್ಧ ಮಾಲೂರು ತಾಲ್ಲೂಕಿನ ಮಾಸ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಯಿತು.

**ವಿದ್ಯಾರ್ಥಿನಿಯರ ನಗ್ನ ಫೋಟೋ**

ವಿದ್ಯಾರ್ಥಿಗಳಿಂದ ಶೌಚ ಗುಂಡಿ ಕ್ಲೀನಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಲ್ಲಿ ಮೂಲತಃ ಬಂಗಾರಪೇಟೆ ಪಟ್ಟಣದ ನಿವಾಸಿಯಾದ ಡ್ರಾಯಿಂಗ್ ಮಾಸ್ಟರ್ ಮುನಿಯಪ್ಪನವರು ವಸತಿ ಶಾಲೆಯ ಕೊಠಡಿಗಳಲ್ಲಿ ಹೆಣ್ಣು ಮಕ್ಕಳು ಬಟ್ಟೆ ಬದಲಿಸುವಾಗ ಅವರ ಮೊಬೈಲ್‌ನಿಂದ ಫೋಟೋವನ್ನು ತೆಗೆದಿದ್ದರು ಎನ್ನುವ ಗಂಭೀರವಾದ ಆರೋಪ ಕೇಳಿ ಬಂದಿತ್ತು. ಆಗ ಪೊಲೀಸರು ತನಿಖೆಗಾಗಿ ಪ್ರಕರಣದಲ್ಲಿರುವ ನಾಲ್ಕು ಜನ ಶಿಕ್ಷಕರ ಮೊಬೈಲ್‌ಗಳನ್ನು ವಶಕ್ಕೆ ಪಡೆದುಕೊಂಡಿದ್ದರು. ಡ್ರಾಯಿಂಗ್ ಮಾಸ್ಟರ್ ಮುನಿಯಪ್ಪನವರ ಮೊಬೈಲ್‌ನ ದತ್ತಾಂಶಗಳನ್ನು ಪರಿಶೀಲಿಸಿದ್ದಾಗ ಅವರಿಗೆ ಸೇರಿದ ಎಲ್ಲಾ ಐದು ಮೊಬೈಲ್‌ಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿನ ವಿದ್ಯಾರ್ಥಿನಿಯರು ತಮ್ಮ ಕೊಠಡಿಗಳಲ್ಲಿ ಬಟ್ಟೆ ಬದಲಿಸುವ ಹಾಗೂ ಬಾತ್‌ರೂಂಗಳಲ್ಲಿ ಸ್ನಾನ ಮಾಡುವ ವೇಳೆ ತೆಗೆದಿದ್ದ ಫೋಟೋ ಮತ್ತು ವಿಡಿಯೋಗಳು ಸೇರಿದಂತೆ ಸುಮಾರು ಐದು ಸಾವಿರ ನಗ್ನಚಿತ್ರಗಳನ್ನು ದಾಸ್ತಾನು ಮಾಡಿಟ್ಟುಕೊಂಡಿರುವುದು ಸಿಕ್ಕಿವೆ. ಈ ಸಂಬಂಧ ವಾಗಿ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀನಿವಾಸ್‌ರವರು 8 ಸೆಪ್ಟೆಂಬರ್ 2024 ರಂದು ನೀಡಿದ ದೂರಿನ ಮೇರೆಗೆ ಡ್ರಾಯಿಂಗ್ ಮಾಸ್ಟರ್ ವಿರುದ್ಧ ಮಾಸ್ತಿ ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಕಾಯ್ದೆಯಡಿಯಲ್ಲಿ ಕೇಸು ದಾಖಲಿಸಿಕೊಂಡು ಆರೋಪಿ ಡ್ರಾಯಿಂಗ್ ಮಾಸ್ಟರ್ ರವರನ್ನು ಬಂಧಿಸಲಾಯಿತು. ಬಳಿಕ ಡ್ರಾಯಿಂಗ್ ಮಾಸ್ಟರ್ ಮುನಿಯಪ್ಪನನ್ನ ಮೊಬೈಲ್‌ಗಳಲ್ಲಿ ವಿದ್ಯಾರ್ಥಿನಿಯರ ನಗ್ನ ಫೋಟೋ ಮತ್ತು ವಿಡಿಯೋಗಳು ಹೇಗೆ ಬಂದವೆಂದು ನನಗೆ ತಿಳಿಯದು. ಆದುದರಿಂದ ಪೋಕ್ಸೋ ಪ್ರಕರಣವನ್ನು ರದ್ದು ಮಾಡುವಂತೆ ಕೋರಿ ಹೈಕೋರ್ಟ್ ಮೊರೆ ಹೋಗಿದ್ದರು. ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠವು ವಿಚಾರಣೆ ನಡೆಸಿ ಶಿಕ್ಷಕನ ಕೃತ್ಯವು ನಿಜಕ್ಕೂ ಅಸಭ್ಯ ಹಾಗೂ ಭಯಾನಕವಾಗಿದೆ. ಇಂತಹ ಪ್ರಕರಣವನ್ನು ರದ್ದುಪಡಿಸಲಾಗದು. ಪೋಕ್ಸೋ ಕಾಯ್ದೆ ಸೆಕ್ಷನ್ 11ರ ಪ್ರಕಾರ ಮಕ್ಕಳ ದೇಹ ಅಥವಾ ದೇಹದ ಯಾವುದೇ ಭಾಗವನ್ನು ಅಸಭ್ಯ ರೀತಿಯಲ್ಲಿ ಪ್ರದರ್ಶಿಸುವುದು


ಪ್ರಾಂಶುಪಾಲೆ ಭಾರತಮ್ಮ


ಶಿಕ್ಷಕರಾದ ಅಭಿಷೇಕ್ ಹಾಗೂ ಮಂಜುನಾಥ್

ಲೈಂಗಿಕ ಕಿರುಕುಳವಾಗುತ್ತದೆ. ಈ ಅಪರಾಧವು ಕಾಯ್ದೆಯ ಸೆಕ್ಷನ್‌ರಡಿ ಶಿಕ್ಷಾರ್ಹವಾಗಿದೆ. ಇದರಿಂದ ಶಿಕ್ಷಕನ ಅರ್ಜಿಯನ್ನು ತಿರಸ್ಕಾರ ಮಾಡಿ ಸೂಕ್ತ ತನಿಖೆಯನ್ನು ನಡೆಸುವಂತೆ ಆದೇಶ ನೀಡಿದ್ದಾರೆ.





ಡ್ರಾಯಿಂಗ್ ಮಾಸ್ಟರ್ ಪ್ರಕರಣವು ವಿಚಾರಣಾ ಹಂತದಲ್ಲಿದ್ದು, ಐದು ಮೊಬೈಲ್‌ಗಳಲ್ಲಿ ಭಾರಿ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರ ನಗ್ನಚಿತ್ರಗಳು ಇರುವುದು ನಿಜವೆಂದು ತಿಳಿದು ಬಂದಿರುತ್ತದೆ. ಎಫ್‌ಎಸ್‌ಎಲ್ ವರದಿ ಬಂದ ನಂತರ ಅದನ್ನು ಆಧರಿಸಿ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದೆಂದು ಎಸ್ಪಿ ಬಿ. ನಿಖಿಲ್‌ರವರು ತಿಳಿಸಿದ್ದಾರೆ. ಬಡ ಹೆಣ್ಣುಮಕ್ಕಳು ವಿದ್ಯೆ ಕಲಿಯಲು ದೂರದ ಊರುಗಳಿಂದ ಪೋಷಕರನ್ನು ಬಿಟ್ಟು ಬಂದು ವಸತಿ ಶಾಲೆಯಲ್ಲಿ ಉಳಿದುಕೊಂಡಿರುವ ವಿದ್ಯಾರ್ಥಿನಿಯರಿಗೆ ಪೋಷಕರಾಗಿ, ಗುರುಗಳಾಗಿ ವಿದ್ಯೆ, ಬುದ್ಧಿ ನಡತೆ, ಸಂಸ್ಕಾರದ ಬಗ್ಗೆ ಬೋಧಿಸಬೇಕಾದ ಡ್ರಾಯಿಂಗ್ ಮಾಸ್ಟರ್ ಹಾಸ್ಟೆಲ್‌ನಲ್ಲಿ ಹೆಣ್ಣು ಮಕ್ಕಳು ಬಟ್ಟೆ ಬದಲಾಯಿಸುವಾಗ ಹಾಗೂ ಸ್ನಾನ ಮಾಡುವಾಗ ನಗ್ನ ಫೋಟೋ, ವಿಡಿಯೋಗಳನ್ನು ತೆಗೆದು ತನ್ನ ಮೊಬೈಲ್‌ಗಳಲ್ಲಿ ದಾಸ್ತಾನು ಮಾಡಿಟ್ಟುಕೊಂಡಿರುವುದು ಹೇಯಕೃತ್ಯ ಮತ್ತು ತಲೆ ತಗ್ಗಿಸುವಂತ ಕೆಲಸ ಮಾಡಿ ಮಾನವ ಜನ್ಮಕ್ಕೆ ಕಳಂಕ ಪ್ರಾಯನಾದ ಡ್ರಾಯಿಂಗ್ ಮಾಸ್ಟರ್ ಮುನಿಯಪ್ಪನ ವಿರುದ್ಧ ಸೂಕ್ತ ತನಿಖೆ ನಡೆಸುವ ಮೂಲಕ ತಪ್ಪಿತಸ್ಥನಿಗೆ ಕಠಿಣ ಶಿಕ್ಷೆಯಾದಾಗ ಮಾತ್ರ ಕಾಮುಕ ಶಿಕ್ಷಕರು ಎಚ್ಚರಗೊಳ್ಳುವುದಲ್ಲದೆ ಇಂತಹ ಘಟನೆಗಳು ಮರುಕಳಿಸುವುದಿಲ್ಲವೆಂದು ವಿದ್ಯಾರ್ಥಿಗಳ ಪೋಷಕರು ಒತ್ತಾಯಿಸಿದ್ದಾರೆ.


ಉಸ್ತುವಾರಿ ಸಚಿವ ಭೈರತಿ ಸುರೇಶ್, ಶಾಸಕ ನಂಜೇಗೌಡ ಮತ್ತು ಅಧಿಕಾರಿಗಳು ಶಾಲೆಗೆ ಭೇಟಿ ನೀಡಿರುವುದು

**ಮಕ್ಕಳ ಅಶ್ಲೀಲ ಚಿತ್ರ ವೀಕ್ಷಣೆ ಅಪರಾಧ**

ಮನುಷ್ಯನ ಬೆರಳಂಚಿನಲ್ಲಿ ಎಲ್ಲ ಮಾಹಿತಿಯೂ ಲಭ್ಯವಾಗುವುದು ಮೊಬೈಲ್ ಮತ್ತು ಕಂಪ್ಯೂಟರ್ ಮೂಲಕ ಜ್ಞಾನ, ವಿಜ್ಞಾನಗಳ ಬಗ್ಗೆ ಹೆಚ್ಚಿನ ಹರಿವು ಸಿಗುವುದಲ್ಲದೆ, ಅದೇ ರೀತಿ ಮನುಷ್ಯನ ಬುದ್ಧಿಯನ್ನು ವಿಭ್ರಮಗೊಳಿಸುವ ಅಶ್ಲೀಲ ಸಂಗತಿಗಳು ಸಹ ಇವುಗಳಿಂದಲೇ ಸಿಗುತ್ತವೆ. ಇಂತಹ ಅಶ್ಲೀಲ ವಿಷಯಗಳ ವೀಕ್ಷಣೆ ಹಾಗೂ ಹುಡುಕಾಟ ಹೆಚ್ಚಾಗಿದೆ. ಅದರಲ್ಲೂ ಮಕ್ಕಳ ಅಶ್ಲೀಲ ಚಿತ್ರಗಳನ್ನು ವೀಕ್ಷಿಸುವುದು ಹಾಗೂ ಅದನ್ನು ಡೌನ್‌ಲೋಡ್ ಮಾಡಿಟ್ಟುಕೊಳ್ಳುವುದು ಅಸಹ್ಯ ಚಟವಾಗಿ ಪರಿಣಮಿಸಿದೆ. ಮಕ್ಕಳ ಅಶ್ಲೀಲ ಚಿತ್ರ ಮತ್ತು ವಿಡಿಯೋ ವೀಕ್ಷಣೆ ಬಗ್ಗೆ ಸುಪ್ರೀಂ ಕೋರ್ಟ್ ಸೆಪ್ಟೆಂಬರ್ 23 ಸೋಮವಾರ ಮಹತ್ವದ ತೀರ್ಪು ನೀಡಿದೆ. ಮಕ್ಕಳ ಅಶ್ಲೀಲ ಚಿತ್ರಗಳ ವೀಕ್ಷಣೆ ಅಪರಾಧ ಎನ್ನುವುದರ ಸವಿವರ ಮತ್ತು ಮಾಹಿತಿ ಏನು ಎಂಬುವುದನ್ನು ನೋಡುವುದಾದರೆ 2024 ಜನವರಿ 11ರಂದು ಮದ್ರಾಸ್ ಹೈಕೋರ್ಟ್ ಕೊಟ್ಟ ಆದೇಶವೊಂದು ದೇಶಾದ್ಯಂತ ಆಕ್ರೋಶಕ್ಕೆ ಕಾರಣವಾಯಿತು. ಎಸ್. ಹರೀಶ್ (28) ಎನ್ನುವವರು ತನ್ನ ಮೊಬೈಲ್‌ನಲ್ಲಿ ಮಕ್ಕಳ ಎರಡು ಅಶ್ಲೀಲ ವಿಡಿಯೋಗಳನ್ನು ಡೌನ್‌ಲೋಡ್ ಮಾಡಿಕೊಂಡು ವೀಕ್ಷಣೆ ಮತ್ತು ಹಂಚಿಕೊಂಡಿದ್ದ

☞ 11

# ಧಾರವಾಡ : ಗ್ರಾಮೀಣ ಸಿಪಿಐ ಎಸ್.ಎಸ್. ಕಮತಗಿ & ತಂಡದ ಮಿಂಚಿನ ಕಾರ್ಯಾಚರಣೆ...

# ಖಾಸಗಿ ಬಸ್‌ನಲ್ಲಿ ಅಕ್ರಮವಾಗಿ ಮುಂಬೈನಿಂದ ಹುಬ್ಬಳ್ಳಿಗೆ ಸಾಗಿಸುತ್ತಿದ್ದ 98 ಲಕ್ಷ ರೂ. ಚಿನ್ನಾಭರಣ ವಶಕ್ಕೆ... ಓರ್ವನ ಬಂಧನ, ಮತ್ತೊಬ್ಬ ಪರಾರಿ!

**ಮುಂಬೈನಿಂದ ಹುಬ್ಬಳ್ಳಿ ಕಡೆಗೆ ಬರುತ್ತಿದ್ದ ವಿಆರ್‌ಎಲ್ ಸಂಸ್ಥೆಗೆ ಸೇರಿದ್ದ ಐಷಾರಾಮಿ ಬಸ್‌ನಲ್ಲಿ ರಾಜಸ್ಥಾನ ಮೂಲದ ವ್ಯಕ್ತಿಯೊಬ್ಬನು ಯಾವುದೇ ರೀತಿಯ ದಾಖಲೆಗಳಿಲ್ಲದೇ ಅಕ್ರಮವಾಗಿ ಸುಮಾರು 98 ಲಕ್ಷ ರೂ.ಗಳ ಮೌಲ್ಯದ ಚಿನ್ನಾಭರಣ ಮತ್ತು ಬೆಳ್ಳಿಯನ್ನು ಸಾಗಿಸುತ್ತಲಿದ್ದನು. ಖಚಿತವಾದ ಮಾಹಿತಿ ಆಧರಿಸಿ ಹೆಚ್ಚುವರಿ ಎಸ್ಪಿ ನಾರಾಯಣ ಬರಮನಿ ನಿರ್ದೇಶನದಲ್ಲಿ, ಡಿವೈಎಸ್ಪಿ ಎಸ್.ಎಂ. ನಾಗರಾಜು ನೇತೃತ್ವದಲ್ಲಿಫ಼, ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಎಸ್. ಕಮತಗಿ ಮತ್ತು ಸಿಬ್ಬಂದಿಗಳು ನಡೆಸಿದ ಮಿಂಚಿನ ಕಾರ್ಯಾಚರಣೆಯಲ್ಲಿ ರಾಷ್ಟ್ರೀಯ ಹೆದ್ದಾರಿ 48, ನರೇಂದ್ರ ಕ್ರಾಸ್‌ನಲ್ಲಿ ದಿ. 04-10-2024ರಂದು ಮುಂಜಾನೆ 9-30 ಗಂಟೆಯ ಸುಮಾರಿಗೆ ಬಸ್ ನಿಲ್ಲಿಸಿ ಪರಿಶೀಲನೆ ನಡೆಸಿದಾಗ ರಾಜಸ್ಥಾನ ಮೂಲದ ವ್ಯಕ್ತಿಯೊಬ್ಬನ ಬಳಿ 98 ಲಕ್ಷ ರೂ.ಗಳ ಮೌಲ್ಯದ 1237 ಗ್ರಾಂ ಚಿನ್ನಾಭರಣ, 15 ಕೆಜಿ ಬೆಳ್ಳಿ ಪತ್ತೆ ಆಗಿದೆ. ಅಕ್ರಮ ಸಾಗಾಟದ ಕಿಂಗ್‌ಪಿನ್ ಪರಾರಿಯಾಗಿದ್ದುಫ಼, ಆತನ ಬಂಧನಕ್ಕೆ ಬಲೆ ಬೀಸಲಾಗಿದ್ದುಫ಼, ಪ್ರಕರಣ ಧಾರವಾಡ ಜಿಲ್ಲೆಯ ಧಾರವಾಡ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಇದರ ಕುರಿತು ವರದಿ ಇದಾಗಿದೆ.**

ಹಿಂದೊಂದು ಕಾಲವಿತ್ತು 1960ರಿಂದ 1980ರ ದಶಕದಲ್ಲಿ ಮುಂಬೈನಲ್ಲಿ ಅಂದಿನ ಮಾಫಿಯಾ ಡಾನ್ ಹಾಜಿ ಮಸ್ತಾನ್ ಬಂಗಾರದ ಕಳ್ಳ ಸಾಗಣೆಗೆ, ಯೂಸುಫ್ ಪಟೇಲ್ ಬೆಳ್ಳಿ ಕಳ್ಳ ಸಾಗಣಿಕೆಗೆ ಕುಖ್ಯಾತರಾಗಿದ್ದರು. ಅವರ ನೆರಳಲ್ಲಿ ಬೆಳೆದ ಮಹಾಪಾತಕಿ, ಜಗತ್ತಿನ ಮೋಸ್ಟ್ ವಾಂಟೆಡ್ ಕುಳ ದಾವೂದ್ ಇಬ್ರಾಹಿಂ ಮತ್ತು ಆತನ ಸಹೋದರರು ಮತ್ತು ಸಹಚರರು ಬಂಗಾರದ ಕಳ್ಳ ಸಾಗಣೆ ದಂಧೆಯಲ್ಲಿ ಸಾವಿರಾರು ಕೋಟಿ ರೂ.ಗಳನ್ನು ಕಮಾಯಿಸಿದ್ದು ಇತಿಹಾಸ. ಇದರ ಕುರಿತು ಬಾಲಿವುಡ್‌ನಲ್ಲಿ ಅಮಿತಾಬ್ ಬಚ್ಚನ್ ಅವರ ಅಭಿನಯದ 'ದೀವಾರ್' ಚಲನಚಿತ್ರ ಧೂಳೆಬ್ಬಿಸಿತ್ತು. ಇದು ಬಂಗಾರದ ಕಳ್ಳ ಸಾಗಾಣಿಕೆದಾರ ಹಾಜಿ ಮಸ್ತಾನನ ಕುರಿತಾಗಿತ್ತುಫ಼.


ಇಂದು 'ಮುಂಬೈ ಟು ಹುಬ್ಬಳ್ಳಿ' ಅಕ್ರಮ ಬಂಗಾರದ ಕಳ್ಳ ಸಾಗಾಣಿಕೆಯ ಜಾಲವನ್ನು ಧಾರವಾಡದ ಟಫ್‌ಕಾಪ್ ಹೆಚ್ಚುವರಿ ಎಸ್ಪಿ ನಾರಾಯಣ ಬರಮನಿ, ಅವರ ನಿರ್ದೇಶನದಲ್ಲಿ ಚತುರ ಮತ್ತು ಧಾಡಸಿ ಡಿವೈಎಸ್ಪಿ ಎಸ್.ಎಂ. ನಾಗರಾಜು ನೇತೃತ್ವದಲ್ಲಿ ಧಾರವಾಡದ ಗ್ರಾಮೀಣ ಪೊಲೀಸ್ ಇನ್ಸ್‌ಪೆಕ್ಟರ್ ಶಿವಾನಂದ ಕಮತಗಿ ಮತ್ತು ಸಿಬ್ಬಂದಿಗಳು ನಡೆಸಿದ ಮಿಂಚಿನ ಕಾರ್ಯಾಚರಣೆಯಲ್ಲಿ ಚಿನ್ನ ಕಳ್ಳ ಸಾಗಾಣಿಕೆಯನ್ನು ಬೇಧಿಸಿದ್ದಾರೆ. ಸಿನಿಮೀಯ ರೀತಿ ನಡೆದ ಈ ರೋಚಕ ಕಾರ್ಯಾಚರಣೆ ಯಾವುದೇ ಪತ್ತೇದಾರಿ ವೆಬ್‌ಸಿರೀಸ್‌ಗಿಂತ ಕಡಿಮೆಯೇನಿಲ್ಲಫ಼. 'ಮುಂಬೈ ಟು ಹುಬ್ಬಳ್ಳಿ' ಅಕ್ರಮದ ಬಂಗಾರದ ರಹಸ್ಯ ಬಗೆದಷ್ಟು ಹೊರಬರುವ ಹೂರಣವಾಗಿದೆ.



ಮುಂಬೈನಿಂದ ಹುಬ್ಬಳ್ಳಿಗೆ ಬರುತ್ತಿದ್ದ ಖಾಸಗಿ ಐಷಾರಾಮಿ ವಿಆರ್‌ಎಲ್ ಬಸ್

ಧಾರವಾಡ
✍ ಮನ್ನಾಪೂರ

**ಅಕ್ರಮವಾಗಿ ಹಳದಿ ಲೋಹದ ಪೂರೈಕೆ...**

ದಿನದಿಂದ ದಿನಕ್ಕೆ ಎಂತಹವರಿಗೂ 'ಚಿನ್ನ'ವೆಂಬುದು ಗಗನ ಕುಸುಮವಾಗುತ್ತಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಬಹು ಬೇಡಿಕೆಯ 'ಚಿನ್ನ' ಇಂದು ಕನಸಿನಲ್ಲಿಯೂ ಕಾಣಸಿಗದಾಗಿದೆ. ಇಂತಹ ಚಿನ್ನಾಭರಣ, ಚಿನ್ನದ ಬಿಸ್ಕೀಟ್‌ಗಳು, ಬೆಳ್ಳಿಯ ಗಟ್ಟಿಗಳು ಛೋಟಾ ಮುಂಬೈ ಎನಿಸಿದ ಹುಬ್ಬಳ್ಳಿಯಲ್ಲಿ ಮುಂಬೈನಿಂದ ಯಾವುದೇ ದಾಖಲೆಗಳಿಲ್ಲದೇ ಅಕ್ರಮವಾಗಿ ಕೊರಿಯರ್, ಖಾಸಗಿ ಐಷಾರಾಮಿ ಬಸ್‌ಗಳ ಮುಖಾಂತರ ರಾಜಸ್ಥಾನಿ ಮಾರ್ವಾಡಿಗಳ ಅಂಗಡಿಯ ಶೋ ರೂಂ. ಸೇರಿಕೊಂಡು ಫಳಫಳ ಹೊಳೆಯುತ್ತಿತ್ತುಫ಼.


ಡಿವೈಎಸ್ಪಿ ಎಸ್.ಎಂ. ನಾಗರಾಜು


ಇನ್ಸ್‌ಪೆಕ್ಟರ್ ಎಸ್.ಎಸ್. ಕಮತಗಿ

ಇಂತಹ ದುಬಾರಿ 'ಚಿನ್ನ'ವನ್ನು ಉಪಾಯವಾಗಿ, ಸಲೀಸಾಗಿ ಕಸ್ಟಮ್ಸ್‌ಫ಼ ಮತ್ತು ಖಾಕಿಗಳ ಕಣ್ಣು ತಪ್ಪಿಸಿ ಕರಾರುವಕ್ಕಾಗಿ ತಂದು ಮುಟ್ಟಿಸಲು ಫೆಡ್ಲರ್‌ಗಳು ಇರುವುದುಂಟು.

ಇವರನ್ನು ನೋಡಿದರೆ ಕೋಟಿ ರೂ. ಮೌಲ್ಯದ ಬಂಗಾರ ಸಾಗಿಸಬಲ್ಲರೆ...? ಎಂದು ಪ್ರಶ್ನೆ ಮಾಡಿಕೊಳ್ಳುವ ಇವರು ತೀರಾ ಸಂಭಾವಿತರಂತೆ ಕಾಣುತ್ತಾರೆ. ಹೀಗಾಗಿ ನಿರಾತಂಕವಾಗಿ ತಮ್ಮ ಅಕ್ರಮ ದಂಧೆ ಮುಂದುವರೆಸುತ್ತಿದ್ದರು.

**ಇನ್ಸ್‌ಪೆಕ್ಟರ್ ಕಮತಗಿ ಅವರಿಗೊಂದು ಕರೆ...**

ಇತ್ತೀಚಿಗೆ ಧಾರವಾಡ ಜಿಲ್ಲೆಗೆ ಹೆಚ್ಚುವರಿ ಎಸ್ಪಿಯಾಗಿ ಬಂದ 'ಎನ್‌ಕೌಂಟರ್ ಫೇಮ' ನಾರಾಯಣ ಬರಮನಿ, ಇವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದಿಟ್ಟ ಕಾರ್ಯಾಚರಣೆ ಮಾಡಿರುವ ಧಾರವಾಡ ಗ್ರಾಮೀಣ ಡಿವೈಎಸ್ಪಿ ಎಸ್.ಎಂ. ನಾಗರಾಜು ಆಗಮನದಿಂದ ಏನೋ ಒಂದು ಹೊಸ ಚೇತನ ಮೂಡಿದಂತಾಗಿದೆ. ಇವರಿಗೆ ಸಮರ್ಥ ಹಾಗೂ ಸೂಕ್ತ ನಿರ್ದೇಶನವನ್ನು ಎಸ್ಪಿ ಡಾ. ಗೋಪಾಲ ಬ್ಯಾಕೋಡ ಮಾಡುತ್ತಿರುವುದು ಅತೀ ಸಮಂಜಸವಾಗಿದೆ.


ಐಜಿಪಿ ವಿಕಾಸಕುಮಾರ್



ಹೆಚ್ಚುವರಿ ಎಸ್ಪಿ ನಾರಾಯಣ ನಾರಾಬರಮನಿ

ಇತ್ತೀಚಿಗೆ ಧಾರವಾಡ ಗ್ರಾಮೀಣ ಠಾಣೆಯ ಖಡಕ್ ಇನ್ಸ್‌ಪೆಕ್ಟರ್ ಶಿವಾನಂದ ಕಮತಗಿ ಅವರ ಅತ್ಯಂತ ವಿಶ್ವಾಸಿಕ ಮಾಹಿತಿದಾರನೊಬ್ಬ ಕರಾರುವಕ್ಕಾದ ಮಾಹಿತಿಯೊಂದನ್ನು ಕರೆ ಮಾಡಿ ತಿಳಿಸಿದನು. ಮುಂಬೈನಿಂದ ಹುಬ್ಬಳ್ಳಿಗೆ ಸುಮಾರು 1 ಕೋಟಿ ರೂ.ಗಳ ಮೌಲ್ಯದ ಅಕ್ರಮ ಚಿನ್ನಾಭರಣ ಮತ್ತು ಬೆಳ್ಳಿಯ ಗಟ್ಟಿ ಬರುತ್ತಿದೆ ಎಂದು ಖಾಸಗಿ ಬಸ್ ನಂಬರ್ ಹಾಗೂ ದಿನಾಂಕವನ್ನು, ಸಾಗಾಣಿಕೆ ಮಾಡುವ ವ್ಯಕ್ತಿಯ ಚಹರೆ ಪಟ್ಟಿ ತಿಳಿಸಿದನು. ಇನ್ಸ್‌ಪೆಕ್ಟರ್ ಕಮತಗಿ ಅವರು ತುಂಬಾ ಅಲರ್ಟ್ ಆದರು. ತಕ್ಷಣ ಡಿವೈಎಸ್ಪಿ ಎಸ್.ಎಂ. ನಾಗರಾಜು, ಹೆಚ್ಚುವರಿ ಎಸ್ಪಿ ನಾರಾಯಣ ಬರಮನಿ ಅವರನ್ನು ಕಂಡು ಎಲ್ಲ ಸಂಗತಿ ತಿಳಿಸಿದರು. ತುಂಬಾ ಕುಶಾಗ್ರಮತಿಗಳಾದ ಎಎಸ್ಪಿ ಬರಮನಿ, ಡಿವೈಎಸ್ಪಿ ನಾಗರಾಜು ಅವರುಗಳು ಸಮಾಲೋಚಿಸಿ ವ್ಯೂಹವೊಂದನ್ನು ರಚಿಸಿ ಇನ್ಸ್‌ಪೆಕ್ಟರ್ ಕಮತಗಿ ಅವರಿಗೆ ಸೂಕ್ತ ನಿರ್ದೇಶನಗಳನ್ನು ನೀಡಿದರು. ಆದಷ್ಟು ಕಾರ್ಯಾಚರಣೆಗೆ ಗೌಪ್ಯವಾಗಿ, ಕರಾರುವಕ್ಕಾಗಿ ನಡೆಸಬೇಕೆಂದು ತಿಳಿಸಿದರು. ಎಸ್ಪಿ ಡಾ. ಗೋಪಾಲ ಬ್ಯಾಕೋಡ ವರು ತರಬೇತಿಗೆ ಹೋದ ಕಾರಣ ಅವರ ಚಾರ್ಜನ್ನು ಎಎಸ್ಪಿ ಬರಮನಿ ಅವರಿಗೆ ನೀಡಿದ್ದರು. ಡಿವೈಎಸ್ಪಿ ಎಸ್.ಎಂ. ನಾಗರಾಜು ಅವರಿಗೆ 'ಆಪರೇಶನ್ ಗೋಲ್ಡ್' ಕಾರ್ಯಾಚರಣೆಯ ನೇತೃತ್ವವನ್ನು ವಹಿಸಲಾಯಿತು.

**ಬಸ್‌ನಲ್ಲಿ ಚಿನ್ನಾಭರಣದೊಂದಿಗೆ ವಂಚಕ...**

ಅಂದುಕೊಂಡಂತೆ ಗುರುವಾರ ದಿವಸ ದಿ. 04-10-2024 ಬೆಳಗಿನ ಜಾವ ಧಾರವಾಡದ ಗ್ರಾಮೀಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಿವಾನಂದ ಅವರು ತಮ್ಮ ಠಾಣೆಯ ಪಿಎಸ್‌ಐ ಬಸಗೌಡ ಮಳೆಪ್ಪನವರ, ಸಿಬ್ಬಂದಿಗಳಾದ ಕೃಷ್ಣಾ ವಿಭೂತಿ, ನಾಗರಾಜ ಹಲವಾರ, ಹಣಮಂತ ಜಾಧವ, ಮಲ್ಲೇಶ ಕಡತಿ ಇವರಿಗೆಲ್ಲ ಸೂಕ್ಷ್ಮ ನಿರ್ದೇಶನ ನೀಡಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿನ ನರೇಂದ್ರ ಕ್ರಾಸ್‌ನಲ್ಲಿ ಬಂದು ನಿಂತರು. ಮುಂಬೈ ಕಡೆಯಿಂದ ಬರುವ ವಿಆರ್‌ಎಲ್ ಸಂಸ್ಥೆಗೆ ಸೇರಿದ್ದ ಖಾಸಗಿ ಐಷಾರಾಮಿ ಬಸ್ ಕ್ರಮಾಂಕ ಜಿಎ-07 ಟಿ-2538ನೇದ್ದರ ದಾರಿ ಕಾಯುತ್ತ ನಿಂತುಬಿಟ್ಟದ್ದರು. ಅಷ್ಟರಲ್ಲಿ ಡಿವೈಎಸ್ಪಿ ಎಸ್.ಎಂ. ನಾಗರಾಜ ಕೂಡಾ ಅಲ್ಲಿಗೆ ಬಂದು ಇನ್ಸ್‌ಪೆಕ್ಟರ್ ಕಮತಗಿ ಅವರ ಟೀಮ್ ಕೂಡಿಕೊಂಡು ಲೀಡ್ ಮಾಡತೊಡಗಿದ್ದರು. ಇವರಿಗೆಲ್ಲ ಹೆಚ್ಚುವರಿ ಎಸ್ಪಿ ನಾರಾಯಣ ಬರಮನಿ ವಿಶೇಷ ಮುತುವರ್ಜಿಯಿಂದ ನಿರ್ದೇಶನಗಳನ್ನು ನೀಡುತ್ತಲಿದ್ದರು.


ಪರಾರಿಯಾದ ಆರೋಪಿತ ನರಪತ ಸಿಂಗ್ ರತನ್‌ಸಿಂಗ್ ಬಾಲೋಟ


ಅಕ್ರಮ ಬಂಗಾರ ಸಾಗಿಸುತ್ತಿದ್ದ ಭವರ ಸಿಂಗ್ ವಿಜಯ ಸಿಂಗ್ ಚವ್ಹಾಣ

ಸಮಯ ಆಗಲೇ ಬೆಳಿಗ್ಗೆ 9.30 ಗಂಟೆ ಆಗಿತ್ತುಫ಼. ಆ ಕಡೆಯಿಂದ ಹಳದಿ ಬಣ್ಣದ ಐಷಾರಾಮಿ ಬಸ್ ಬರುವುದು ಕಂಡಿತು. ಸಮೀಪಕ್ಕೆ ಬಂದಾಗ ಅಡ್ಡ ಬಂದ ಪೊಲೀಸರನ್ನು ಕಂಡು ಚಾಲಕ ವಾಹನ ನಿಲ್ಲಿಸಿದನು. ಇನ್ಸ್‌ಪೆಕ್ಟರ್ ಕಮತಗಿ ಅವರ ತಂಡ ಪ್ರತಿಯೊಬ್ಬ ಪ್ಯಾಸೆಂಜರ್‌ನನ್ನು ಚೆಕ್ ಮಾಡತೊಡಗಿತ್ತುಫ಼. ಆದರೆ ಒಬ್ಬ ಪ್ಯಾಸೆಂಜರ್ ಮಾತ್ರ ಬಿಳಿಚಿಕೊಂಡು ಬೆವರುತ್ತಿದ್ದನು. ತಕ್ಷಣ ಇನ್ಸ್‌ಪೆಕ್ಟರ್ ಕಮತಗಿ ಅವರೇ ಸ್ವತಃ ಮುಂದಾಗಿ 'ಏನಪ್ಪಾ ಅಣ್ಣಾಫ಼...' ಎಂದು ಮಾತಿಗಿಳಿದು ಆತನ ಲಗೇಜು ಚೆಕ್ ಮಾಡಲಾಗಿ ಸೂಟ್‌ಕೇಸ್‌ನಲ್ಲಿ ಮತ್ತು ಇನ್ನೊಂದು ಬ್ಯಾಗ್‌ನಲ್ಲಿ ಚಿನ್ನಾಭರಣ ಮತ್ತು ಬೆಳ್ಳಿಯ ಗಟ್ಟಿಗಳು ಕಂಡವು. 'ಆಪರೇಷನ್ ಗೋಲ್ಡ್' ಸಕ್ಸಸ್ ಆಗಿತ್ತುಫ಼. ಆತನ ಹೆಸರು ಕೇಳಲಾಗಿ ಭವರ್‌ಸಿಂಗ್, ವಿಜಯಸಿಂಗ್ ಚವ್ಹಾಣ್, ಸಾ. ನಾಗಿನಿ, ಜಿಲ್ಲಾ, ಜಾಲೂರು ರಾಜಸ್ಥಾನ. ಹಾಲಿವಸ್ತಿ ದುರ್ಗದಬೈಲ್ ಹುಬ್ಬಳ್ಳಿ ಎಂದು ತಿಳಿಸಿದನು.

**ಅಬ್ಬಾಫ಼... 98 ಲಕ್ಷ ರೂ. ಮೌಲ್ಯದ ಚಿನ್ನಾಭರಣ...**

ಚಿನ್ನಾಭಣಗಳೊಂದಿಗೆ ಸಿಕ್ಕುಬಿದ್ದ ಭವರಸಿಂಗ್ ಚವ್ಹಾಣನನ್ನು ಚಿನ್ನಾಭರಣ ಎಲ್ಲಿಯವು...? ಇದಕ್ಕೆ ದಾಖಲೆಗಳಲ್ಲಿಫ಼? ಎಂದು ಕೇಳಿದಾಗ 'ತಾನು ಮುಂಬೈನಿಂದ ಇವುಗಳನ್ನು ತಂದಿದ್ದೇನೆ. ತಾನು ಕೊರಿಯರ್ ಸರ್ವೀಸ್ ಮಾಡುತ್ತಿದ್ದೇನೆ' ಇವುಗಳ ದಾಖಲೆ ತನಗೆ ಏನೂ ಗೊತ್ತಿಲ್ಲವೆಂದು ತಿಳಿಸಿದನು. ತಾನೂ ನರಪತಸಿಂಗ್ ರತನ್‌ಸಿಂಗ್ ಬಾಲೋಟ್, ದುರ್ಗದ ಬೈಲ್ ಹುಬ್ಬಳ್ಳಿ ಈತನ ಕೈಕೆಳಗೆ ಕೋರಿಯರ್ ಸರ್ವೀಸ್ ಮಾಡುತ್ತೇನೆಂದು ತಿಳಿಸಿದನು. ಭವರ್‌ಸಿಂಗ್ ತಿಳಿಸಿದ ವಿಳಾಸದಲ್ಲಿ ನರಪತ್‌ಸಿಂಗ್ ಸಿಗದೇ ಆಗಲೇ ಸುದ್ದಿ ಅರಿತುಕೊಂಡು ಪರಾರಿ ಆಗಿದ್ದನು.

ಹೆಚ್ಚುವರಿ ಎಸ್ಪಿ ನಾರಾಯಣ ಬರಮನಿ ಅವರು ತಕ್ಷಣ ಘಟನಾ ಸ್ಥಳಕ್ಕೆ ಧಾವಿಸಿ ಬಂದು ಪರಿಶೀಲನೆ ನಡೆಸಿದರು. ಉತ್ತರವಲಯದ ಐಜಿಪಿ ವಿಕಾಸಕುಮಾರ್ ಅವರಿಗೆ ವಿಷಯ ತಿಳಿಸಿದಾಗ ಅವರು ಕೂಡಾ ಶರವೇಗದಲ್ಲಿ ಧಾರವಾಡದತ್ತ ಹೊರಟು ಬಂದು ಪೊಲೀಸರಿಗೆ ದೊರೆತ ಚಿನ್ನಾಭರಣ ಪರಿಶೀಲನೆ ನಡೆಸಿದರು. ಅವರ ನಿರ್ದೇಶನದಂತೆ ಚಿನ್ನಾಭರಣಗಳ ನೈಜತೆ ಪರಿಶೀಲನೆ ಮಾಡಲು ತಿಳಿಸಿದರು. ಅದರಂತೆ ಇನ್ಸ್‌ಪೆಕ್ಟರ್ ಕಮತಗಿ ಅವರು ಅಕ್ಕಸಾಲಿಗರನ್ನು ಕರೆಯಿಸಿ ನೈಜತೆ ಮತ್ತು ತೂಕ ಪರಿಶೀಲಿಸಿದರು. 1237 ಗ್ರಾಂ ಬಂಗಾರ, 15 ಕೆಜಿ ಬೆಳ್ಳಿ ಗಟ್ಟಿ ಒಟ್ಟು ಮೌಲ್ಯ ಸುಮಾರು 98 ಲಕ್ಷ ರೂ.ಗಳಾಗಿತ್ತುಫ಼. ಹತ್ತಿರ... ಹತ್ತಿರ ಇದರ ಮೌಲ್ಯ ಒಂದು ಕೋಟಿಯಷ್ಟು ಎಂದು ಹೇಳಬಹುದು. ಧಾರವಾಡದ ಗ್ರಾಮೀಣ ಪೊಲೀಸರ ಭರ್ಜರಿ ಬಂಗಾರದ ಬೇಟೆ ಇದಾಗಿತ್ತುಫ಼.

**ಐಜಿಪಿ ಶ್ಲಾಘನೆ...**

ಹೆಚ್ಚುವರಿ ಎಸ್ಪಿ ನಾರಾಯಣ ಬರಮನಿ, ಡಿವೈಎಸ್ಪಿ ಎಸ್.ಎಂ. ನಾಗರಾಜು, ಗ್ರಾಮೀಣ ಠಾಣೆಯ ಇನ್ಸ್‌ಪೆಕ್ಟರ್ ಶಿವಾನಂದ ಕಮತಗಿ, ಪಿಎಸ್‌ಐ ಬಸನಗೌಡ, ಮಳೆಪ್ಪನವರ ಮತ್ತು ಸಿಬ್ಬಂದಿಗಳ ಶ್ರಮವನ್ನು ಬೆಳಗಾವಿ ಉತ್ತರವಲಯದ ಐಜಿಪಿ ವಿಕಾಸಕುಮಾರ ಮನದುಂಬಿ ಶ್ಲಾಘಿಸಿದರು. ಹಾಗೂ ಚಿನ್ನಾಭರಣ ಅಕ್ರಮ ಸಾಗಣಿಕೆಯ ಕುರಿತು ಧಾರವಾಡದ ಎಸ್ಪಿ ಕಚೇರಿಯಲ್ಲಿ ಸುದ್ದಿಗೋಷ್ಟಿ ನಡೆಸಿದರು.

**ಒಬ್ಬನ ಬಂಧನ... ಮತ್ತೊಬ್ಬನ ಶೋಧ...**

'ಮುಂಬೈ ಟು ಹುಬ್ಬಳ್ಳಿ' ಅಕ್ರಮ ಚಿನ್ನ ಸಾಗಾಟ ದಂಧೆಯಲ್ಲಿ ಬರೀ ಕ್ಯಾರಿಯರ್ ಭವರ್‌ಸಿಂಗ್ ಚವ್ಹಾಣ ಮಾತ್ರ ಸಿಕ್ಕುಬಿದ್ದಿದ್ದಾನೆ. ನರಪತ್‌ಸಿಂಗ್ ರತನ್‌ಸಿಂಗ್ ಬಾಲೋಟ್ ಪ್ರಕರಣದ ಸೂತ್ರಧಾರನಿದ್ದು ಆತ ತಪ್ಪಿಸಿಕೊಂಡು ಪರಾರಿ ಆಗಿದ್ದಾನೆ. ಆತನನ್ನು ಶೀಘ್ರದಲ್ಲಿ ಬಂಧಿಸುವ ವಿಶ್ವಾಸವಿದೆ ಎಂದು ಹೆಚ್ಚುವರಿ ಎಸ್ಪಿ ನಾರಾಯಣ ಬರಮನಿ, ಡಿವೈಎಸ್ಪಿ ಎಸ್.ಎಂ. ನಾಗರಾಜು ತಿಳಿಸಿದ್ದಾರೆ. ಬಂಗಾರದ ಅಕ್ರಮ ಸಾಗಾಣಿಕೆಯ ದಂಧೆಯಲ್ಲಿ ಕಾಣದ ಕೈಗಳ ಕರಾಮತ್ತಿದೆ. ಅಂತಹವರು ಯಾರೇ ಆದರೂ ಸರಿ... ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದ ಕೂಡಾ ಹೆಚ್ಚುವರಿ ಎಸ್ಪಿ ನಾರಾಯಣ ಬರಮನಿ 'ಪೊಲೀಸ್ ನ್ಯೂಸ್' ಪತ್ರಿಕೆಗೆ ತಿಳಿಸಿದ್ದಾರೆ. ☯


ಬಸ್‌ನಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ಚಿನ್ನಾಭರಣಗಳನ್ನು ವಶಕ್ಕೆ ತೆಗೆದುಕೊಂಡು ಪರಿಶೀಲಿಸುತ್ತಿರುವ ಪೊಲೀಸರು



**ಕೊ**ಡಗಿನಲ್ಲಿ ಈ ಮೊದಲು ಗಾಂಜಾ ಇರಲೇ ಇಲ್ಲ ಎಂದು ಹೇಳಲು ಸಾಧ್ಯವೇ ಇಲ್ಲ. ಹಿಂದಿನಿಂದಲೂ ಇದೆ. ಆದರೆ ಅದಕ್ಕೆ ಇಂಟರ್ ನ್ಯಾಷನಲ್ ಲಿಂಕ್ ಸಿಕ್ಕಿರುವುದು ಮಾತ್ರ ಇತ್ತೀಚಿಗಿನ ವರ್ಷಗಳಲ್ಲಿ ಎಂದರೆ ತಪ್ಪಾಗಲಾರದು. ಯಾವಾಗ ಕೊಡಗಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಾಯಿತೋ ಅದನ್ನು ಕೆಲವರು ದುರುಪಯೋಗಪಡಿಸಿಕೊಳ್ಳಲು ಆರಂಭಿಸಿದರು. ದೂರದಿಂದ ಬರುವ ದೇಶ, ವಿದೇಶಗಳ ಶ್ರೀಮಂತರು ಇಲ್ಲಿನ ಹೋಂಸ್ಟೇ, ರೆಸಾರ್ಟ್‌ಗಳಲ್ಲಿ ವಾಸ್ತವ್ಯ ಹೂಡಲಾರಂಭಿಸಿದರು. ಇವರೆಲ್ಲರೂ ಮಜಾ ಉಡಾಯಿಸಲು ಬರುತ್ತಿದ್ದರಿಂದ ಕೇಳಿದಷ್ಟು ಹಣ ಕೊಡಲು ತಯಾರಿರುತ್ತಿದ್ದರು.

ಹೊರಗಿನಿಂದ ಬರುವ ಹೆಚ್ಚಿನವರು ಗಾಂಜಾ ಸಿಗುತ್ತಾ ಎಂಬುದನ್ನು ಬಹಿರಂಗವಾಗಿಯೇ ಕೇಳಲಾರಂಭಿಸಿದರು. ಅತಿಥಿಗಳ

**ಕೊಡಗಿಗೆ ಗಾಂಜಾ ಹೇಗೆ ಬರುತ್ತದೆ ಎಂಬ ಪ್ರಶ್ನೆಗಳನ್ನು ಜನ ಕೇಳುತ್ತಲೇ ಬರುತ್ತಿದ್ದರು. ಜತೆಗೆ ಪೊಲೀಸರಿಗೂ ಇದು ತಲೆ ನೋವಾಗಿತ್ತು. ಒಂದಷ್ಟು ಲೋಕಲ್ ಪೆಡ್ಲರ್‌ಗಳನ್ನು ಹಿಡಿದು ರುಬ್ಬಿದರೂ ಯಾವುದೇ ಪ್ರಯೋಜನವಾಗುತ್ತಿರಲಿಲ್ಲ. ಪ್ರಕರಣಗಳ ಬೆನ್ನತ್ತಿ ಹೋದರೂ ಅಂತಹ ಹೆಚ್ಚಿನ ಮಾಹಿತಿಗಳು ಲಭ್ಯವಾಗುತ್ತಿರಲಿಲ್ಲ. ಆದರೆ ಜಿಲ್ಲೆಯಲ್ಲಿ ಗಾಂಜಾದ ಘಾಟು ಮಾತ್ರ ಮೂಗಿಗೆ ಹೊಡೆಯುತ್ತಲೇ ಇತ್ತು. ಇದೀಗ ಕೊಡಗು ಪೊಲೀಸರ ಕಾರ್ಯಾಚರಣೆಯಿಂದ ಇಷ್ಟು ಸಮಯದಿಂದ ಕೇಳುತ್ತಾ ಬಂದಿದ್ದ ಪ್ರಶ್ನೆಗೆ ಉತ್ತರ ಸಿಕ್ಕಿದೆ... ಅಷ್ಟೇ ಅಲ್ಲದೆ ಕೊಡಗಿಗೆ ಸರಬರಾಜಾಗುತ್ತಿದ್ದ ಗಾಂಜಾಕ್ಕೆ ಥೈಲ್ಯಾಂಡ್ ನ ಬ್ಯಾಂಕಾಕ್ ಲಿಂಕ್ ಇರುವುದು ಪತ್ತೆಯಾಗಿದೆ.**


ಪ್ರಮುಖ ಆರೋಪಿ ಮೆಹರೂಫ್

# ಕೊಡಗಿಗೆ ಸಪ್ಲೈ ಆಗುವ ಗಾಂಜಾಕ್ಕೆ ಬ್ಯಾಂಕಾಕ್ ಲಿಂಕ್! ಖಾಕಿ ಬಲೆಗೆ ಬಿದ್ದಿದ್ದೇಗೆ ಗಾಂಜಾ ಪೆಡ್ಲರ್ಸ್?

ಬಯಕೆ ಈಡೇರಿಸುವ ಮತ್ತು ಜೇಬಿಗೆ ಹಣ ಇಳಿಸಿಕೊಳ್ಳುವ ಸಲುವಾಗಿ ಕೆಲವರು ಗಾಂಜಾ ಪೂರೈಸುವ ಕಾಯಕಕ್ಕೆ ಇಳಿದರು. ಸದ್ದೇ ಇಲ್ಲದಂತೆ ಇದು ನಡೆಯಲಾರಂಭಿಸಿತು. ಪರಿಣಾಮ ಸ್ಥಳೀಯ ಯುವಕರೇ ಇದರ ವ್ಯಸನಿಗಳಾದರು. ಯುವಕರು, ಕಾಲೇಜು ಹುಡುಗರು ಸೇರಿದಂತೆ ಹಲವು ಮಂದಿ ಗಾಂಜಾಕ್ಕೆ ಮುಗಿಬೀಳಲಾರಂಭಿಸಿದರು. ಅಷ್ಟೇ ಅಲ್ಲದೆ ಹೇಳಿದಷ್ಟು ಹಣ ನೀಡಿ ಕೊಂಡೊಯ್ಯುತ್ತಿದ್ದರಿಂದ ರಹಸ್ಯವಾಗಿಯೇ ವಹಿವಾಟು ಶುರುವಾಯಿತು.


ಎಸ್ಪಿ ಕೆ. ರಾಮರಾಜನ್


ಡಿವೈಎಸ್ಪಿ ಎಸ್. ಮಹೇಶ್‌ಕುಮಾರ್

ಸಾಮಾನ್ಯವಾಗಿ ಗಾಂಜಾವನ್ನು ತೋಟದಲ್ಲಿ, ಹೊಲದಲ್ಲಿ ಹೀಗೆ ಭೂಮಿ ಮೇಲೆ ಕೆಲವರು ಬೆಳೆದು ಸಿಕ್ಕಿ ಬಿದ್ದ ಪ್ರಕರಣಗಳು ಬೇಕಾದಷ್ಟಿವೆ. ಕೊಡಗಿನಲ್ಲಿ ಗಾಂಜಾ ಪ್ರಕರಣಗಳನ್ನು ನೋಡಿದ್ದೇ ಆದರೆ ಅದಕ್ಕೆ ಮೂಲ ಕೇರಳಿಗರು ಎನ್ನುವುದನ್ನು ತಳ್ಳಿಹಾಕಲಾಗದು. 1990ರಿಂದ 2005 ಇಸವಿಯ ಅವಧಿಯಲ್ಲಿ ಕೊಡಗಿಗೆ ಶುಂಠಿ ಕೃಷಿ ಮಾಡಲು ಬಂದ ಕೇರಳಿಗರು ಕಾಡು, ಗದ್ದೆ, ಹೀಗೆ ಎಲ್ಲವನ್ನು ಗುತ್ತಿಗೆಗೆ ಪಡೆದು ಅಲ್ಲಿ ಶುಂಠಿ ಬೆಳೆಸಲಾರಂಭಿಸಿದರು. ಈ ವೇಳೆ ಅವರ ಭದ್ರಕೋಟೆಯಲ್ಲಿದ್ದ ಆ ಸ್ಥಳಕ್ಕೆ ಯಾರೂ ಹೋಗುತ್ತಿರಲಿಲ್ಲ.

ಇಂತಹ ಸಮಯದಲ್ಲಿ ಕೆಲವರು ಶುಂಠಿ ನಡುವೆ ಗಾಂಜಾ ಬೆಳೆದರು. ಅದಾದ ನಂತರ ಸ್ಥಳೀಯರ ಸಹಕಾರದಲ್ಲಿ ಕಾಡುಗಳಲ್ಲಿಯೂ ಗಾಂಜಾ ಬೆಳೆದಿದ್ದರು. ಕೆಲವು ಪ್ರಕರಣಗಳನ್ನು ಪೊಲೀಸರು ಪತ್ತೆಹಚ್ಚಿ ಕೋಟ್ಯಂತರ ರೂಪಾಯಿಯ ಗಾಂಜಾವನ್ನು ನಾಶ ಮಾಡಲಾಯಿತು. ಆದರೆ ಬೆಳಕಿಗೆ ಬಾರದೆ ಅದೆಷ್ಟು ಗಾಂಜಾ ಹೊರಗೆ ಹೋಯಿತೋ ಗೊತ್ತಿಲ್ಲ. ಆದರೆ ಒಂದೂವರೆ ದಶಕದ ಅವಧಿಯಲ್ಲಿ ಪೊಲೀಸರು ನೂರಾರು ಕೋಟಿ ಮೌಲ್ಯದ ಗಾಂಜಾವನ್ನು ಪತ್ತೆ ಹಚ್ಚಿದ್ದರು ಎನ್ನುವುದು ತುಸು ನೆಮ್ಮದಿ ಪಡುವ ವಿಚಾರವಾಗಿದೆ.

ಕೊಡಗು
✍ ಬಿ.ಎಂ. ಲವಕುಮಾರ್

ಇದಾದ ನಂತರ ಅದರಲ್ಲೂ ಮೊಬೈಲ್‌ಗಳು ಸಕ್ರಿಯವಾಗಿರುವ ಈ ಸಮಯದಲ್ಲಿ ಯಾರೂ ಕೂಡ ಗಾಂಜಾ ಬೆಳೆಯುವ ಪ್ರಯತ್ನ ಮಾಡುತ್ತಿಲ್ಲ. ಎಷ್ಟೇ ಮುಚ್ಚಿಟ್ಟರೂ ಬಯಲಾಗುತ್ತದೆ. ಅಷ್ಟೇ ಅಲ್ಲದೆ ಪೊಲೀಸರಿಗೆ ಮಾಹಿತಿ ಹೋಗುತ್ತದೆ ಎಂಬ ಭಯವೂ ಇದೆ. ಹೀಗಾಗಿ ಗಾಂಜಾವನ್ನು ಬೆಳೆಯಲು ಹೊಸ ಮಾರ್ಗ ಕಂಡುಕೊಂಡಿದ್ದಾರೆ. ಅದುವೇ ಹೈಡ್ರೋ ಗಾಂಜಾ... ಏನಿದು ಹೈಡ್ರೋ ಗಾಂಜಾ ಎಂಬುದನ್ನು ನೋಡಿದ್ದೇ ಆದರೆ ಇದನ್ನು ಹವಾನಿಯಂತ್ರಿತ ಕೊಠಡಿಯಲ್ಲಿ ಕೃತಕ ಬೆಳಕಿನಲ್ಲಿ ಬೆಳೆಸುತ್ತಾರೆ. ಇದರ ಬೆಲೆ ಕೆಜಿಗೆ ಕೋಟ್ಯಂತರ ರೂಪಾಯಿ ಇದೆ.

ಯಾರಿಗೂ ಗೊತ್ತೇ ಆಗದಂತೆ ಈ ಹೈಡ್ರೋ ಗಾಂಜಾ ಬೆಳೆದು ಸರಬರಾಜು ಮಾಡುತ್ತಿರುವುದರಿಂದ ಅವರನ್ನು ಪತ್ತೆ ಹಚ್ಚುವುದು ಸುಲಭವಾಗಿಲ್ಲ. ಆದರೂ ಇಂತಹದೊಂದು ಜಾಲ ಕೊಡಗಿನವರೆಗೂ ಹರಡಿಕೊಂಡಿದೆ ಎಂಬುದನ್ನು ತೋರಿಸಿ ಕೊಟ್ಟಿದ್ದು ಮಾತ್ರವಲ್ಲದೆ, ಈ ಜಾಲದಲ್ಲಿ ಸಕ್ರಿಯರಾಗಿದ್ದ ಏಳು ಮಂದಿಯನ್ನು ಬಂಧಿಸಿ ಇದರ ಕಿಂಗ್ ಪಿನ್‌ನ್ನೇ ಖೆಡ್ಡಾಕ್ಕೆ ಕೆಡವಿರುವುದು ನಿಜಕ್ಕೂ ಕೊಡಗು ಪೊಲೀಸರ ಸಾಧನೆಯೇ... ಇಷ್ಟಕ್ಕೂ ಗಾಂಜಾ ಕೊಡಗಿಗೆ ಮಾತ್ರವಲ್ಲದೆ, ಭಾರತದ ಇತರೆ ಪ್ರದೇಶ ಮಾತ್ರವಲ್ಲದೆ ದುಬೈಗೂ ಸರಬರಾಜಾಗುತ್ತಿದೆ ಎನ್ನುವುದು ಅಚ್ಚರಿಯಾಗಿದ್ದು, ಇದು ಬರುತ್ತಿರುವುದು ಬ್ಯಾಂಕಾಕ್ ನಿಂದ ಎನ್ನುವುದು ಪೊಲೀಸರ ಕಾರ್ಯಾಚರಣೆಯಿಂದ ಬೆಳಕಿಗೆ ಬಂದಿದೆ.


ಬಂಧಿತ ಆರೋಪಿಗಳು

ಇಷ್ಟಕ್ಕೂ ದುಬೈ ಮಾತ್ರವಲ್ಲದೆ ಕೊಡಗು ಸೇರಿದಂತೆ ಕರ್ನಾಟಕದ ಹಲವು ಪ್ರದೇಶಗಳಿಗೆ ಗಾಂಜಾವನ್ನು ಸರಬರಾಜು ಮಾಡುತ್ತಿದ್ದವನು ಕೇರಳ ಮೂಲದ ಮಹಮ್ಮದ್ ಅನೂಫ್ ಈತ ಥೈಲ್ಯಾಂಡ್ ದೇಶದ ಬ್ಯಾಂಕಾಕ್ ನಗರದಲ್ಲಿ ಕೆಫೆ ಒಂದನ್ನು ಇಟ್ಟುಕೊಂಡಿದ್ದನು. ಈತ ಅಲ್ಲಿಂದ ಹೈಡ್ರೋ ಗಾಂಜಾವನ್ನು ತಂದು ಭಾರತ ಹಾಗೂ ದುಬೈಗೆ ಸಾಗಿಸುವ ಕೆಲಸ ಮಾಡುತ್ತಿದ್ದನು. ಇದೀಗ ಪೆಡ್ಲರ್‌ಗಳು ಸಿಕ್ಕಿಬೀಳುವ ಮೂಲಕ ಹೈಡ್ರೋ ಗಾಂಜಾದ ಜಾಲ ಎಲ್ಲೆಡೆ ವ್ಯಾಪಿಸಿದೆ ಎನ್ನುವುದು ಸತ್ಯವಾಗಿದೆ.

ಬ್ಯಾಂಕಾಕ್‌ನಿಂದ ಕೇರಳ, ಕೇರಳದಿಂದ ದುಬೈ, ಬೆಂಗಳೂರು, ಕೊಡಗು ಹೀಗೆ ಹೆಚ್ಚು ಬೇಡಿಕೆ ಇರುವ ಪ್ರದೇಶಗಳಿಗೆ ಯಶಸ್ವಿಯಾಗಿ ಬಿಕರಿ ಮಾಡುತ್ತಿದ್ದನು

☞ 14

6

ಪಿ.ಸಿ.ಗಳಿದ್ದಾರೆ. ಅವನಿಗೆ ಫೋನ್ ಮಾಡಿ ನಾಟಕ ಆಡಿ ಅವನಿರೋ ಜಾಗ ಪತ್ತೆ ಮಾಡಬೇಕು ಎಂದುಕೊಂಡಿದ್ದನು.

ಆ ದೃಶ್ಯ ಕಂಡಿತು. ರಸ್ತೆಯ ತಿರುವಿನಲ್ಲಿ ಯುವಕನೊಬ್ಬ ಆಟೋಗಾಗಿ ಕಾಯುತ್ತಾ ನಿಂತಿದ್ದಾನೆ.

ಮೊಬೈಲ್‌ಗೆ ಮೇಲಧಿಕಾರಿ ಕಳಿಸಿದ್ದ ಫೋಟೋ ನೋಡಿದನು.

ಅವನೇ ಈ ಯುವಕ. ಕೆಲಸ ಸುಲಭದಲ್ಲಿ ಆಗಿದೆ.

ಜೀಪು ಆ ರಸ್ತೆ ಕಡೆ ತಿರುಗಿತು. ಆದರೆ ಎಡವಟ್ಟಾಯಿತು.

ಅದು ಏನು ಗೊತ್ತೆಫಿ?

ಪೊಲೀಸ್ ಜೀಪು ಚಲಿಸುತ್ತಿರುವಾಗ ಬೈಕಲ್ಲಿ ಸಡನ್ ಆಗಿ ಬಂದಿದ್ದ ಯುವಕ ಗುದ್ದಿಸಿದ್ದನು.

ಜನಗಳು ಸೇರುತ್ತಿದ್ದಾರೆ.

ಆ ದೃಶ್ಯ ಕಂಡಿತು.

ಆ ಯುವಕ ವೀರಭದ್ರ ಆಟೋ ಹತ್ತಿದನು. ''ಸೋನಾರ್‌ಪೇಟೆ ಕಡೆ ಹೋಗು'' ಎಂದು ಹೇಳಿದನು.

ಆಟೋ ಚಲಿಸಿತು.

ಬೈಕ್ ಸವಾರನಿಗೆ ಗಾಯವಾಗಿ ರಕ್ತ ಚೆಲ್ಲಾಡಿದೆ. ಅಂದ ಮೇಲೆ ಜನಗಳು ಸೇರಿರುವಾಗ ಸಡನ್ ಆಗಿ ಹೊರಡಲು ಸಾಧ್ಯವೆ?

ಪೊಲೀಸ್ ಅಧಿಕಾರಿ ಚಂದ್ರಗುಪ್ತ ನಿಂತಲ್ಲೇ ಪರದಾಡುತ್ತಿದ್ದಾನೆ.

●●●

ಸೋನಾರ್‌ಪೇಟೆ. ಟೆಂಪರ್ ಸ್ಟ್ರೀಟ್.

ನಂ. 89, 2ನೇ ಕ್ರಾಸ್.

ಈಗ ಅವನು ಆಟೋ ಡ್ರೈವರ್‌ಗೆ ಗೈಡ್ ಮಾಡುತ್ತಿದ್ದಾನೆ. ಅವನೀಗ ಹೋಗುತ್ತಿರೋದು ಚೈತ್ರಾಳ ಬಂಗಲೆಗೆ.

ರಾತ್ರಿ ಹತ್ತು ಗಂಟೆ.

ಬಂಗಲೆ ಇರುವ ಬಡಾವಣೆಗೆ ಬರುವ ಮೊದಲು ಚೈತ್ರಾಳಿಗೆ ಫೋನ್ ಮಾಡಿದನು. ಅವಳಿಗೆ ಫೋನ್ ಅಟೆಂಡ್ ಮಾಡಲು ಫ್ರೀಡಮ್ ಇರಲಿಲ್ಲಫಿ.

ಸಾರಿ ರಾಂಗ್ ನಂಬರ್!

ಈ ರೀತಿ ಉತ್ತರಿಸಿದ್ದು ಯಾರು?

ಸೂಪರ್‌ವೈಸರ್ ಅನಿತಾ.

ಪುನಹ ಮಾಡಿದನು.

ಅದೇ ಉತ್ತರ ಬಂದಿತು.

ಆ ಬಂಗಲೆಯ ಎದುರಿಗೆ ಆಟೋ ನಿಲ್ಲಿಸಿ ಅದರಿಂದ ಇಳಿದನು.

ಸೆಕ್ಯುರಿಟಿ ಚೇಂಬರ್ ಇದೆ.

ಅವನನ್ನು ಒಳಗೆ ಬಿಡಲಿಲ್ಲಫಿ.

ಆಗ ಫೋನ್ ಕಾಲ್ ಬಂದಿತು. ಯಾವುದೋ ಅನ್‌ನೋನ್ ನಂಬರ್‌ನಿಂದ ಬಂದಿದೆ.

''ಹಲೋ ಯಾರದು?''

''ನೀನು ವೀರಭದ್ರ ತಾನೇ?''

''ಹೌದು ನೀವ್ಯಾರು?''

''ನಾನ್ಯಾರು ಅಂತ ಆಮೇಲೆ ಹೇಳ್ತೀನಿ. ಮೊದಲು ನೀನು ಎಲ್ಲಿದ್ದೀಯ ಅಂತ ಹೇಳು ಮಾರಾಯ.''

''ಸೋನಾರ್‌ಪೇಟೆಯ ಕುವೆಂಪು ಬಡಾವಣೇಲಿ.''

''ಅಲ್ಲಿ ಯಾರಿದ್ದಾರೆ?''

''ಡಿ.ವೈಫಿ.ಎಸ್.ಪಿ. ಗಜೇಂದ್ರ ಅವರ ಮನೆಗೆ ಬಂದಿದ್ದೀನಿ. ಸೆಕ್ಯುರಿಟಿಯವರು ಒಳಗೆಬಿಡುತ್ತಿಲ್ಲಫಿ. ಇನ್ನು ಅವರಹೆಂಡತಿ ಫೋನ್ ಅಟೆಂಡ್ ಮಾಡುತ್ತಿಲ್ಲಫಿ. ಹಾಂ... ನೀವ್ಯಾರು ಅಂತ ಹೇಳಿ.''

''ನಾನು ಪೊಲೀಸ್ ಡಿಪಾರ್ಟ್‌ಮೆಂಟ್‌ನ ಕೆಲಸಗಾರ. ನಾನು ಬಂದರೆ ಸೆಕ್ಯುರಿಟಿಯವರು ನಿನ್ನ ಒಳಗೆ ಬಿಡ್ತಾರೆ.''

''ನಿನಗೆ ಗಜೇಂದ್ರ ಶರ್ಮ ಗೊತ್ತಾಫಿ?''

''ಅವರೇ ನಮ್ಮ ಸಾಹೇಬರು.''

''ನೀವು ಬರದು ಎಷ್ಟು ಹೊತ್ತಾಗುತ್ತೆಫಿ?''

''ಕೇವಲ ಹತ್ತು ನಿಮಿಷ.''

''ನಾನು ಕಾಯುತ್ತಿರುತ್ತೇನೆ ಬನ್ನಿಫಿ.''

●●●

ಎಸ್.ಐ. ಚಂದ್ರಗುಪ್ತ ಅವರು ಈಗ ಯಾವುದೋ ಅಪಘಾತದ ಕೇಸಲ್ಲಿ ಸಿಕ್ಕಿಕೊಂಡಿದ್ದಾರೆ ಎಂದು ತಿಳಿದು ಕೋಪ ಬಂದಿತು.

ರಾತ್ರಿ ಹತ್ತು ಗಂಟೆ.

ಫೋನ್ ಕಾಲ್ ಬಂದಿತು.

ಲೇಡಿ ಸೂಪರ್‌ವೈಸರ್ ಫೋನ್ ಮಾಡಿ ''ಹಲೋ... ಸಾರ್... ಯಾರೋ ಯುವಕ ಫೋನ್ ಮಾಡಿದ್ದಫಿ. ಸೆಕ್ಯುರಿಟಿ ಚೇಂಬರ್‌ನ ಹತ್ತಿರ ಇದ್ದಾನೆ.''

''ಓ ಹೌದಾ... ನೀನು ಅವನನ್ನು ಗಮನಿಸುತ್ತಿರು.''

''ಆಗಲಿ ಸಾರ್.''

ಗಜೇಂದ್ರ ಶರ್ಮ ಕೂಡಲೇ ಫೋನ್ ಮಾಡಿ ವ್ಯವಸ್ಥೆ ಮಾಡಿದನು.

●●●

ಸ್ಟೇಷನ್‌ನಲ್ಲಿದ್ದ ನಾಲ್ಕು ಮಂದಿ ಪಿ.ಸಿ.ಗಳು ಜೀಪಲ್ಲಿ ಈಗ ಸೋನಾರ್‌ಪೇಟೆಯಲ್ಲಿರುವ ಆ ಬಂಗಲೆ ಹತ್ತಿರ ಬಂದರು.

ಅಲ್ಲಿ ಯಾರೂ ಇರಲಿಲ್ಲಫಿ!

ಜೀಪಿನಿಂದ ಇಳಿದು ಎಲ್ಲಾ ಕಡೆ ನೋಡಿದರು ಮತ್ತು ಸೆಕ್ಯುರಿಟಿಯವರನ್ನು ಇವರ ಬಗ್ಗೆ ವಿಚಾರಣೆ ಮಾಡಿದರು.

ಕೆಲವೇ ನಿಮಿಷಗಳ ಹಿಂದೆ ಯಾರೋ ಜೀಪಲ್ಲಿ ಬಂದು ಅವನನ್ನು ಕರೆದುಕೊಂಡು ಹೋದರು.

''ಯಾರು ಎಲ್ಲಿಗೆ ಕರೆದುಕೊಂಡು ಹೋದ್ರುಫಿ?''

ಸೆಕ್ಯುರಿಟಿಯವರು ''ಗೊತ್ತಿಲ್ಲ ಸಾರ್. ಯಾರೋ ನಾಲ್ಕುಮಂದಿ ರೌಡಿಗಳತರ ಇದ್ದವರು ಬಂದಿದ್ರುಫಿ. ಅವನ ಜೊತೆ ಮಾತಾಡಿದ್ರುಫಿ. ಆಗ ಪ್ರಾರಂಭದಲ್ಲಿ ಹಿಂಜರಿದ್ರುಫಿ. ಅವರೆಲ್ಲರೂ ಅವನನ್ನು ಹಿಡಿದು ಹೆಡೆಮುರಿಕಟ್ಟಿ ಎಳೆದುಕೊಂಡು ಹೋದ್ರುಫಿ.''

''ಜೀಪಿನ ನಂಬರ್ ಗೊತ್ತಾಫಿ?''

''ನಾನು ಗಮನಿಸಲಿಲ್ಲ ಸಾರ್.''

ಸಾಹೇಬರು ಕೊಟ್ಟಿದ್ದ ನಂಬರ್‌ಗೆ ಫೋನ್ ಮಾಡಿದರು. ಆದರೆ ರಿಂಗ್ ಆಗುತ್ತಿದ್ದರೂ ಸಹ ಅಟೆಂಡ್ ಮಾಡಲಿಲ್ಲಫಿ. ಕೆಲವು ಕ್ಷಣಗಳ ನಂತರ ಮೊಬೈಲ್ ಸ್ವಿಚ್ ಆಫ್ ಆಗಿರೋದು ಗೊತ್ತಾಯಿತು.

●●●

ಡಿವೈಎಸ್‌ಪಿ ಗಜೇಂದ್ರ ಶರ್ಮ ಆಫೀಸ್ ಚೇಂಬರ್‌ನಲ್ಲಿ ಕುಳಿತಿದ್ದಾನೆ.

ವಿಸ್ಕಿ ಚಪ್ಪರಿಸುತ್ತಿದ್ದಾನೆ.

ಸಿಗರೇಟ್ ಹೊಗೆಯಾಡುತ್ತಿದೆ.

ಹಲವಾರು ವರ್ಷಗಳಿಂದ ಒಡನಾಡಿಗಳಂತೆ ಬೆಳೆದಿರುವ ವೀರಭದ್ರ ಮತ್ತು ನನ್ನ ಹೆಂಡತಿ ಆಕರ್ಷಿತರಾಗದೆ ಇರಲು ಸಾಧ್ಯವೇ ಇಲ್ಲಫಿ.

●●●

ಜೀಪು ವೇಗವಾಗಿ ಹೋಗುತ್ತಿದೆ.

ವೀರಭದ್ರ ಕೋಪದಿಂದ ''ಏ... ಯಾರು... ಹೋಗ್ತಾ ಇದ್ದೀರ?''

''ತಿಥಿ ಮಾಡಿ ಮಜಾ ಮಾಡಲು.'

ವೀರಭದ್ರನ ಕೈ ಕ್ಷಣಗಳಲ್ಲಿ ವಿದ್ಯುತ್ ವೇಗದಲ್ಲಿ ಚಲಿಸಿ, ಎದುರಿಗಿದ್ದ ರೌಡಿಯ ಮುಖದ ಮೇಲೆ ಅಪ್ಪಳಿಸಿತು.

'ಬಡ್' ಎಂಬ ಶಬ್ದದೊಂದಿಗೆ ಮುಖ ಬಗಾಲ್ ಆಯಿತು.

ರಕ್ತ ಸಿಡಿಯಿತು. ಉಳಿದವರು ಕೆರಳಿದರು.

ಏಕಕಾಲದಲ್ಲಿ ವೀರಭದ್ರನ ಮೇಲೆ ಅಟ್ಯಾಕ್ ಮಾಡಿದರು.

ಜೀಪು ಚಲಿಸುತ್ತಿದೆ.

ಫೈಟಿಂಗ್ ನಡೆಯುತ್ತಿದೆ.

ವೀರಭದ್ರನ ಮಿಂಚಿನ ವೇಗದ ರಭಸದ ಪ್ರಹಾರಗಳಿಂದ ತತ್ತರಿಸುತ್ತಿದ್ದಾರೆ.

ದೃಶ್ಯ ಬದಲಾಯಿತು.

ವೀರಭದ್ರ ಜೀಪಿನಿಂದ ನೆಗೆಯಲು ಪ್ರಯತ್ನ ಮಾಡಿದನು. ಆದರೆ ಆ ಕೂಡಲೇ ಜಾಗೃತರಾದ ರೌಡಿಗಳು ಆ ಕ್ಷಣಗಳಲ್ಲಿ ಆಕ್ರಮಣ ಮಾಡಿದರು.

ಸೀಟಿನ ಅಡಿ ಇದ್ದ ಹಗ್ಗದಿಂದ ಅವನನ್ನು ಬಂಧಿಸಿದರು.

ವೀರಭದ್ರ ತನ್ನೆಲ್ಲಾ ಬಲ ಪ್ರಯೋಗ ಮಾಡಿ ಅವರಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಿದನು. ಆದರೆ ಸಾಧ್ಯವಾಗಲಿಲ್ಲಫಿ. ಮೃತ್ಯು ಬಂಧನದ ರೀತಿ ಹಗ್ಗ ಸುತ್ತಿಕೊಂಡಿತು.

●●●

ಎನ್‌ಕೌಂಟರ್ ನೆಪದಲ್ಲಿ ಅವನನ್ನು ಚೆನ್ನಾಗಿ ಬಡಿದು ಪರ್ಮನೆಂಟ್ ಆಗಿ ಹ್ಯಾಂಡಿಕ್ಯಾಪ್ಡ್ ಆಗುವಂತೆ ಮಾಡಬೇಕು ಎಂದುಕೊಳ್ಳುತ್ತಿರುವಾಗಲೇ ಫೋನ್‌ಕಾಲ್ ಬಂದಿತು.

ವಿಷಯ ತಿಳಿದು ವ್ಯಗ್ರನಾದನು. ಯಾಕೆ ಈ ರೀತಿ ಆಯ್ತುಫಿ? ಅವನನ್ನು ಎಳೆದುಕೊಂಡು ಹೋಗಿರುವ ರೌಡಿಗಳು ಯಾರು? ಬಾಗೂರಿನಿಂದ ಬಂದಿರುವ ಹಳ್ಳಿ ಹೈದನಿಂದ ಅವರಿಗೇನಾಗಬೇಕಾಗಿದೆ.

●●●

ವೀರಭದ್ರನನ್ನು ಬಲವಾಗಿ ಒತ್ತಿಕೊಂಡು ಕುಳಿತಿದ್ದಾನೆ.

ಜೀಪಿನ ವೇಗ ಹೆಚ್ಚಾಯಿತು.

ವೀರಭದ್ರ ಬಲ ಪ್ರಯೋಗ ಮಾಡಿ ಅವರನ್ನೆಲ್ಲಾ ತಳ್ಳಿ ಜೀಪಿನಿಂದ ಹೊರಗೆ ನೆಗೆಯಲು ಟ್ರೈ ಮಾಡಿದರು.

ಆದರೆ ಆ ರೌಡಿಗಳು ನೈಲಾನ್ ಹಗ್ಗದಿಂದ ಅವನ ಕೈಗಳನ್ನು ಜೀಪಿನ ಟಾಪ್ ರಾಡ್‌ಗೆ ಬಿಗಿದು ಕಟ್ಟಿದರು.

●●●

ಚೈತ್ರಾಳಿಗೆ ದುಃಖದ ಜೊತೆಗೆ ಗಾಬರಿಯಾಗಿದೆ. ವೀರಭದ್ರ ನನ್ನನ್ನು ನೋಡಲು ಬರಬಾರದಿತ್ತುಫಿ. ಗಂಡನ ಬಗ್ಗೆ ತವರಿನವರಿಗೆ ಆಗಲಿ, ಆತ್ಮೀಯರಿಗೆ ಆಗಲಿ ನಾನೇನೂ ಹೇಳಿರಲಿಲ್ಲಫಿ. ಹಾಗಾಗಿ ವೀರಭದ್ರ ಬಂದಿದ್ದಾನೆ.

ಅವಳು ಬೆಡ್‌ರೂಮಿನ ಕಿಟಕಿಯಿಂದ ನೋಡಿದ್ದಳು. ಆಗ ಅವನು ಸೆಕ್ಯುರಿಟಿ ಗೇಟಿನ ಹತ್ತಿರ ನಿಂತು ಮಾತಾಡುತ್ತಿದ್ದನು.

ಯಾವ ಗಂಡಸರನ್ನೂ ಬಿಡಬಾರದು ಎಂದು ಗಜೇಂದ್ರ ಶರ್ಮ ಆಜ್ಞೆ ಮಾಡಿದ್ದ ವೀರಭದ್ರ ಇವಳಿಗೆ ಫೋನ್ ಮಾಡಿದ್ದನು. ಆಗ ಸೂಪರ್‌ವೈಸರ್ (ಲೇಡಿ) ಅಟೆಂಡ್ ಮಾಡಿ ಮಾತಾಡಿ ಕಟ್ ಮಾಡಿದ್ದಳು.

ನಂತರ ಕಂಡಿದ್ದೇನು?

ಯಾರೋ ರೌಡಿಗಳು ಜೀಪಲ್ಲಿ ಬಂದು ಅವನನ್ನು ಬಲವಂತವಾಗಿ ಎಳೆದುಕೊಂಡು ಹೋಗಿದ್ದನ್ನು ಕಂಡಿದ್ದಳು. ಪಾಪ... ಅವನಿಗೆ ಈ ರೌಡಿಗಳಿಂದ ಯಾವ ರೀತಿ ತೊಂದರೆ ಆಗುತ್ತದೋ ಎಂದು ಹೆದರಿದ್ದಳು. ಆದರೆ ಯಾವ ರೀತಿಯಿಂದಲೂ ಅವಳ ಅವನಿಗೆ ಹೆಲ್ಪ್ ಮಾಡುವ ಸ್ಥಿತಿಯಲ್ಲಿ ಇರಲಿಲ್ಲಫಿ. ಅವಳು ಮೌನವಾಗಿ ಕಂಬನಿ ಮಿಡಿದಳು.

●●●

ವೀರಭದ್ರನನ್ನು ಜೀಪಿನಿಂದ ನೆಲದ ಮೇಲೆ ತಳ್ಳಿದರು.

ದಬಾಲನೆ ಉರುಳಿಬಿದ್ದನು.

ಇಬ್ಬರು ರೌಡಿಗಳು ಅವನ ಕಾಲುಗಳನ್ನು ಹಿಡಿದು ಉರುಳಾಡಿಸುತ್ತಾ ಎಳೆದುಕೊಂಡು ಹೋಗಿ ಆ ಮನೆಯೊಳಗೆ ತಳ್ಳಿದರು.

ಹೊಸಿಲನ್ನು ಎಡವಿದನು.

ದಬಾಲನೆ ಬಿದ್ದನು.

ನೆಲದ ಮೇಲೆ ಬಿದ್ದವನು ತಲೆ ಎತ್ತಿದಾಗ ಆ ದೃಶ್ಯ ಕಂಡರು.

ದೇಹದ ಹಲವಾರು ಕಡೆ ಬ್ಯಾಂಡೇಜ್ ಹಾಕಿಕೊಂಡಿರುವ ಅವನು ನರಳುತ್ತಿದ್ದಾನೆ. ರಕ್ತ ಬ್ಯಾಂಡೇಜ್‌ನಿಂದ ಸಣ್ಣಗೆ ಜಿನುಗುತ್ತಿದೆ. ಇವನ್ಯಾರು ಎಂದು ಕೂಡಲೇ ಗೊತ್ತಾಗಲಿಲ್ಲಫಿ ಅವನಿಗೆ. ಆದರೆ ಕೆಲವು ಕ್ಷಮಗಳ ನಂತರ ಗುರುತು ಸಿಕ್ಕಿತು.

ಅವನು ರೋಡ್ ರೌಡಿ!

ಬಾಗೂರಿನಿಂದ ಬೆಂಗಳೂರಿಗೆ ಬಂದಿದ್ದ ಇವನನ್ನು ರೌಡಿಯೊಬ್ಬ ಗುದ್ದಿ ಬಲವಾಗಿ ತಳ್ಳಿದ್ದನು. ಇವನನ್ನು ತಂದಿದ್ದ ತಿನಿಸುಗಳು, ಪುಡಿ, ಗೊಜ್ಜುಫಿ, ತುಪ್ಪ ಎಲ್ಲಾ ಮಣ್ಣು ಪಾಲಾಗಿತ್ತುಫಿ. ಆ ಕ್ಷಣಗಳಲ್ಲಿ ಕೋಪ ಭುಗಿಲೆದ್ದು ಅವನ ಮೇಲೆ ಅಟ್ಯಾಕ್ ಮಾಡಿದ್ದನು. ಆರು ತಿಂಗಳು ಮೇಲೆ ಏಳದಂತೆ ಬಾಡಿ ರಿಪೇರಿ ಮಾಡಿದ್ದನು.

ಈಗ ಆಗಿರೋದೇನು?

ನೋವಿನಿಂದ ನರಳುತ್ತಿದ್ದ ಆ ರೌಡಿ ಜೋರಾಗಿ ಕಿರುಚಿಕೊಂಡನು.

''ಈ ನನ್ನ ಮಗ ಸಾಯಬೇಕು. ಹೊಡೆದು, ಹೊಡೆದು ಸಾಯಿಸಿ...''

ನಾಲ್ಕು ಣಂದಿ ರೌಡಿಗಳು ಈಗ ಇವನ ಮೇಲೆ ಆಕ್ರಮಣ ಮಾಡಿದರು. ಹಗ್ಗದ ಬಂಧನ ಬಿಗಿಯಾದದ್ದರಿಂದ ಅವರ ಹೊಡೆತಗಳ ನೋವನ್ನು ಅನುಭವಿಸಿದನು.

ಆದರೆ ಕ್ಷಣಗಳಲ್ಲಿ ಬದಲಾದನು ವೀರಭದ್ರಫಿ...! ಅವಕಾಶ ದೊರೆತ ಕೂಡಲೇ ವಿಜೃಂಭಿಸಿದನು.

ವೃತ್ತಿ ರೌಡಿಗಳು ಇವನನ್ನು ಎದುರಿಸಲಾರದೆ ತತ್ತರಿಸಿದರು. ಇವನ ಕೋಪ, ಆವೇಶ, ಆಕ್ರೋಶದ ಪ್ರಹಾರಗಳಿಗೆ ಇಬ್ಬರು ರೌಡಿಗಳು ಬಲಿಯಾದರು. ಇನ್ನಿಬ್ಬರು ಪಲಾಯನ ಮಾಡಿದರು. ಯಾರೋ ಪೊಲೀಸರಿಗೆ ದೂರು ನೀಡಿದ್ದರಿಂದ ಅಲ್ಲಿಗೆ ಬಂದು ಅರೆಸ್ಟ್ ಮಾಡಿದರು. ವೀರಭದ್ರನಿಗೆ ಜೀವಾವಧಿ ಶಿಕ್ಷೆ ಆಗಿದೆ.


## ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲಫಿ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ

ನಂ. 165, 8ನೇ ಮುಖ್ಯರಸ್ತೆಫಿ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079.

ಮೊ : 9513892666

# ಮನೆ ಬಾಡಿಗೆ ಯಜಮಾನಿನೇ ಕೊಂದ ಬಾಡಿಗೆ ದಾರ ಶಿವು!


ಶೋಭ ಪಾಟೀಲ್


ಆರೋಪಿ ಶಿವು ಬಂಡಯ್ಯ ಸ್ವಾಮಿ

**ಈಗಿನ ಕಾಲದಲ್ಲಿ ಯಾರೂ ಯಾರನ್ನೂ ನಂಬಲಾರದಂತಹ ಸ್ಥಿತಿ ಎಲ್ಲೆಡೆ ಸೃಷ್ಟಿಯಾಗುತ್ತಿದೆ. ಈ ಮಾತು ಕೇವಲ ಹೇಳಿಕೆಗಲ್ಲ. ಬದಲಿಗೆ ರಾಯಚೂರು ನಗರದಲ್ಲಿ ಆಗಿರುವ ಭಯಾನಕ ಘಟನೆಯೇ ಇದಕ್ಕೆ ಸಾಕ್ಷಿ. ಹೌದು... ಮನೆ ಖಾಲಿ ಮಾಡು ಎಂದಿದ್ದ ಮನೆ ಒಡತಿಯನ್ನ ಬಾಡಿಗೆದಾರನೇ ಅಮಾನುಷವಾಗಿ ಹತ್ಯೆಗೈದಿದ್ದು, ರಾಯಚೂರು ನಗರ ಬೆಚ್ಚಿ ಬಿದ್ದಿದೆ.**

'ಅತಿಯಾಸೆ ಗತಿಗೆಡಿಸಿತು' ಎಂಬ ಗಾದೆಯಂತೆ ರಾಯಚೂರು ನಗರದ ಉದಯನಗರ ಎಂಬಲ್ಲಿ ಮನೆ ಬಾಡಿಗೆದಾರನೇ ಮನೆಯೊಡತಿಯನ್ನ ಉಸಿರುಗಟ್ಟಿಸಿ ಹತ್ಯೆಗೈದ ಘಟನೆ ನಡೆದಿದೆ. ಮೂಲತಃ ರಾಯಚೂರು ನಗರದವರೇ ಆಗಿರುವ ಶೋಭಾ ಪಾಟೀಲ್ ಬೆಂಗಳೂರಿನಲ್ಲಿ ವಾಸವಿದ್ದರು. ಆದ್ರೆ ರಾಯಚೂರಿಗೆ ಬಂದ ಎರಡು ದಿನದಲ್ಲಿ ಕೊಲೆಯಾಗಿದ್ದು, ಇಡೀ ಉದಯನಗರ ಬೆಚ್ಚಿ ಬಿದ್ದಿದೆ.

ರಾಯಚೂರಿನವರೇ ಆಗಿರುವ ಶೋಭಾ ಪಾಟೀಲ್ ಸಾಕಷ್ಟು ದಿನಗಳಿಂದ ಬೆಂಗಳೂರಿನಲ್ಲಿ ವಾಸವಾಗಿರ್ತಾರೆ. ಇಲ್ಲಿರುವ ಮನೆಯ ಮೇಲ್ಮಹಡಿಯ ಕೊಠಡಿಯನ್ನ ಶಿವು ಬಂಡಯ್ಯಸ್ವಾಮಿ ಎಂಬುವವನಿಗೆ ಕಡಿಮೆ ಹಣಕ್ಕೆ

**ರಾಯಚೂರು**
✍ ವೀರನಗೌಡ

ಬಾಡಿಗೆ ನೀಡಿರ್ತಾರೆ. ಪರಿಚಯಸ್ಥರ ಕಡೆಯಿಂದ ಶೋಭಾ ಪಾಟೀಲ್‌ರ ಮನೆ ಬಾಡಿಗೆಗೆ ಪಡೆದಿದ್ದ ಶಿವು ಬಂಡಯ್ಯಸ್ವಾಮಿ ಮೂಲತಃ ಅರ್ಚಕನಾಗಿ ಕೆಲಸ ಮಾಡ್ತಿದ್ದ. ಬೆಂಗಳೂರಿನಿಂದ ಆಗಾಗ ರಾಯಚೂರಿಗೆ ಬರುವ ಶೋಭಾ ಅವರು ಕೇವಲ ಎರಡ್ಮೂರು ದಿನದ ಮಟ್ಟಿಗೆ ಇಲ್ಲಿಯೇ ಇರುತ್ತಾರೆ ಎಂದು ಹೇಳಲಾಗಿದೆ. ಆ ಎರಡ್ಮೂರು ದಿನದ ಮಟ್ಟಿಗೆ ಶಿವು ಮಾತ್ರ ಬೇರೆಡೆ ವಾಸ ಇರ್ತಿದ್ದ ಎನ್ನಲಾಗಿದೆ.


ಎಸ್ಪಿ ಪುಟ್ಟಮಾದಯ್ಯ

ಮನೆ ಓರ್ವ ಶೋಭಾ ಪಾಟೀಲ್ ಬೆಂಗಳೂರಿನಿಂದ ಇದೇ 21ರಂದು ರಾಯಚೂರಿಗೆ ಬಂದಿದ್ದಾರೆ. ಅಷ್ಟೇ ಅಲ್ಲ, ಇನ್ಮುಂದೆ ಇಲ್ಲಿಯೇ ವಾಸ ಇರ್ತೇನೆ ಮನೆ ಖಾಲಿ ಮಾಡು ಎಂದು ಬಾಡಿಗೆದಾರ ಆರೋಪಿಗೆ ಹೇಳಿದ್ದಾರೆ. ಸರಿ ಮನೆ ಖಾಲಿ ಮಾಡುತ್ತೇನೆ ಎಂದು ಮನೆ ಮಾಲೀಕಳ ಮುಂದೆ ತಲೆ ಅಲ್ಲಾಡಿಸಿದ್ದ ಹಂತಕ ಶಿವು ಬಂಡಯ್ಯಸ್ವಾಮಿ ಒಳಗೊಳಗೆ ಬೇರೆಯೇ ಸ್ಕೆಚ್ ಹಾಕಿದ್ದ.

ಇದೇ 24ನೇ ತಾರೀಖು ಮನೆ ಓನರ್ ಶೋಭಾಳ ಮನೆಗೆ ರಾತ್ರಿ 9 ಗಂಟೆಗೆ ಏಕಾಏಕಿ ಬಂದಿದ್ದ ಆರೋಪಿ ಶಿವು ತಲೆ ದಿಂಬು ಬಳಸಿ ಶೋಭಾಳ ಉಸಿರು ನಿಲ್ಲಿಸಿದ್ದಾರೆ. ಆಮೇಲೆ ಏನೂ ತಿಳಿದಂತೆ ನಟಿಸಿ ಮೃತಳ ಮಕ್ಕಳಿಗೆ ಕರೆ ಮಾಡಿ ತಾಯಿ ಮೃತಪಟ್ಟಿದ್ದಾಳೆ ಎಂದು ಮೊಸಳೆ ಕಣ್ಣೀರು ಸುರಿಸಿದ್ದಾನೆ. ಅಷ್ಟೇ ಅಲ್ಲ, ಮೃತರಸ್ವಗ್ರಾಮಕ್ಕೆಕರೆದೊಯ್ದುಶಾಸ್ತ್ರೋಕ್ತವಾಗಿ ಅಂತ್ಯಸಂಸ್ಕಾರ ಮಾಡಿ, ರಾಯಚೂರಿನ ಮನೆಗೆ ಬಂದು ಇಡೀ ಮನೆಯನ್ನ ಶುದ್ಧೀಕರಿಸಿದ್ದಾನೆ. ಮೃತ ಶೋಭಾರಿಗೆ ಹೃದಯ ಸಂಬಂಧ ಖಾಯಿಲೆ ಇದ್ರಿಂದ ಸಹಜ ಸಾವು ಎಂದು ಎಲ್ಲರೂ ನಂಬಿದ್ದರು. ಇದನ್ನೇ ಲಾಭ ಪಡೆದಿದ್ದ ಹಂತಕ ಶಿವು ತಾನೇ ಮುಂದೆ ನಿಂತು ಅಂತ್ಯಸಂಸ್ಕಾರ ನೆರವೇರಿಸಿ ಯಾರಿಗೂ ಅನುಮಾನ ಬರದಂತೆ ನಡೆದುಕೊಂಡಿದ್ದ. ಆದ್ರೆ ಮೃತಳ ಪುತ್ರನಿಗೆ ತಾಯಿ ಸಾವಿನ ಬಗ್ಗೆ ಅನುಮಾನ ಉಂಟಾಗಿದೆ.

ತಾಯಿಯ ಕುತ್ತಿಗೆಯಲ್ಲಿದ್ದ ಮಾಂಗಲ್ಯ ಸರ, ಕಿವಿಯೋಲೆ, ಹಾಗೂ ಮೊಬೈಲ್ ಕಾಣೆಯಾದ್ರಿಂದ ಅನುಮಾನ ಮತ್ತಷ್ಟು ಹೆಚ್ಚಿಸಿದೆ. ನಂತರ ಪುತ್ರ ರಾಯಚೂರಿನ ಪಶ್ಚಿಮ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಬಳಿಕ ಸತ್ಯಾಂಶ ಹೊರ ಬಂದಿದೆ. ಮೊದಲಿಗೆ ಆರೋಪಿ ಶಿವು ಬಂಡಯ್ಯಸ್ವಾಮಿ ವಿಚಾರಣೆಗೆ ಪೊಲೀಸರು ಕರೆದಿದ್ದಾಗ ಏನೂ ತಿಳಿಯದಂತೆ ನಾಟಕ ವಾಡಿದ್ದಾನೆ. ನಂತರ ಪೊಲೀಸರು ತನಿಖೆ ಚುರುಕುಗೊಳಿಸಿದಾಗ ನಿಜಾಂಶ ಬಾಯ್ ಬಿಟ್ಟಿದ್ದಾನೆ. ತಾನೇ ಶೋಭಾ ಪಾಟೀಲ್ ಅವರನ್ನು ಹತ್ಯೆಗೈದಿದ್ದಾಗಿ, ಚಿನ್ನಾಆರೋರಣ ದೋಚಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ. ಇತ್ತೀಚಿನ ದಿನಗಳಲ್ಲಿ ನಂಬಿಕೆ ದ್ರೋಹದಂತಹ ಘಟನೆಗಳು ಹೆಚ್ಚುತ್ತಿದ್ದ ಪರಸ್ಪರ ಯಾರ ಮೇಲೂ ವಿಶ್ವಾಸ, ನಂಬಿಕೆ ಇಡದಂತಹ ಪರಸ್ಥಿತಿ ನಿರ್ಮಾಣ ಆಗಿದೆ. ಕೊಲೆಗಾರ ಶಿವುಸ್ವಾಮಿಯಂತಹ ಗೋಮುಖ ವ್ಯಾಘ್ರಗಳಿಂದ ಅಮಾಯಕರ ಜೀವ ಬಲಿಯಾಗುತ್ತಿವೆ. ☯


ಸಿಪಿಐ ಮೇಕಾ ನಾಗರಾಜ್


ಪಿಎಸ್ಐ ಮಂಜುನಾಥ್


ಶೋಭಾ ಪಾಟೀಲ್‌ರ ಮನೆ


ವಿಚಾರಣೆಯ ಸಮಯದಲ್ಲಿ ಪೊಲೀಸರು

---

7 ☞

ಆರೋಪದಡಿಯಲ್ಲಿ ಈತನ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತುಫಿ. ಈ ಪ್ರಕರಣ ಮದ್ರಾಸ್ ಹೈಕೋರ್ಟ್ ಮೆಟ್ಟಿಲೇರಿತು. ವಾದ, ಪ್ರತಿ ವಾದಗಳನ್ನೆಲ್ಲ ಆಲಿಸಿದ ನ್ಯಾಯಾಲಯವು ವಿದ್ಯುನ್ಮಾನ ಸಾಧನಗಳಲ್ಲಿ ಮಕ್ಕಳ ಅಶ್ಲೀಲ ವಿಡಿಯೋಗಳನ್ನು ಡೌನ್‌ಲೋಡ್ ಮಾಡುವುದು ಅಥವಾ ವೀಕ್ಷಿಸುವುದು ಪೋಕ್ಸೋ ಮತ್ತು ಐಟಿ ಕಾಯ್ದೆ ಅಡಿಯಲ್ಲಿ ಅಪರಾಧವಲ್ಲ ಎಂದು ನ್ಯಾಯಮೂರ್ತಿ ಎನ್. ಆನಂದ್ ವೆಂಕಟೇಶ್ ಅವರಿದ್ದ ನ್ಯಾಯಪೀಠ ಆದೇಶವನ್ನು ನೀಡಿ ಆರೋಪಿ ಎಸ್. ಹರೀಶ್ ಮೇಲಿದ್ದ ಮೊಕದ್ದಮೆಯನ್ನು ರದ್ದು ಮಡಿತ್ತುಫಿ. ಮದ್ರಾಸ್ ಹೈಕೋರ್ಟ್‌ನದೇಶವನ್ನು ಪ್ರಶ್ನಿಸಿ ತೀರ್ಪಿನ ವಿರುದ್ಧ ಜಸ್ಟ್ ರೈಟ್ ಫರ್ ಚಿಲ್ಡ್ರನ್ ಅಲೈಯನ್ಸ್ ಎನ್ನುವ ಸರ್ಕಾರೇತರ ಸಂಸ್ಥೆ ಮೇಲ್ಮನವಿ ಸಲ್ಲಿಸಿತು. ಈ ಮೇಲ್ಮನವಿಯನ್ನು ಪರಿಗಣಿಸಿದ್ದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈಫಿ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಜೆ.ಬಿ. ಪರ್ದಿವಾಲಾ ಅವರಿದ್ದ ಪೀಠ ಪೋಕ್ಸೋ ಕಾಯ್ದೆಯ ಸೆಕ್ಷನ್ 15ರ ಅಡಿಯಲ್ಲಿ ತನಿಖೆಗೆ ಆದೇಶ ನೀಡಿದೆ. ಇದೇ ವೇಳೆ ಮಕ್ಕಳ ಅಶ್ಲೀಲ ಚಿತ್ರ ಎಂಬ ಪದ ಬಳಸುವುದಕ್ಕೆ ಅಸಮ್ಮತಿ ವ್ಯಕ್ತಪಡಿಸಿದ ನ್ಯಾಯಾಲಯ ಸುಗ್ರೀವಾಜ್ಞೆ ಮೂಲಕ ಕೇಂದ್ರ ಸರ್ಕಾರ ಪೋಕ್ಸೋ ಕಾಯ್ದೆಗೆ ತಿದ್ದುಪಡಿ ತಂದು ಅದನ್ನು 'ಮಕ್ಕಳ ಲೈಂಗಿಕ ಶೋಷಣೆ ಮತ್ತು ದೌರ್ಜನ್ಯದ ಮತ್ತು ಹೊಂದಿರುವ ಚಿತ್ರ' ಎಂದು ಹೆಸರಿಸುವಂತೆ ಸಲಹೆ ನೀಡಿತು. ಅಲ್ಲದೆ 'ಮಕ್ಕಳ ಅಶ್ಲೀಲ ಚಿತ್ರ' ಎಂಬ ಪದ ಬಳಸದಂತೆ ಅದು ಎಲ್ಲಾ ನ್ಯಾಯಾಲಯಗಳಿಗೂ ಸೂಚಿಸಿತು.

### ಮಕ್ಕಳ ದುರ್ಬಳಕೆ

ಮಕ್ಕಳನ್ನು ಬಳಸಿಕೊಂಡು ಮಾಡಲಾಗುವ ಅಶ್ಲೀಲ ಚಿತ್ರಗಳನ್ನು ಇಂಗ್ಲೀಷ್‌ನಲ್ಲಿ ಚೈಲ್ಡ್ ಪೋರ್ನೋಗ್ರಫಿ ಎನ್ನುತ್ತಾರೆ. ಅಪ್ರಾಪ್ತ ವಯಸ್ಕ ಹೆಣ್ಣಾಗಲಿ ಅಥವಾ ಗಂಡಾಗಲಿ ಅವರನ್ನು ಬಳಸಿಕೊಂಡು ಲೈಂಗಿಕ ಚಿತ್ರಗಳನ್ನು ರಚಿಸುವುದು, ರಚಿಸಿದ ಚಿತ್ರಗಳನ್ನು ವಿತರಣೆ ಮಾಡುವುದು ಅಥವಾ ಹಂಚುವುದು ಮತ್ತು ಅವುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವುದನ್ನೇ ವಿಸ್ತಾರಾರ್ಥದಲ್ಲಿ ಚೈಲ್ಡ್ ಪೋರ್ನೋಗ್ರಫಿ ಅಂತ ಕರೆಯಲಾಗುತ್ತದೆ. ಮಕ್ಕಳ ಲೈಂಗಿಕ ಶೋಷಣೆಯ ಚಿತ್ರೀಕರಣವು ಕೆಲ ಮಾಹಿತಿ ಪ್ರಕಾರ ಪರಿಚಿತರ ಮನೆಯಲ್ಲಿಯೇ ನಡೆಯುತ್ತದೆ. ಮಕ್ಕಳ ಮುಗ್ಧತೆ ಹಾಗೂ ಲೈಂಗಿಕ ಅಜ್ಞಾನವನ್ನು ಹೆಚ್ಚಾಗಿ ಪರಿಚಿತರೇ ದುರುಪಯೋಗ ಪಡಿಸಿಕೊಂಡು ಚೈಲ್ಡ್ ಪೋರ್ನ್ ವಿಡಿಯೋಗಳನ್ನು ಮಾಡುತ್ತಾರೆ. ಅಪ್ರಾಪ್ತರನ್ನು ನಗ್ನವಾಗಿಯೇ ಅಥವಾ ಅರೆನಗ್ನವಾಗಿಯೇ ಬಳಸಿಕೊಂಡು ವಿಡಿಯೋ ಮಾಡಿ ನಂತರ ಅದನ್ನು ವೆಬ್‌ಸೈಟ್‌ಗಳಲ್ಲಿ ಹಂಚಿಕೊಳ್ಳಲಾಗುತ್ತದೆ. ಕಳೆದ ಕೆಲ ವರ್ಷಗಳಿಂದ ಮಕ್ಕಳ ಲೈಂಗಿಕ ಚಿತ್ರಗಳ ವೀಕ್ಷಣೆ ಹೆಚ್ಚಾಗಿದ್ದ ಕಾರಣ ಹಾಗೂ ಶೇ. 50ಕ್ಕಿಂತ ಹೆಚ್ಚು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದಾರೆ. ಇದನ್ನೇ ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರವು ಸುಮಾರು 857 ಅಶ್ಲೀಲ ವೆಬ್‌ಸೈಟ್‌ಗಳನ್ನು ಬ್ಯಾನ್ ಮಾಡಿದೆ. ಭಾರತದಲ್ಲಿ ಚೈಲ್ಡ್ ಪೋರ್ನೋಗ್ರಫಿ ಹೆಚ್ಚುತ್ತಲೇ ಇರುವ ಕಾರಣ ಕೆಲ ನಿರ್ದಾಕ್ಷಿಣ್ಯ ಕ್ರಮಗಳನ್ನು ಹಾಗೂ



ಕಠೋರ ಕಾನೂನುಗಳನ್ನು ತರುವುದು ಅನಿವಾರ್ಯವಾಗಿದೆ. ಈಗಾಗಲೇ ದೇಶದಲ್ಲಿ ಮಕ್ಕಳ ಅಶ್ಲೀಲ ವಿಡಿಯೋ ಮತ್ತು ಫೋಟೋವನ್ನು ತೆಗೆಯುವುದು, ಅದನ್ನು ಹಂಚಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಆದರೆ ಭಾರತದಲ್ಲಿ ಮಕ್ಕಳ ಅಶ್ಲೀಲ ವಿಡಿಯೋ ತೆಗೆಯುವುದಾಗಲಿ, ವೀಕ್ಷಿಸುವುದಾಗಲಿ ನಿಂತಿಲ್ಲಫಿ. ಇಂತಹ ಹೀನಕೃತ್ಯಗಳನ್ನು ನಡೆಸುವವರನ್ನು ಶಿಕ್ಷಿಸುವುದಕ್ಕಾಗಿ ಪ್ರತ್ಯೇಕ ತನಿಖಾ ಸಂಸ್ಥೆ ಆಗಬೇಕೆನ್ನುವುದೇ ಜನರ ಕೂಗಾಗಿದೆ. ☯


ವಿದ್ಯಾರ್ಥಿಗಳಿಂದ ಶುಚಿತ್ವ ಮಾಡಿಸಿದ್ದು ಶೌಚ ಗುಂಡಿ ಬಳಿ ರಾಜಕೀಯ ಮುಖಂಡರಿಂದ ಪರಿಶೀಲನೆ

## ಮಂಗಳೂರು : ಸಿಸಿಬಿ, ಎಸಿಪಿ ಮನೋಜ್‌ಕುಮಾರ್ ನಾಯಕ ನೇತೃತ್ವದ ಕಾರ್ಯಾಚರಣೆ...

# ನಿಷೇಧಿತ ಮಾದಕ ವಸ್ತು 'ಮೆಥಾಂಫೆಟಮೆನ್' ಮಾರಾಟ ಮಾಡುತ್ತಿದ್ದ 5 ಜನ ಕ್ರಿಮಿನಲ್‌ಗಳ ಬಂಧನ

ಮನ್ನಾಪೂರ

ಅದೊಂದು ಕಾಲವಿತ್ತುಫಿ. ಗಾಂಜಾ, ಅಫೀಮು, ಚರಸ್‌ನಂತಹ ಅಮಲು ಪದಾರ್ಥಗಳಿಗೆ ಬಹಳಷ್ಟು ಬೇಡಿಕೆಯಿತ್ತುಫಿ. ನಂತರದ ದಿನಗಳಲ್ಲಿ ಬ್ರೌನ್‌ಶುಗರ್, ಹೆರಾಯಿನ್, ಮ್ಯಾಂಡ್ರೆಕ್ಸ್‌ನಂತಹ ಮಾದಕ ಪದಾರ್ಥಗಳು ಒಂದರ್ಥದಲ್ಲಿ ಇನ್ನಿಲ್ಲದಂತೆ ಹವಾ ಕ್ರಿಯೇಟ್ ಮಾಡಿದ್ದವು. ಆಮೇಲೆ ಮೆಲ್ಲಗೆ ಸದ್ದಿಲ್ಲದೇ 'ಫನ್ನಿ' ಎಂಬ ವಿಚಿತ್ರ ರೀತಿಯ ಅಮಲು ಪದಾರ್ಥ ಕೆಲದಿನ ಮಾದಕ ಲೋಕದಲ್ಲಿ ಮೆರೆದು ಮರೆಯಾಯಿತು ಎನ್ನುವುದರೊಳಗಾಗಿ ಇತ್ತೀಚಿಗೆ ಸಕ್ಕರೆ ಹರಳಿನಂತೆ ಕ್ರಿಸ್ಟಲ್ ರೂಪದ 'ಮೆಥಾಂಫೆಟಮೆನ್' ಎಂಬ ಮಾದಕ ಪದಾರ್ಥ ಸದ್ದಿಲ್ಲದೇ ಬೆಳೆದು ನಿಂತಿದೆ. ಹೆಚ್ಚಾಗಿ ಯುವಜನತೆ ಮತ್ತು ಕಾಲೇಜು ತರುಣರನ್ನೇ ಗುರಿಯಾಗಿರಿಸಿಕೊಂಡು ಡ್ರಗ್ ಪೆಡ್ಲರ್‌ಗಳು ತಮ್ಮ ಜಾಲ ಬೆಳೆಸಿಕೊಳ್ಳುತ್ತಿದ್ದಾರೆ.

**ಮಂಗಳೂರಿನಲ್ಲಿ 'ಮೆಥಾಂಫೆಟಮೆನ್'...**

ದಿನದಿಂದ ದಿನಕ್ಕೆ ಮಂಗಳೂರು ಮತ್ತು ಉಡುಪಿ ಶರವೇಗದಲ್ಲಿ ಬೆಳೆಯುತ್ತಿವೆ. ಒಂದು ಕಾಲದಲ್ಲಿ ಮುಂಬೈ ಭೂಗತ ಜಗತ್ತಿನ ನಂಟು ಬೆಳೆಸಿಕೊಂಡು 'ಇಡ್ಲಿ-ದೋಸಾ ಮಾಫಿಯಾ' ಎಂದು ಹೆಸರು ಮಾಡಿದ್ದ ಶೆಟ್ಟಿಗಳದ್ದೇ ಒಂದು ಇತಿಹಾಸವಿದೆ. ಇಂತಹ ಮಂಗಳೂರಿಲ್ಲಿ ಕಳೆದ ಸುಮಾರು ವರ್ಷಗಳಿಂದಲೂ ಅಕ್ರಮವಾಗಿ ಮಾದಕ ಪದಾರ್ಥಗಳ ಮಾರಾಟ ಜಾಲವನ್ನು ತನ್ನೊಳಗೆ ಅಡಗಿಸಿಟ್ಟುಕೊಂಡಿತ್ತುಫಿ. ಆದರೆ ಮಂಗಳೂರು ಮತ್ತು ಉಡುಪಿಗಳಲ್ಲಿನ ಹಿರಿಯ ಪೊಲೀಸ್ ಅಧಿಕಾರಿಗಳ ದಿಟ್ಟ ನಿರ್ಣಯದಿಂದ ಇದೀಗ ಮಾದಕ ಪದಾರ್ಥಗಳ ಮಾಫಿಯಾ ಜಾಲ ಪತರುಗುಟ್ಟಿದೆ. ಆದರೆ ಕೆಲವೊಂದು ಪುಡಿ ಡ್ರಗ್ ಪೆಡ್ಲರ್‌ಗಳು ದೂರದ ಮುಂಬೈಫಿ, ಗೋವಾ, ಬೆಂಗಳೂರು ಕಡೆಯಿಂದ 'ಮೆಥಾಂಫೆಟಮೆನ್' ಎಂಬ ನಿಷೇಧಿತ ಮಾದಕ ಪದಾರ್ಥ ಅಕ್ರಮವಾಗಿ ಖರೀದಿಸಿ ತಂದು ಇತ್ತೀಚಿಗೆ ಮಂಗಳೂರು ಪರಿಸರದಲ್ಲಿ ಮಾರಾಟ ಮಾಡಿ ಐಷಾರಾಮಿ ಜೀವನ ನಡೆಸಲು ಪ್ರಯತ್ನಿಸಿದ್ದರು. ಆದರೆ ಮಂಗಳೂರಿನ ಪೊಲೀಸ್ ಕಮೀಷನರ್ ಅನುಪಮ ಅಗರವಾಲ್ ನಿರ್ದೇಶನದಲ್ಲಿ ಡಿಸಿಪಿ (ಕಾ.ಸು) ಸಿದ್ಧಾರ್ಥ ಗೋಯೆಲ್, ಡಿಸಿಪಿ (ಕ್ರೈಂ) ಬಿ.ಪಿ. ದಿನೇಶಕುಮಾರ್, ಸಿಸಿಬಿಯ ಎಸಿಪಿ ಮನೋಜ್‌ಕುಮಾರ್ ನಾಯಕರಂತಹ ದಿಟ್ಟ ಅಧಿಕಾರಿಗಳು ನಡೆಸುತ್ತಿರುವ ಕಾರ್ಯಾಚರಣೆಯಿಂದ ಮಾದಕ ಪದಾರ್ಥಗಳ ಮಾಫಿಯಾ ಕುಳಗಳು ಇಂದು ಸಂಪೂರ್ಣ ಅಂಡರ್‌ಗ್ರೌಂಡ್ ಆಗಿದ್ದಾರೆ. ಇತ್ತೀಚಿಗೆ ಮಂಗಳೂರು ನಗರದ ಕೋಣಾಜೆ ಪೊಲೀಸ್ ಠಾಣೆ ಪರಿಸರದಲ್ಲಿ 'ಮೆಥಾಂಫೆಟಮೆನ್' ಮಾರಾಟ ಮಾಡುವಾಗ ರೆಡ್‌ಹ್ಯಾಂಡಾಗಿ ಐದು ಜನರನ್ನು ಬಂಧಿಸಿ ಅವರಿಂದ ಲಕ್ಷಾಂತರ ರೂ.ಗಳ ಮಾದಕ ಪದಾರ್ಥಗಳನ್ನು ವಶಪಡಿಸಿಕೊಳ್ಳುವಲ್ಲಿ ಸಿಸಿಬಿ ಎಸಿಪಿ ಮನೋಜ್ ಕುಮಾರ್ ನಾಯಕ ಅವರ ತಂಡ ಯಶಸ್ವಿ ಆಗಿದೆ.



ಬಂಧಿತ 'ಮೆಥಾಂಫೆಟಮೆನ್' ಮಾರಾಟದ ಆರೋಪಿಗಳಾದ ಹಸನ್ ಅಸೀರ್, ಯಾಸೀನ್ ಇಮ್ರಾಜ್ ಯಾನೆ, ಮೊಹ್ಮದ್ ನೌಶಾದ್, ರಿಯಾಜ್ ಎ.ಕೆ., ಅಬ್ದುಲ್ ಶಾಕೀರ್

**ಮೈ ಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದ ಮಹಾ ಐನಾತಿ ಹರಾಮಿಗಳು ಮೋಜು-ಮಜಾ-ಮಸ್ತಿ ಮಾಡಿಕೊಂಡು ಐಷಾರಾಮಿ ಜೀವನ ಸಾಗಿಸುವ ಉದ್ದೇಶದಿಂದ ಬಹು ಅಪಾಯಕಾರಿ ನಿಷೇಧಿತ ಮಾದಕ ವಸ್ತು 'ಮೆಥಾಂಫೆಟಮೆನ್' (MDMA) ಮಾರಾಟದಲ್ಲಿ ತೊಡಗಿದ್ದರು. ಹೆಚ್ಚಾಗಿ ಸಾರ್ವಜನಿಕರನ್ನು ಮತ್ತು ವಿದ್ಯಾರ್ಥಿಗಳನ್ನೇ ಗುರಿಯಾಗಿರಿಸಿಕೊಂಡು ಮಾದಕ ವಸ್ತು ಪೂರೈಸುವ ಜಾಲದ ಬಗ್ಗೆ ಮಂಗಳೂರು ಪೊಲೀಸ್ ಕಮೀಷನರ್ ಅನುಪಮ ಅಗರವಾಲ್, ಡಿಸಿಪಿಗಳಾದ ಸಿದ್ಧಾರ್ಥ ಗೋಯಲ್, ಬಿ.ಪಿ. ದಿನೇಶಕುಮಾರ್ ನಿರ್ದೇಶನದಲ್ಲಿ ಸಿಸಿಬಿ ಘಟಕದ ಧಾಡಸಿ ಎಸಿಪಿ ಮನೋಜ್‌ಕುಮಾರ್ ನಾಯಕ ಸೂಕ್ಷ್ಮವಾಗಿ ಒಂದು ಕಣ್ಣಿಟ್ಟಿದ್ದರು. ಇತ್ತೀಚಿಗೆ ಖಚಿತವಾದ ಮಾಹಿತಿ ಆಧರಿಸಿ ಇನ್ಸ್‌ಪೆಕ್ಟರ್ ಶಾಮಸುಂದರ ಹೆಚ್.ಎಂ., ಪಿಎಸ್‌ಐ ಶರಣಪ್ಪ ಭಂಡಾರಿ ಮತ್ತು ಸಿಬ್ಬಂದಿಗಳು ಎಸಿಪಿ ಮನೋಜ್‌ಕುಮಾರ್ ನಾಯಕ ನೇತೃತ್ವದಲ್ಲಿ ಮಿಂಚಿನ ಕಾರ್ಯಾಚರಣೆ ನಡೆಸಿ ಐವರು ಆರೋಪಿಗಳ ಹೆಡೆಮುರಿ ಕಟ್ಟಿದ್ದಾರೆ. ಬಂಧಿತರಿಂದ ಮಾದಕ ವಸ್ತು ಸೇರಿದಂತೆ 4.25 ಲಕ್ಷ ರೂ.ಗಳ ಸ್ವತ್ತನ್ನು ವಶಪಡಿಸಿಕೊಂಡ ಪ್ರಕರಣ ವರದಿಯಾಗಿದೆ.**



ಡಿಸಿಪಿ (ಕಾ.ಸು) ಸಿದ್ಧಾರ್ಥ ಗೋಯಲ್



ಡಿಸಿಪಿ (ಕ್ರೈಂ) ಬಿ.ಪಿ. ದಿನೇಶ್‌ಕುಮಾರ್

**ಐವರು ಐನಾತಿಗಳಿಂದ 'ಮೆಥಾಂಫೆಟಮೆನ್'...**

ಮೈಮುರಿದು ದುಡಿದು ತಿನ್ನಲಾರದೇ, ಐಷಾರಾಮಿ ಜೀವನ ಸಾಗಿಸುವ ಉದ್ದೇಶದಿಂದ ಮಂಜೇಶ್ವರದ ಪ್ರಸಕ್ತ ಶಿವಮೊಗ್ಗ ಜಿಲ್ಲೆಯ ಟಿಪ್ಪುನಗರದ ಅಬ್ದುಲ್ ಶಾಕೀರ್ (24 ವ), ಕುಂಜತ್ತೂರು ಉದ್ಯಾವರದ ಹಸನ್ ಆಸೀರ್ (34 ವ), ಕೇರಳದ ಕಣ್ಣೂರ ಜಿಲ್ಲೆಯ ಪಯ್ಯನೂರಿನ ರಿಯಾಜ್ ಎ.ಕೆ. (31 ವ), ವರ್ಕಾಡಿ ಪಾವೂರಿನ ನೌಷಾದ್ (22 ವ), ಕುಂಜತ್ತೂರಿನ ಯಾಸೀನ್ ಇಮ್ರಾಜ್ ಯಾನೆ (35 ವ) ಎಂಬ ಐದು ಜನ ಮುಸ್ಲಿಂ ಯುವಕರು ಒಂದೆಡೆ ಸೇರಿಕೊಂಡು 'ಮೆಥಾಂಫೆಟಮೆನ್' ಮಾದಕ ಪದಾರ್ಥ ತಂದು ಮಾರಾಟ ಮಾಡಿ ಲಾಭ ಗಳಿಸಿ ಐಷಾರಾಮಿ ಜೀವನ ಸಾಗಿಸುವ ಪ್ಲ್ಯಾನ್ ಮಾಡಿಕೊಂಡಿದ್ದರು. ತಮಗಿರುವ ಕನೆಕ್ಷನ್ ಮೂಲಕ ಬೆಂಗಳೂರು, ಮುಂಬೈಫಿ, ಗೋವಾದ ಕಡೆಗಳಿಂದ ಬಹು ಅಪಾಯಕಾರಿ ನಿಷೇಧಿತ 'ಮೆಥಾಂಫೆಟಮೆನ್' ತರಿಸಿಕೊಂಡು ಸದ್ದಿಲ್ಲದೇ ಕೇರಳ ಮತ್ತು ಕರ್ನಾಟಕದ ರಾಜ್ಯದ ಸಾರ್ವಜನಿಕರಿಗೆ ಮಾರಾಟ ಮಾಡುತ್ತಿದ್ದರು. ಮಂಗಳೂರು, ಮಣಿಪಾಲ, ಉಡುಪಿ ಮತ್ತಿತರ ಕಡೆಗಳಲ್ಲಿ ಇಂಜಿನೀಯರಿಂಗ್, ಮೆಡಿಕಲ್, ಮತ್ತಿತರ ಕಾಲೇಜುಗಳಿದ್ದು ಇಲ್ಲಿ ವ್ಯಾಸಂಗಕ್ಕೆಂದು ಹೊರ ರಾಜ್ಯದ ವಿದ್ಯಾರ್ಥಿಗಳು ಬರುವುದುಂಟು. ಅಂತಹ ಹಲವಾರು ಜನ ವಿದ್ಯಾರ್ಥಿಗಳನ್ನು ಸಂಪರ್ಕಿಸಿ ಮಾದಕ ವಸ್ತುಗಳ ಮಾರಾಟ ಜಾಲವನ್ನು ವಿಸ್ತರಿಸಿಕೊಂಡು ತಮ್ಮ ಕೃತ್ಯ ಸಲೀಸಾಗಿ ಮಾಡಿಕೊಂಡಿದ್ದರು ಐನಾತಿಗಳು. ತಮ್ಮ ಕೃತ್ಯ ಯಾರಿಗೂ ಗೊತ್ತಾಗದ ಹಾಗೇ ಮಾರಾಟದ ತಂತ್ರವನ್ನು ಅನುಸರಿಸಿದ್ದರು.



ಕಮೀಷನರ್ ಅನುಪಮ ಅಗರವಾಲ್

**ಎಸಿಪಿ ಮನೋಜ್‌ಕುಮಾರ್ ನಾಯಕ ಗಮನಕ್ಕೆಫಿ...**

ಮಂಗಳೂರು ಮಹಾನಗರದ ಸಿಸಿಬಿಯ ದಕ್ಷ ಮತ್ತು ಧಾಡಸಿ ಅಧಿಕಾರಿಗೆ ನಿಷೇಧಿತ 'ಮೆಥಾಂಫೆಟಮೆನ್' ಮಾದಕ ಪದಾರ್ಥವನ್ನು ಕೋಣಾಜೆ ಪೊಲೀಸ್ ಠಾಣೆ ಪರಿಸರದಲ್ಲಿನ ನೆತ್ತಿಲ ಪದವು ಬಳಿ ಐವರು ಮಾರಾಟ ಮಾಡುತ್ತಿದ್ದಾರೆ ಎಂಬ ಕರಾರುವಕ್ಕಾದ ಮಾಹಿತಿಯನ್ನು ಸಿಸಿಬಿಯ ಇನ್ಸ್‌ಪೆಕ್ಟರ್ ಶಾಮಸುಂದರ ಹೆಚ್.ಎಂ. ಗಮನಕ್ಕೆ ತಂದರು. ತಕ್ಷಣ ಅಲರ್ಟ್ ಆದ ಎಸಿಪಿ ಮನೋಜ್ ಕುಮಾರ್ ನಾಯಕ್ ಅವರು ಪೊಲೀಸ್ ಕಮೀಷನರ್ ಅನುಪಮ ಅಗರವಾಲ್, ಡಿಸಿಪಿ (ಕಾ.ಸು) ಸಿದ್ಧಾರ್ಥ ಗೋಯೆಲ್, ಡಿಸಿಪಿ (ಕ್ರೈಂ) ಬಿ.ಪಿ. ದಿನೇಶ್‌ಕುಮಾರ್ ಅವರ ಗಮನಕ್ಕೆ ತಂದು ಅವರಿಂದ ಮಹತ್ವದ ನಿರ್ದೇಶನಗಳನ್ನು ಪಡೆದು ತಮ್ಮ ಸಿಸಿಬಿ ಇನ್ಸ್‌ಪೆಕ್ಟರ್ ಶಾಮಸುಂದರ, ಪಿಎಸ್‌ಐ ಶರಣಪ್ಪ ಭಂಡಾರಿ ಮತ್ತು ಸಿಬ್ಬಂದಿಗಳನ್ನು ಕೂಡ್ರಿಸಿ ಯಾವುದೇ ಕಾರಣಕ್ಕೂ ಆರೋಪಿತರು ತಪ್ಪಿಸಿಕೊಳ್ಳದಂತೆ ಎಚ್ಚರವಹಿಸಲು ನಿರ್ದೇಶನ ನೀಡಿ ದಾಳಿಗೆ ಸಿದ್ಧರಾದರು.



ಎಸಿಪಿ ಮನೋಜ್‌ಕುಮಾರ್ ನಾಯಕ

**ಐವರು ರೆಡ್‌ಹ್ಯಾಂಡಾಗಿ ಬಲೆಗೆ...**

ಎಸಿಪಿ ಮನೋಜ್‌ಕುಮಾರ್ ನಾಯಕ್ ನೇತೃತ್ವದಲ್ಲಿನ ಸಿಸಿಬಿ ತಂಡ ಅತ್ಯಂತ ಕರಾರುವಕ್ಕಾದ, ಖಚಿತ ಮಾಹಿತಿ ಆಧರಿಸಿ ಸೆಪ್ಟೆಂಬರ್ 30ರಂದು ಮಂಗಳೂರು ನಗರ ವ್ಯಾಪ್ತಿಯ ಕೋಣಾಜೆ ಪೊಲೀಸ್ ಠಾಣೆ ವ್ಯಾಪ್ತಿಯ ನೆತ್ತಿಲಪದವು ಪರಿಸರದಲ್ಲಿ ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಬಲೆ ಬೀಸಿ ಮಾದಕ ವಸ್ತು ಮಾರಾಟಗಾರರು ತಪ್ಪಿಸಿಕೊಳ್ಳದಂತೆ ಐವರನ್ನು ಸಿಸಿಬಿ ತಂಡ ಖೆಡ್ಡಾಕ್ಕೆ ಕೆಡವಿತು. ವಶಕ್ಕೆ ತೆಗೆದುಕೊಂಡ ಐದು ಜನರು ತಮ್ಮ ಹೆಸರು ಮತ್ತು ವಿಳಾಸ ತಿಳಿಸಿದರು. ಇಲ್ಲಿ ಇನ್ಸ್‌ಪೆಕ್ಟರ್ ಶಾಮಸುಂದರ ಹೆಚ್.ಎಂ., ಪಿಎಸ್‌ಐ ಶರಣಪ್ಪ ಭಂಡಾರಿ ಮತ್ತು ತಂಡ ಯಶಸ್ವಿ ಕಾರ್ಯಾಚರಣೆ ಮಾಡಿತ್ತುಫಿ.

**ಬಂಧಿತರಿಂದ 70 ಗ್ರಾಂ MDMA ಜಪ್ತಿಫಿ...**

ಐದು ಜನ 'ಮೆಥಾಂಫೆಟಮೆನ್' ಮಾರಾಟಗಾರರಿಂದ 70 ಗ್ರಾಂ ತೂಕದ 3.50 ಲಕ್ಷ ರೂ. ಮೌಲ್ಯದ ಮಾದಕ ಪದಾರ್ಥ ಮತ್ತು 5 ಮೊಬೈಲ್ ಫೋನ್‌ಗಳು, 1460 ರೂ. ಮೌಲ್ಯದ ಡಿಜಿಟಲ್ ತೂಕ ಮಾಪನ ಯಂತ್ರ ವಶಪಡಿಸಿಕೊಳ್ಳಲಾಗಿದೆ. ಒಟ್ಟು 4.25 ಲಕ್ಷ ರೂ. ಮೌಲ್ಯದ ಸ್ವತ್ತು ಇದಾಗಿದೆ. 'ಮೆಥಾಂಫೆಟಮೆನ್' ಮಾರಾಟ/ಸಾಗಾಟ ಜಾಲದಲ್ಲಿ ಇನ್ನೂ ಕೆಲವರು ಭಾಗಿ ಆಗಿರುವ ಶಂಕೆಯಿದ್ದುಫಿ, ಆರೋಪಿಗಳ ತೀವ್ರ ವಿಚಾರಣೆ ನಡೆಸಲಾಗಿದೆ.

**ಆರೋಪಿಗಳ ಮೇಲೆ ಹಲವು ಪ್ರಕರಣ...**

ಬಂಧಿತ ಆರೋಪಿಗಳ ಪೈಕಿ ಹಸನ್ ಅಶೀರ್ ಎಂಬಾತನ ವಿರುದ್ಧ ಮಂಜೇಶ್ವರ ಪೊಲೀಸ್ ಠಾಣೆಯಲ್ಲಿ ಹಲ್ಲೆ ಹಾಗೂ ಮಾದಕ ವಸ್ತು ಮಾರಾಟಕ್ಕೆ ಸಂಬಂಧಪಟ್ಟ ಪ್ರಕರಣ ದಾಖಲಾಗಿದೆ. ಇನ್ನೊಬ್ಬ ಯಾಸೀನ್ ಇಮ್ರಾಜ್ ಎಂಬಾತನ ವಿರುದ್ಧ ಮಾದಕ ವಸ್ತು ಮಾರಾಟಕ್ಕೆ ಸಂಬಂಧಪಟ್ಟಂತೆ ಮಂಜೇಶ್ವರ ಪೊಲೀಸ್ ಠಾಣೆಯಲ್ಲಿ ಹಾಗೂ ಬೆಂಗಳೂರಿನ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣ ದಾಖಲಾಗಿವೆ.

**ಶ್ಲಾಘನೆ...**

ಬಹು ಅಪಾಯಕಾರಿ ನಿಷೇಧಿತ ಮೆಥಾಂಫೆಟಮೆನ್ (MDMA) ಮಾರಾಟ/ಸಾಗಾಟದ ಜಾಲದ ಪತ್ತೆ ಕಾರ್ಯದಲ್ಲಿ ಸಿಸಿಬಿ ಘಟಕದ ಎಸಿಪಿ ಮನೋಜ್‌ಕುಮಾರ್ ನಾಯಕ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಶಾಮಸುಂದರ ಹೆಚ್.ಎಂ., ಪಿಎಸ್‌ಐ ಶರಣಪ್ಪ ಭಂಡಾರಿ ಮತ್ತು ಸಿಬ್ಬಂದಿಗಳ ಕಾರ್ಯಾಚರಣೆಯನ್ನು ಪೊಲೀಸ್ ಕಮೀಷನರ್ ಅನುಪಮ ಅಗರವಾಲ್, ಡಿಸಿಪಿಗಳಾದ ಸಿದ್ಧಾರ್ಥ ಗೋಯೆಲ್, ಬಿ.ಪಿ. ದಿನೇಶ್‌ಕುಮಾರ್ ಶ್ಲಾಘಿಸಿದ್ದಾರೆ. ಇವರಿಗೆಲ್ಲ 'ಪೊಲೀಸ್ ನ್ಯೂಸ್'ನ ಹ್ಯಾಟ್ಸಾಫ್.


ಡಿಸಿಪಿ ಡಿ.ಕೆ. ಶಿವಕುಮಾರ್


ರಸ್ತೆಯಲ್ಲಿ ನಾಟಿ ಮಾಡುತ್ತಿರುವುದು


ರಸ್ತೆ ಗುಂಡಿ ಬಿದ್ದಿರುವುದು


ಎಂಪಿ ಸಿ.ಎನ್. ಮಂಜುನಾಥ್

# ಕನಕಪುರದ ಕೆಲವು ಕಡೆ ಮೂಲಭೂತ ಸೌಕರ್ಯಗಳ ಕೊರತೆ!

**ಕನಕಪುರ**

✍ ಶಾಂತರಾಜು ಜಿ. ಕಲ್ಲಹಳ್ಳಿ

ರಾಮನಗರ ಜಿಲ್ಲೆ ಕನಕಪುರ ವಿಧಾನಸಭಾ ಕ್ಷೇತ್ರದ ನಗರ ಮತ್ತು ಕಸಬಾ ಹೋಬಳಿಯ ಕೆಲವು ಕಡೆ ಮೂಲಭೂತ ಸೌಕರ್ಯಗಳು ಕೊರತೆಯಿಂದಾಗಿ ಜನ ಸಾಮಾನ್ಯರು ಪರದಾಡುವ ಸ್ಥಿತಿ ಕಂಡು ಬಂದಿದ್ದುಫ಼ಿ, ಮಳೆರಾಯ ಬಂದಾಗ ಸ್ಥಳೀಯ ಕೆಲವು ಮುಖಂಡರಿಂದ ಇಂತಹ ಪರಿಸ್ಥಿತಿಗಳು ಉಂಟಾಗಿವೆಯೇ ಹೊರತು ಯಾವುದೇ ಕಾರಣಕ್ಕೂ ಶಾಸಕರು ಹಾಗೂ ರಾಜ್ಯದ ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್‌ರವರ ತಪ್ಪು ಎನ್ನಲಾಗದು. ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಅಭಿವೃದ್ಧಿ ಮಾಡಲು ಚಾಲನೆ ನೀಡುತ್ತಿದ್ದುಫ಼ಿ, ಅವರ ಕ್ಷೇತ್ರ ಯಾವ ಲೆಕ್ಕ ಅನಿಸುತ್ತಿದೆ. ಏಕೆಂದರೆ ಇತ್ತೀಚೆಗೆ ಡಿ.ಕೆ. ಶಿವಕುಮಾರ್‌ರವರು ಕನಕಪುರದ ತಮ್ಮ ನಿವಾಸದಲ್ಲಿ ಜನಸಂಪರ್ಕ ಸಭೆಗಳನ್ನು ಹಲವಾರು ಬಾರಿ ಮಾಡಿದರು. ಈಗ ಮೂಲಭೂತ ಸೌಕರ್ಯ ಕೊರತೆಯಿಂದ ಪರದಾಡುತ್ತಿರುವ ಜನರು ಆ ಸಮಯದಲ್ಲಿ ಬಂದು ಡಿಸಿಎಂ ಡಿ.ಕೆ. ಶಿವಕುಮಾರ್‌ರವರ ಹತ್ತಿರ ನೇರವಾಗಿ



ಬೂದಿಗುಪ್ಪೆ ಗ್ರಾಮ ಪಂಚಾಯಿತಿ

ಮಾತಾಡಿ ಸಮಸ್ಯೆಗಳ ದೂರುಗಳನ್ನು ಕೊಟ್ಟಿದ್ದರೆ ಅವರು ಬಗೆಹರಿಸುತ್ತಿದ್ದರು ಎಂಬುದು ಕೆಲವು ಕಾಂಗ್ರೆಸ್ ಮುಖಂಡರ ಮಾತುಗಳು.

ಈ ಕ್ಷೇತ್ರದಲ್ಲಿ ನಾವು ಕಾಂಗ್ರೆಸ್ ಅವರು ಜೆಡಿಎಸ್, ಮತ್ತೊಬ್ಬರು ಬಿಜೆಪಿ ಎಂದು ರಾಜಕಾರಣದ ಸಮಯ ಎಂದರೆ ಚುನಾವಣೆ ಸಂದರ್ಭದಲ್ಲಿ ವರವರ ಪಕ್ಷಕ್ಕೆ ರಾಜಕಾರಣ ಮಾಡಲಿ ಯಾರೂ ಸಹ ತಡೆಯುವುದಿಲ್ಲಫ಼ಿ. ಪ್ರಜಾಪ್ರಭುತ್ವದಲ್ಲಿ ಹಕ್ಕಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗ ಡಿ.ಕೆ. ಶಿವಕುಮಾರ್‌ರವರು ರಾಜ್ಯದ ಉಪಮುಖ್ಯಮಂತ್ರಿಗಳು ಅವರು ಎಷ್ಟೇ ಬಿಡುವಿಲ್ಲದ ಕೆಲಸ ಕಾರ್ಯವಿದ್ದರೂ ಸಹ ನಮ್ಮ ಕನಕಪುರ ಕ್ಷೇತ್ರ ಜನತೆ ನನ್ನನ್ನು ಭೇಟಿಯಾಗಲುಂದರೆ ಯಾವುದೇ ಸಮಸ್ಯೆ ಹೇಳಿಕೊಳ್ಳಲು ಕೆಲಸ ಕಾರ್ಯಗಳನ್ನು ಬಿಟ್ಟು ಬೆಂಗಳೂರಿಗೆ ಬಂದು ಒಂದು ದಿನ ವ್ಯರ್ಥ ಮಾಡುವುದು ಬೇಡ ಎಂದು ತಿಳಿದು ಡಿ.ಕೆ. ಶಿವಕುಮಾರ್‌ರವರು ಕನಕಪುರಕ್ಕೆ ತಿಂಗಳಲ್ಲಿ ಒಂದೆರಡು ದಿನ ಬಂದು ಅವರ ಮನೆಯಲ್ಲಿ ಜನಸಂಪರ್ಕ ಸಭೆಯನ್ನು ಇಡೀ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಜನತೆಗೆ ಆಹ್ವಾನ ನೀಡಿರುವುದು ಹೆಮ್ಮೆಯ ವಿಷಯವೇ ಸರಿ. ಈ ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳುವವರು ಯಾರಾದರೇನು, ರಾಜಕೀಯ ಮರೆತು ದೂರು ಕೊಟ್ಟು ಪರಿಹಾರ ಕಂಡುಕೊಳ್ಳಬೇಕು, ಅದು ಏನೇ ಇರಲಿ ಇನ್ನೇನು ದಸರಾ ಹಬ್ಬ ಸಮೀಪಿಸುತ್ತಿರುವ ಸಮೀಪದಲ್ಲಿ ಮಳೆರಾಯ ಅಬ್ಬರಿಸಿದಾಗ ಕನಕಪುರ ನಗರಸಭೆಯ ವ್ಯಾಪ್ತಿಯ ವಾರ್ಡ್ ನಂಬರ್ 10ರ ಕುರುಪೇಟೆಯ ಕೆರೆ ಬೀದಿ ಕೆಂಕೇರಿ ಬಡಾವಣೆಯಲ್ಲಿ ನಿವಾಸಿಗಳು ನರಕ ಜೀವನ ಅನುಭವಿಸುವಂತಾಗಿದೆ ಎಂದು ಇಲ್ಲಿ ಜೆಡಿಎಸ್ ಮುಖಂಡ ಆರೋಪಿಸುತ್ತಾಫ಼ಿ, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ ಮನೆ ನಿರ್ಮಿಸಿ ಕೊಡುವುದಾಗಿ ಹೇಳಿ, ಮನೆಗಳ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿ, ಬಡವರ ಬದುಕು ಬೀದಿ ಪಾಲಾಗಿದೆ.


ಮಾಜಿ ಎಂಪಿ ಡಿ.ಕೆ. ಸುರೇಶ್

ಮನೆ ಕೆಲಸ ಪ್ರಾರಂಭಿಸಿ ನಾಲ್ಕು ವರ್ಷಗಳೇ ಕಳೆದರೂ ಪೂರ್ಣಗೊಳದೆ, ಗೋಡೆಗಳ ಮೇಲ್ಛಾವಣೆಯನ್ನು ಕಾಣದೆ ನಿಂತು, ಮಳೆ ನೀರು ತುಂಬಿ ಗೋಡೆಗಳು ಶಿತಿಲಗೊಂಡು ಬಿರುಕು ಬಿಟ್ಟು ವಾಸಿಸಲು ಬೇರೆ ಸ್ಥಳಾವಕಾಶ ವಿಲ್ಲದೆ, ಗೋಡೆಯ ಮೇಲೆ ಮೇಲ್ಛಾವಣೆಗೆ ತೆಂಗಿನಗರಿ ಹಾಕಿ ವಾಸ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುತ್ತಾರೆ. ಈ ವಾರ್ಡ್‌ನಲ್ಲಿ ಬಡವರು, ಕೂಲಿ ಕಾರ್ಮಿಕರು ವಾಸಿಸುತ್ತಿದ್ದುಫ಼ಿ, ಸುಮಾರು ಮೂವತ್ತು ವರ್ಷಗಳಿಂದ ಮೋರಿ ದುರಸ್ಥಿಯಾಗದೆ ಕೊಳಚೆ ನೀರು ನಡುರಸ್ತೆಯಲ್ಲಿ ತುಂಬಿ ಹರಿದು ರಸ್ತೆ ಹಾಳಾಗಿದ್ದುಫ಼ಿ, ಶೌಚಾಲಯಗಳಿಲ್ಲದೆ, ಬಯಲು ಶೌಚಾಲಯ ಬಳಸಬೇಕಾಗಿದ್ದುಫ಼ಿ, ಹೆಣ್ಣು ಮಕ್ಕಳಿಗೆ ತುಂಬಾ ತೊಂದರೆಯಾಗಿರುತ್ತದೆ. ಈ ವಾರ್ಡ್‌ನ ನಗರಸಭಾ ಸದಸ್ಯೆ ನೀಲಮ್ಮರವರು ಕೊಳಚೆ ನಿರ್ಮೂಲನು ಮಂಡಳಿಯಿಂದ ಕೆಂಕೇರಿ ಬಡಾವಣೆ ಅಭಿವೃದ್ಧಿಗಾಗಿ ಸುಮಾರು ಒಂದುಕಾಲೂ ಕೋಟಿ ಹಣ ಬಿಡುಗಡೆಯಾಗಿದ್ದರೂ ಸಹ ಅಧಿಕಾರಿಗಳು ಅಭಿವೃದ್ಧಿ ಕಾರ್ಯ ಕೈಗೊಳ್ಳದೇ ಸುಮ್ಮನೆ ಕೈಕಟ್ಟಿ ಕುಳಿತಿದ್ದಾರೆ. ಈ ಕ್ಷೇತ್ರದ ಶಾಸಕರಾದ ಡಿ.ಕೆ. ಶಿವಕುಮಾರ್‌ರವರು ಈ ವಾರ್ಡ್‌ನ ಬಗ್ಗೆ ಹೆಚ್ಚಿನ ಗಮನಹರಿಸಿ ಅತಿ ಶೀಘ್ರದಲ್ಲೇ ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಬೇಕೆಂದು ಮನವಿ ಮಾಡಿದರು. ಕೂಲಿ ಮಾಡಿ ಜೀವನ ಮಾಡುತ್ತಿರುವ ಕುಟುಂಬಗಳು ಐದು ವರ್ಷಗಳಿಂದ ಮನೆಗೆಲಸ ಪೂರ್ಣಗೊಳ್ಳದೆ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದುಫ಼ಿ, ಕೂಡಲೇ ಮನೆಗಳ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಇಲ್ಲಿನ ನಿವಾಸಿಗಳು ಒತ್ತಡ ಹೇರುತ್ತಿದ್ದುಫ಼ಿ, ಕಾಮಗಾರಿಯನ್ನು ಪೂರ್ಣಗೊಳಿಸಿ ಫಲಾನುಭವಿಗಳು ವಾಸ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದರು. ವಾರ್ಡಿನ ಸಾರ್ವಜನಿಕರು ಹೇಳುವ ವಿಷಯ ನಮ್ಮ ವಾರ್ಡಿನಲ್ಲಿ ಸರಿಯಾದ ವಿದ್ಯುತ್ ದೀಪಗಳಿಲ್ಲಫ಼ಿ, ಕುಡಿಯುವ ನೀಡಿನ ವ್ಯವಸ್ಥೆಯಿಲ್ಲಫ಼ಿ. ಸುರಿದ ಮಳೆಗೆ ಮೋರಿ ನೀರು ಬೀದಿಗೆ ಬಂದು ಇಲ್ಲಿನ ನಿವಾಸಿಗಳು ಓಡಾಡಲು ಆಗುತ್ತಿಲ್ಲಫ಼ಿ. ನಮ್ಮ


ಕನಕಪುರ ನಗರಸಭೆ

ವಾರ್ಡ್‌ನ ಸದಸ್ಯರಾದ ನೀಲಮ್ಮರವರು ಆಯ್ಕೆಯಾದ ನಂತರ ಸಾಕಷ್ಟು ನಮ್ಮ ವಾರ್ಡಿಗೆ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಈಗ ಕಾಮಗಾರಿಯು ಅರ್ಧಕ್ಕೆ ನಿಂತಿರುವುದರಿಂದ ಸಾಲಸೋಲ ಮಾಡಿ ಬಡ್ಡಿಗೆ ಹಣ ತಂದು ಪೂರ್ಣಗೊಳಿಸಲು ನಿರ್ಧರಿಸಿದ್ದೇವೆ. ಕೆಲವು ಮನೆಗಳ ಮೇಲ್ಛಾವಣಿಯಲ್ಲಿ ನೀರು ಸೋರುತ್ತಿದೆ. ಮನೆಯಲ್ಲಿ ನೀರು ತುಂಬಿಕೊಂಡು ವಾಸ ಮಾಡಲು ತೊಂದರೆಯಾಗುತ್ತಿದೆ. ಕಾಂಗ್ರೆಸ್, ಜೆಡಿಎಸ್ ಎಂದು ತಾರತಮ್ಯ ಮಾಡಿಕೊಂಡು, ಮನೆಗಳಿಗೆ ಕಿಟಕಿ, ಬಾಗಿಲು, ವಿದ್ಯುತ್ ನೀಡದೆ ತೊಂದರೆ ನೀಡುತ್ತಿದ್ದಾರೆ ಎನ್ನುತ್ತಾರೆ. ಇದೇ ರೀತಿ ಮುಂದಿನ ದಿನಗಳಲ್ಲಿ ಮುಂದುವರೆದರೆ ನಗರಸಭೆ ಮುಂದೆ ಪ್ರತಿಭಟನೆ ಮಾಡಲು ಸಿದ್ಧರಿದ್ದೇವೆ ಎಂದು ಆಕ್ರೋಶ ವ್ಯಕ್ತಪಡಿಸುತ್ತಾರೆ.


ಹತ್ತನೇ ವಾರ್ಡ್‌ನ ಜನತೆ

## ಗುಂಡಿ ಬಿದ್ದ ರಸ್ತೆಯಲ್ಲಿ ಗ್ರಾಮಸ್ಥರಿಂದ ಪೈರು ನಾಟಿ!

ಮಳೆರಾಯನ ಅವಾಂತರಿಂದ ಸುರಿದ ಭಾರಿ ಮಳೆಗೆ ಈ ಕನಕಪುರದ ಕಸಬಾ ಹೋಬಳಿಯ ಬೂದುಗುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬರಡನಹಳ್ಳಿ ಗ್ರಾಮದ ಮುಖ್ಯರಸ್ತೆಗಳೆಲ್ಲ ಗುಂಡಿಗಳಿಂದ ನೀರು ತುಂಬಿ ಗದ್ದೆಯಂತಾಗಿದೆ. ರಸ್ತೆಯಲ್ಲಿ ಹೂವಿನ ಗಿಡ, ಭತ್ತದ ಪೈರು ನಾಟಿ ಮಾಡಿ ಜನರು ಹಿಡಿಶಾಪ ಹಾಕುತ್ತಾ ನಗರದಿಂದ


ಮಡನೆ ಮುಂದೆ ನಿಂತಿರುವ ಚರಂಡಿ ನೀರು

ಕೇವಲ ಎರಡು-ಮೂರು ಕಿ.ಮೀ. ದೂರದಲ್ಲಿರುವ ಈ ಬರಡನಹಳ್ಳಿ ಗ್ರಾಮಕ್ಕೆ ಹದಿನೇಳು ವರ್ಷಗಳಿಂದ ರಸ್ತೆಗೆ ಡಾಂಬರ್ ಹಾಕಿಲ್ಲಫ಼ಿ. ರಸ್ತೆಯ ಎಲ್ಲಾ ಕಡೆ ಹಳ್ಳಗುಂಡಿಗಳಿಂದ ಕೂಡಿದೆ. 2006ರಲ್ಲಿ ಅಭಿವೃದ್ಧಿ ಮಾಡಿದ್ದರು. ಆನಂತರ ಅಲ್ಲಿಂದ ಇಲ್ಲಿಯವರೆವಿಗೂ ಯಾರೂ ರಸ್ತೆ ಅಭಿವೃದ್ಧಿ ಮಾಡಿಲ್ಲ ಎನ್ನುತ್ತಾರೆ. ಈ ಬಗ್ಗೆ ಡಿ.ಕೆ. ಶಿವಕುಮಾರ್‌ರವರಿಗೆ, ಮಾಜಿ ಸಂಸದ ಡಿ.ಕೆ. ಸುರೇಶ್‌ರವರ ಗಮನಕ್ಕೆ ತಂದಿದ್ದೇವೆ. ಜವನಮ್ಮನದೊಡ್ಡಿಫ಼ಿ, ಬರಡನಹಳ್ಳಿಫ಼ಿ, ಸುಂಟರದೊಡ್ಡಿ ಸೇರಿದಂತೆ, ಮೂರೂವರೆ ಕೋಟಿ ರೂ. ವೆಚ್ಚದಲ್ಲಿ ಮೂರೂವರೆ ಕಿ.ಮೀ. ಟೆಂಡರ್ ಆಗಿದೆ ಎಂದು ಆಶ್ವಾಸನೆಯಲ್ಲೇ ನಮ್ಮನ್ನು ಸಮಾಧಾನಪಡಿಸುತ್ತಿದ್ದಾರೆ ಎನ್ನುತ್ತಾರೆ. ಈ ಗ್ರಾಮಕ್ಕೆ ಸಾರಿಗೆ ಬಸ್ ವ್ಯವಸ್ಥೆಯಿಲ್ಲದೆ ಇರುವುದರಿಂದ ಮಕ್ಕಳು ಶಾಲಾ ಕಾಲೇಜುಗಳಿಗೆ ಹೋಗಲು ಆಟೋರಿಕ್ಷಾಗಳನ್ನೇ ಕಾಯಬೇಕಿದೆ. ಗ್ರಾಮದ ಬಡ ಕೂಲಿ ಕಾರ್ಮಿಕರು ಉದ್ಯೋಗಹರಿಸಿ ಹಾರೋಹಳ್ಳಿ ಕೈಗಾರಿಕಾ ಪ್ರದೇಶಗಳಿಗೆ ಸಂಚಾರ ಮಾಡಲು ಅವರ ಪರದಾಟ ಹೇಳತೀರದು. ಆಟೋಗಳನ್ನು ಕರೆದರೆ ನಿಮ್ಮ ಗ್ರಾಮಕ್ಕೆ ಬರುವುದಿಲ್ಲಫ಼ಿ. ರಸ್ತೆಗಳು ಹಾಳಾಗಿವೆ ಎನ್ನುತ್ತಾರೆ. ಇನ್ನು ಕೆಲವರು ತಲಾ ಒಬ್ಬರಿಗೆ ಐವತ್ತು ರೂಪಾಯಿ ಕೇಳುತ್ತಾರೆ. ಪ್ರತಿದಿನ ಐವತ್ತು ರೂ. ಕೊಟ್ಟು ಆಟೋರಿಕ್ಷಾಗಳಲ್ಲಿ ಪ್ರಯಾಣಿಸಬೇಕಾಗಿದ್ದುಫ಼ಿ, ಹೆಣ್ಣು ಮಕ್ಕಳಿಗೆ ಭದ್ರತೆಯು ಇಲ್ಲದಂತಾಗಿದೆ. ಈ ರೀತಿ ಎಲ್ಲಾ ಸಮಸ್ಯೆಗಳಿಗೆ ಹಲವು ಬಾರಿ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದರೂ ಸಹ ಯಾರೂ ಇತ್ತ ಗಮನಹರಿಸುತ್ತಿಲ್ಲ ಎಂದು ರಸ್ತೆಗಳಿಗೆ ಭತ್ತದ ಪೈರು ನಾಟಿ ಹಾಕುತ್ತಾ ಗ್ರಾಮಸ್ಥರೆಲ್ಲ ಆಕ್ರೋಶ ವ್ಯಕ್ತಪಡಿಸುತ್ತಾ ಮುಂದಿನ ದಿನವಾದರೂ ಈ ಸಮಸ್ಯೆಗೆ ಪರಿಹಾರ ಕಂಡು ಕೊಡುವರೇ ನಮ್ಮ ಶಾಸಕರು ಎನ್ನುತ್ತಾರೆ ಬರಡನಹಳ್ಳಿ ಗ್ರಾಮಸ್ಥರು.

**9**

ಎನ್ನುವುದು ಇದೀಗ ಬಹಿರಂಗವಾಗಿದೆ. ಇನ್ನು ಈ ದುಷ್ಟಕೂಟದಲ್ಲಿ ಯಾರೆಲ್ಲ ಇದ್ದರು ಎನ್ನುವುದನ್ನು ನೋಡುವುದಾದರೆ, ಕೊಡಗಿನ ವೀರಾಜಪೇಟೆ ಹೆಗ್ಗಳದ ನಾಸಿರುದ್ದೀನ್(26), ಎಡಪಾಲದ ಸಿ.ಹೆಚ್. ಯಾಹ್ಯ,



ಕುಂಜಿನ ಗ್ರಾಮದ ಅಕಿನಾಸ್(26), ಬೇಟೋಳಿ ಗ್ರಾಮದ ವಾಜಿದ್(26) ಕೇರಳ ಕಣ್ಣೂರಿನ ರಿಯಾಜ್(44), ಮೂಲತಃ ಕೊಡಗಿನವನಾದ ಬೆಂಗಳೂರಿನ ಸಂಜಯ್ ನಗರದಲ್ಲಿದ್ದ ರವೂಫ್(28) ಮತ್ತು ಪ್ರಮುಖ ಆರೋಪಿ ಮೆಹರೂಫ್(37) ಇದ್ದರು.

ಇನ್ನು ಪ್ರಮುಖ ಆರೋಪಿ ಕೇರಳದ ಕಾಸರಗೋಡುನ ಮೆಹರೂಫ್ (37) ವಿಮಾನದ ಮೂಲಕ ಭಾರತ ಮತ್ತು ದುಬೈಗೆ ಗಾಂಜಾ (ಹೈಡ್ರೋ ಗಾಂಜಾ) ಸಾಗಾಟ ಮಾಡಲು ಪ್ರಯತ್ನಿಸುತ್ತಿದ್ದ ವೇಳೆ ಸಿಕ್ಕಿ ಬಿದ್ದಿದ್ದಾನೆ. ಆ ಮೂಲಕ ಇನ್ನಿತರೆ ಆರು ಮಂದಿಯೂ ಸಿಕ್ಕಿ ಬೀಳುವಂತಾಗಿದ್ದು, ಜತೆಗೆ ಅಂತಾರಾಷ್ಟ್ರೀಯ ವ್ಯವಸ್ಥಿತ ಜಾಲವೊಂದು ಕೊಡಗು ಜಿಲ್ಲಾ ಪೊಲೀಸ್ ಬಲೆಗೆ ಬಿದ್ದಂತಾಗಿದೆ. ಇವರಿಂದ ಸುಮಾರು 3 ಕೋಟಿ ಬೆಲೆ ಬಾಳುವ 3 ಕೆ.ಜಿ. 31 ಗ್ರಾಂ ತೂಕದ ಹೈಡ್ರೋ ಗಾಂಜಾ ಮತ್ತು ಕೃತ್ಯಕ್ಕೆ ಬಳಸಿದ ಕೆಎಲ್ 72 ಡಿ 6697 ಸ್ವಿಫ್ಟ್ ಕಾರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಈ ಪ್ರಕರಣದ ಕುರಿತಂತೆ ಕೊಡಗು ಎಸ್ಪಿ ಕೆ.ರಾಮರಾಜನ್ ನೀಡಿದ ಮಾಹಿತಿ ಪ್ರಕಾರ ಕೇರಳ ಮೂಲದ ಮಹಮ್ಮದ್ ಅನೂಫ್ ಥೈಲ್ಯಾಂಡ್ ದೇಶದ ಬ್ಯಾಂಕಾಕ್ ನಗರದಲ್ಲಿ ಕೆಫೆ ಇಟ್ಟುಕೊಂಡಿದ್ದು, ಇವನು ಕೇರಳದ ಕಾಸರಗೋಡಿನ ಮೆಹರೂಫ್ (ಹಾಗೂ ರವೂಫ್ ಇವರೊಂದಿಗೆ ತಂಡವನ್ನು ಕಟ್ಟಿಕೊಂಡು ಅಲ್ಲಿಂದ ಹೈಡ್ರೋಪೋನಿಕ್ ರೀತಿಯಲ್ಲಿ ಬೆಳೆದಿರುವ ಗಾಂಜಾ (ಹೈಡ್ರೋ ಗಾಂಜಾವನ್ನು) ವಿಮಾನದ ಮೂಲಕ ಭಾರತ ಮತ್ತು ದುಬೈಗೆ ಸಾಗಾಟ ಮಾಡಲು ಪ್ರಯತ್ನಿಸುತ್ತಿದ್ದನಂತೆ. ಇನ್ನು ಕಾಸರಗೋಡಿನ ಮೆಹರೂಫ್ ಮತ್ತು ಮಹಮ್ಮದ್ ಅನೂಫ್ ಇವರುಗಳು ರವೂಫ್, ನಾಸೀರುದ್ದೀನ್, ವಾಜೀದ್, ಯಾಹ್ಯಾ, ಅಕನಾಸ್, ಅಜ್ಜಲ್, ಕೇರಳದ ರಿಯಾಜ್ ಇವರುಗಳನ್ನು ಒಳಗೊಂಡ ತಂಡ ರಚಿಸಿಕೊಂಡು ಅಂತರರಾಷ್ಟ್ರೀಯ ಮಾದಕ ದ್ರವ್ಯ ಸಾಗಾಟ ಕಾರ್ಯದಲ್ಲಿ ತೊಡಗಿದ್ದು, ಬ್ಯಾಂಕಾಕ್‌ನಿಂದ ಹೈಡ್ರೋ ಗಾಂಜಾವನ್ನು ಯಾಹ್ಯಾ ಎಂಬುವನು ಸೆ.23 ರಂದು ರಾತ್ರಿ 11.30 ಗಂಟೆಗೆ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತಂದಿದ್ದನಂತೆ.



ಸಿಪಿಐ ಅನೂಪ್ ಮಾದಪ್ಪ ಪಿ.



ಸಿಪಿಐ ಪಿ.ಕೆ. ರಾಜು

ಅಲ್ಲಿಂದ ನಾಸೀರುದ್ದೀನ್, ಅಕನಾಸ್, ಅಜ್ಜಲ್, ರಿಯಾಜ್ ಮತ್ತು ವಾಜೀದ್ ರವರು ಯಾಹ್ಯಾನೊಂದಿಗೆ ಸೇರಿ ಕೆಎಲ್ 72 ಡಿ 6697 ಸಿಫ್ಟ್ ಕಾರಿನಲ್ಲಿ ಬೆಂಗಳೂರಿನ ವಿಮಾನ ನಿಲ್ದಾಣದಿಂದ ಯಾಹ್ಯಾನನ್ನು ಕರೆದುಕೊಂಡು ಕೊಡಗು ಜಿಲ್ಲೆಗೆ ಆಗಮಿಸಿ ಗೋಣಿಕೊಪ್ಪದಲ್ಲಿರುವ ರೆಸಿಡೆನ್ಸಿ ವೊಂದರಲ್ಲಿ ಮಲಗಿದ್ದಾರೆ. ಅಲ್ಲದೆ ಸೂತ್ರಧಾರನಾಗಿರುವ ಮೆಹರೂಫ್ ಏನು ಹೇಳುತ್ತಾನೋ ನಡೆದುಕೊಳ್ಳುತ್ತಿದ್ದ ಪೆಡ್ಲರ್ ತಂಡ ಅವತ್ತು ಅವನ ಸೂಚನಗಾಗಿ ಆ ರೆಸಿಡನ್ಸಿಯಲ್ಲಿ ಕಾಯುತ್ತಿತ್ತು.

ಇನ್ನು ಈ ತಂಡ ಒಂದೇ ಸ್ಥಳದಲ್ಲಿ ಇದ್ದರೆ ಯಾರಿಗಾದರೂ ಅನುಮಾನ ಬರುತ್ತದೆ ಎಂದು ತಿಳಿದು ಅಲ್ಲಿಂದ ಬೇರೆಡೆಗೆ ತೆರಳಲು ತಯಾರಿ ನಡೆಸಿತ್ತು. ಅದರಂತೆ ವಿರಾಜ ಪೇಟೆ ಮೂಲಕ ಮಡಿಕೇರಿಗೆ ತೆರಳಲು ಮುಂದಾಗಿತ್ತು. ಈ ವೇಳೆ ಖಚಿತ ಮಾಹಿತಿಯೊಂದು ಕೊಡಗು ಪೊಲೀಸ್ ಇಲಾಖೆಯ ಡಿಸಿಆರ್‌ಬಿ ಘಟಕದ ಪೊಲೀಸ್ ನಿರೀಕ್ಷಕ ಮೇದಪ್ಪ ಅವರಿಗೆ ಬಂದಿತ್ತು. ಕೂಡಲೇ ಅವರು ಮಾಹಿತಿಯನ್ನು ಪೊಲೀಸ್ ಉಪಾಧೀಕ್ಷಕ ಮಹೇಶ್ ಕುಮಾರ್‌ರವರಿಗೆ ರವಾನಿಸಿ ಅವರ ಸೂಚನೆಯಂತೆ ಮಡಿಕೇರಿ ನಗರ ಪೊಲೀಸ್ ಠಾಣಾ ಸರಹದ್ದಿನ ವಿರಾಜ ಪೇಟೆ ರಸ್ತೆಯಲ್ಲಿರುವ ರಮ್ಯ ಸರ್ವಿಸ್ ಸ್ಟೇಷನ್ ಬಳಿಯಲ್ಲಿ ಸೆ.28ರ ಬೆಳಗಿನ ಜಾವ 01 ಗಂಟೆಗೆ ಕಾದು ಕುಳಿತಿದ್ದ ಪೊಲೀಸ್ ತಂಡ ಕಾರು ಸಹಿತ ಐವರು ಆರೋಪಿಗಳನ್ನು ಬಂಧಿಸಿದ್ದರು.

ಬಂಧಿತರನ್ನು ವಿಚಾರಣೆಗೊಳಪಡಿಸಿದಾಗ ಕೃತ್ಯಕ್ಕೆ ಇನ್ನೊಬ್ಬ ಆರೋಪಿ ಆರ್ಜಿ ಗ್ರಾಮದ ನಿವಾಸಿ, ಬೆಂಗಳೂರಿನಲ್ಲಿ ವಾಸವಿದ್ದ ರವೂಫ್ ಸಹಕರಿಸಿದ್ದು ಬೆಳಕಿಗೆ ಬಂದಿದ್ದು ಸೆ.28 ರಂದು ಬೆಂಗಳೂರಿನ ಸಂಜಯನಗರ ಲೇಔಟ್ ನಿವಾಸದಲ್ಲಿ ನಾಪೋಕ್ಲು ಪೊಲೀಸ್ ಠಾಣೆಯ ಉಪನಿರೀಕ್ಷಕ ಮಂಜುನಾಥ್ ತಂಡ ವಶಕ್ಕೆ ಪಡೆದಿತ್ತು. ಅಷ್ಟೇ ಅಲ್ಲದೆ ವಿಷಯ ತಿಳಿಯುತ್ತಿದ್ದಂತೆಯೇ ಈ ಜಾಲದ ಪ್ರಮುಖ ಆರೋಪಿಯಾಗಿದ್ದ ಕೇರಳದ ಕಾಸರಗೋಡಿನ ಮೆಹರೂಫ್ ಸೆ.29 ರಂದು ರಾತ್ರಿ 10.30ಕ್ಕೆ ಥೈಲ್ಯಾಂಡ್ ದೇಶದ



ಹೈಡ್ರೋ ಗಾಂಜಾ



ಬ್ಯಾಂಕಾಕ್‌ಗೆ ಪರಾರಿಯಾಗಲು ಸಿದ್ಧತೆ ನಡೆಸಿದ್ದನು.

ಈ ಬಗ್ಗೆ ಮಾಹಿತಿ ದೊರೆಯುತ್ತಿದ್ದಂತೆಯೇ ಕೇರಳದ ಎರ್ನಾಕುಲಂ ಜಿಲ್ಲೆಯ ಎಸ್ಪಿ ವೈಭವ್ ಸಕ್ಸೇನಾ ಮತ್ತು ಕೊಚ್ಚಿನ್ ಏರ್‌ಪೋರ್ಟ್ ಇಮಿಗ್ರೇಶನ್ ಅಧಿಕಾರಿ ಕೃಷ್ಣರಾಜ್ ಅವರ ಸಹಕಾರ ಪಡೆದ ಮಡಿಕೇರಿ ಗ್ರಾಮಾಂತರ ವೃತ್ತನಿರೀಕ್ಷಕ ಅನೂಪ್ ಮಾದಪ್ಪ ಹಾಗೂ ಸಿಬ್ಬಂದಿ ತಂಡ ಕೊಚ್ಚಿನ್ ಏರ್‌ಪೋರ್ಟ್‌ನಲ್ಲಿ ಬಂಧಿಸಿ ತರುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕಾರ್ಯಾಚರಣೆಗೆ ಕೊಡಗು ಪೊಲೀಸರು ಸುಮಾರು 72 ಗಂಟೆ ಸಮಯ ತೆಗೆದುಕೊಂಡಿದ್ದು, ಗಾಂಜಾದ ಬಹುದೊಡ್ಡ ಜಾಲವನ್ನೇ ಭೇದಿಸುವಲ್ಲಿ ಯಶಸ್ವಿಯಾಗಿರುವುದು ಖುಷಿಪಡುವ ಸಂಗತಿಯಾಗಿದೆ. ಇನ್ನು ಕೊಡಗು ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಸುಂದರ ರಾಜ್ ಮಾರ್ಗದರ್ಶನದಲ್ಲಿ ಮಡಿಕೇರಿ ಉಪವಿಭಾಗದ ಡಿವೈಎಸ್ಪಿ ಮಹೇಶ್ ಕುಮಾರ್ ಹಾಗೂ ಮಡಿಕೇರಿ ನಗರ ವೃತ್ತ ನಿರೀಕ್ಷಕ ರಾಜು ಪಿ.ಕೆ.ರವರ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿರುವುದು ವಿಶೇಷವಾಗಿದೆ. ☯

---

**5**

ಪತ್ನಿಯನ್ನು ಊರಿಗೆ ಬಿಡುವ ನೇಪ ಹೇಳಿ ಮಾಲೂರಿನಿಂದ ಅವರ ಕಾರಿನಲ್ಲಿ ಕರೆದುಕೊಂಡು ಬರುವಾಗ ಸಾಯಿಸಿ ಹುಂಗೇನಹಳ್ಳಿ ಗೇಟ್ ಬಳಿ ಶವವನ್ನು ಬೀಸಾಡಿ ಹೋಗಿರಬೇಕೆನ್ನುವ ಅನುಮಾನ ಇರುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಮೃತ ಲಕ್ಷ್ಮಿಯ ಸಹೋದರ ರಾಜೇಶ್ ಸೆಪ್ಟೆಂಬರ್ 7ರಂದು ಬೆಳಿಗ್ಗೆ 8 ಗಂಟೆಗೆ ಮಾಲೂರು ಪೊಲೀಸ್ ಠಾಣೆಗೆಹಾಜರಾಗಿ ಇಂದು ಬೆಳಿಗ್ಗೆ 7.30ರಲ್ಲಿ ನಮ್ಮ ಬಾವ ಆನಂದ್ ಕುಮಾರ್‌ರವರು ನನಗೆ



ಆರೋಪಿಗಳೊಂದದಿಗೆ ಕಾರನ್ನು ವಶಕ್ಕೆ ಪಡೆದಿರುವ ಪೊಲೀಸರು

ಫೋನ್ ಮಾಡಿ ಹುಂಗೇನಹಳ್ಳಿ ಗೇಟ್‌ಗೆ ಬರುವಂತೆ ತಿಳಿಸಿದರು. ನಾನು ತಕ್ಷಣ ನನ್ನ ತಾಯಿಯೊಂದಿಗೆ ಸ್ಥಳಕ್ಕೆ ಹೋಗಿ ನೋಡಲಾಗಿ ಅಕ್ಕ ಲಕ್ಷ್ಮಿ ರಸ್ತೆಬದಿಯಲ್ಲಿ ಬಿದ್ದು ಮೃತಪಟ್ಟಿದ್ದರು. ನಂತರ ವಿಚಾರಣೆ ಮಾಡಲಾಗಿ ಸೆಪ್ಟೆಂಬರ್ 6ರಂದು ಸಂಜೆ ತಿಮ್ಮೇಗೌಡ ಮತ್ತು ಲೀಲಾ ಎನ್ನುವವರು ಮಾಲೂರಿಗೆ ಬರುವಂತೆ ಕರೆದಿದ್ದರೆಂದು ತಿಳಇದು ಬಂದಿರುತ್ತದೆ. ಅಕ್ಕ, ಬಾವ ಮತ್ತು ಅವರ ಮಕ್ಕಳಿಗೆ ತಿಳಿಯದಂತೆ ತಿಮ್ಮೇಗೌಡನ ಕಷ್ಟಕ್ಕೆಂದು ಹಣ ಕೊಟ್ಟಿದ್ದರು. ಮತ್ತೆ ಹಣವನ್ನು ವಾಪಸ್ಸು ಕೇಳಿದಕ್ಕೆ ತಿಮ್ಮೇಗೌಡ ಒಳಸಂಚು ರೂಪಿಸಿ ಅವನ ಸ್ನೇಹಿತನನ್ನು ಸೇರಿಸಿಕೊಂಡು ಅಕ್ಕನಿಗೆ ಹಣ ಕೊಡುವುದಾಗಿ ಕಾರಿನಲ್ಲಿ ಕೂರಿಸಿಕೊಂಡು ಹೋಗಿ ಕತ್ತು ಹಿಸುಕಿ ಸಾಯಿಸಿದ ನಂತರ ಯಾರಿಗೂ ಅನುಮಾನ ಬಾರದಂತೆ ಮೃತದೇಹವನ್ನು ಅಪಘಾತದಲ್ಲಿ ಮೃತಪಟ್ಟಿರುವಂತೆ ಬಿಂಬಿಸಲು ಶವವನ್ನು ಹುಂಗೇನಹಳ್ಳಿ ಗೇಟ್‌ನ ರಸ್ತೆಬದಿ ಬೀಸಾಡಿ ಅಲ್ಲಿಂದ ಪರಾರಿಯಾಗಿರುವ ಆರೋಪಿಗಳನ್ನು ಬಂಧಿಸಿ ಅವರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ದೂರು ನೀಡಿದರು.

ಠಾಣಾಧಿಕಾರಿಗಳು ದೂರನ್ನು ದಾಖಲಿಸಿಕೊಂಡು ಮುಂದಿನಕ್ರಮಕ್ಕೆಗೊಂಡರು. ಸ್ಥಳಕ್ಕೆ ಎಸ್ಪಿ ನಿಖಿಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ನಾಗ್ತೆರವರು ಭೇಟಿ ನೀಡಿ ಪರಿಶೀಲಿಸಿದ ನಂತರ ಗ್ರಾಮದ ಪಂಚರ ಸಮಕ್ಷಮದಲ್ಲಿ ಮಹಜರ್ ನಡೆಸಿದ ಮೇಲೆ ಶವವನ್ನು ಮಾಲೂರು ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಲಾಯಿತು. ಅಲ್ಲಿ ವಾರಸುದಾರರು ಮತ್ತು ಪಂಚರ ಸಮಕ್ಷಮದಲ್ಲಿ ಪಂಚನಾಮೆ ನಡೆಸಿದ ನಂತರ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ಮೇಲೆ ಮೃತದೇಹವನ್ನು ವಾರಸುದಾರರಿಗೆ ನೀಡಲಾಯಿತು.

### ಹಣ ಡಿಮ್ಯಾಂಡ್ ಮಾಡುತ್ತಿದ್ದಕ್ಕೆ ಕೊಲೆ

ಲಕ್ಷ್ಮಿಯನ್ನು ಕೊಲೆ ಮಾಡಿ ಶವವನ್ನು ರಸ್ತೆಬದಿ ಹಾಕಿ ಪರಾರಿಯಾಗಿ ತಲೆಮರೆಸಿಕೊಂಡಿದ್ದ ರಿಯಲ್ ಎಸ್ಟೇಟ್ ಉದ್ಯಮಿ ತಿಮ್ಮೇಗೌಡರವರ ಬಂಧನಕ್ಕಾಗಿ ಎಸ್ಪಿ ನಿಖಿಲ್, ಎಎಸ್ಪಿಗಳಾದ ರವಿಶಂಕರ್ ಮತ್ತು ಜಗದೀಶ್, ಡಿವೈಎಸ್ಪಿ ಎಂ.ಹೆಚ್. ನಾಗ್ತೆರವರ ಮಾರ್ಗದರ್ಶನದಲ್ಲಿ ಪಿಐ ವಸಂತ್ ರವರನೇತೃತ್ವದಲ್ಲಿ ಎಎಸ್ಪಿ ಆನಂದ್, ಸಿಬ್ಬಂದಿವರ್ಗದವರಾದ ರೇಣುಪ್ರಸಾದ್, ಅಶೋಕ್, ಮೂರ್ತಿ, ಕೋದಂಡಪಾಣಿ, ಮೋಹನ್, ನಾಗಭೂಷಣರೆಡ್ಡಿ ಮತ್ತು ವೀಣಾರವರನ್ನು ಒಳಗೊಂಡ ತಂಡವನ್ನು ರಚಿಸಲಾಯಿತು. ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಮೈಸೂರಿನ ಯರಗಾನಹಳ್ಳಿ ಗ್ರಾಮದ ಬಳಿ ಇರುವ ಶಕ್ತಿನಗರದಲ್ಲಿರುವ ಸ್ನೇಹಿತನ ಮನೆಯಲ್ಲಿ ಆರೋಪಿ ತಿಮ್ಮೇಗೌಡನನ್ನು ವಶಕ್ಕೆ ಪಡೆದು ಕೃತ್ಯಕ್ಕೆ ಬಳಸಿದ್ದ ಸ್ವಿಫ್ಟ್ ಕಾರನ್ನು ಸಹ ವಶಕ್ಕೆ ಪಡೆದುಕೊಂಡ ನಂತರ ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ವಿಚಾರಣೆಗೆ ಒಳಪಡಿಸಲಾಯಿತು.

ಲಕ್ಷ್ಮಿ ಮರ್ಡರ್‌ನಲ್ಲಿ ನನಗೆ ಸಾಥ್ ಕೊಟ್ಟಿದ್ದು ಚಿಕ್ಕಬಳ್ಳಾಪುರದ ಹಾರೋಬಂಡೆ ಗ್ರಾಮದ ನಿವಾಸಿ ಮುನಿಯಪ್ಪ ನಮ್ಮಿಬ್ಬರ ಫ್ರೆಂಡ್‌ಶಿಪ್ ಆಗಿದ್ದು ಬೆಂಗಳೂರಿನ ಪರಪ್ಪನ ಅಗ್ರಹಾರದ ಸೆಂಟ್ರಲ್ ಜೈಲ್‌ನಲ್ಲಿ ನಾನು 5-6 ವರ್ಷಗಳ ಹಿಂದೆ ಬೆಂಗಳೂರಿನ ಬಾರ್‌ವೊಂದರಲ್ಲಿ ಕ್ಯಾಷಿಯರ್ ಆಗಿ ಕೆಲಸವು ಆಡುತ್ತಿದ್ದಾಗ ಹಣಕಾಸಿನ ವಿಚಾರಕ್ಕೆ ಶ್ರೀನಿವಾಸಮೂರ್ತಿ ಎಂಬುವವರನ್ನು ಕೊಲೆ ಮಾಡಿ ಜೈಲು ಸೇರಿದ್ದೆನು. ಮುನಿಯಪ್ಪನು ನಂದಗುಡಿ ಬಳಿ ಕ್ಷುಲ್ಲಕ ಕಾರಣಕ್ಕೆ ಮುನಿರಾಜು ಎಂಬುವವರನ್ನು ಕೊಲೆ ಮಾಡಿ ಜೈಲಿಗೆಬಂದಿದ್ದಾಗ ನಾವಿಬ್ಬರು ಜೈಲುಶಿಕ್ಷೆ ಅನುಭವಿಸುವಾಗ ಸ್ನೇಹಿತರಾಗಿದ್ದೆವು. ಸಮಯ ಸಿಕ್ಕಾಗ ಫೋನ್ ಮಾಡಿ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದೆನು. ಆನಂದ್‌ಕುಮಾರ್‌ನ ಪತ್ನಿ ಲಕ್ಷ್ಮಿ ನನಗೆ ಪದೇ ಪದೇ ಫೋನ್ ಮಾಡಿ ಹಣಕ್ಕಾಗಿ ಡಿಮ್ಯಾಂಡ್ ಮಾಡುತ್ತಿದ್ದರು. ಸೆಪ್ಟೆಂಬರ್ 6ರಂದು ಮುನಿಯಪ್ಪ ಮಾಲೂರಿಗೆ ಬಂದಿದ್ದನು. ದೊಡ್ಡಕಡತ್ತೂರು ಬಳಿ ಗುತ್ತಿಗೆ ಪಡೆದಿದ್ದ ತೋಟದ ಮನೆಗೆ ಅವನನ್ನು ಕರೆಸಿಕೊಂಡು ಮಾತನಾಡುತ್ತಿದ್ದಾಗ ಲಕ್ಷ್ಮಿ ಫೋನ್ ಮಾಡಿ ಹಣಕ್ಕಾಗಿ ಡಿಮ್ಯಾಂಡ್ ಮಾಡುತ್ತಾ ಟಾರ್ಚರ್ ಕೊಟ್ಟರು. ಆಗ ಮುನಿಯಪ್ಪ ಯಾರು ಎಂದು ಕೇಳಿದನು. ವಿಷಯವನ್ನು ಹೇಳಿದೆ. ಇಬ್ಬರು ಸೇರಿ ಪ್ಲಾನ್ ಮಾಡಿ ಅಲ್ಲಿಂದ ಮಾಲೂರಿಗೆ ಹೋಗಿ ಬಾರ್‌ವೊಂದರಲ್ಲಿ ಲೈಟಾಗಿ ಕುಡಿದು ಲಕ್ಷ್ಮಿಗೆ ಫೋನ್ ಮಾಡಿ ಎಲ್ಲಿ ಇದ್ದೀರಿ ಹಣವನ್ನು ಸರಿ ಮಾಡಿದ್ದೇನೆ ನೀವು ಬಂದರೆ ಹಣವನ್ನು ಕೊಟ್ಟು ನಿಮ್ಮನ್ನು ಊರಿಗೆ ಕರೆದುಕೊಂಡು ಹೋಗಿಬಿಟ್ಟು ಬರುವುದಾಗಿ ಹೇಳಿದೆ. ಅದರಂತೆ ರಾತ್ರಿ 8.30 ಗಂಟೆಗೆ ಮಾಲೂರಿನ ಕೋಲಾರ ರಸ್ತೆಯ ಸರ್ಕಲ್‌ನಲ್ಲಿ ನನಗಾಗಿ ಲಕ್ಷ್ಮಿ ಕಾದಿದ್ದರು. ಅವರನ್ನು ಅಲ್ಲಿಂದ ಕರೆದುಕೊಂಡು ಬಡಗಿ ಸೀನಪ್ಪನವರ ಲೇಔಟ್ ಬಳಿ ಕರೆದುಕೊಂಡು ಹೋಗಿ ನಾನು ಮತ್ತು ಸ್ನೇಹಿತ ಮುನಿಯಪ್ಪ ಸೇರಿಕೊಂಡು ಲಕ್ಷ್ಮಿಯ ಕತ್ತು ಹಿಸುಕಿ ಸಾಯಿಸಿದ ನಂತರ ಶವವನ್ನು ರಾತ್ರಿ 12 ಗಂಟೆ ನಂತರ ಹುಂಗೇನಹಳ್ಳಿ ಗೇಟ್ ಬಳಿ ಬೀಸಾಡಿ ಅಲ್ಲಿಂದ ತೋಟದ ಮನೆಗೆ ಹೋಗಿ ಹೆಂಡತಿ, ಮಕ್ಕಳನ್ನು ಕರೆದುಕೊಂಡು ಚಿಕ್ಕಬಳ್ಳಾಪುರದ ಹಾರೋಬಂಡೆ ಗ್ರಾಮಕ್ಕೆ ಹೋಗಿ ಅವರನ್ನು ಮುನಿಯಪ್ಪನ ಮನೆಯಲ್ಲಿ ಬಿಟ್ಟು ನನ್ನ ಸ್ವಿಫ್ಟ್ ಕಾರ್‌ನಲ್ಲಿ ಮೈಸೂರಿಗೆ ಹೊರಟು ನನ್ನ ಸ್ನೇಹಿತನ ಮನೆಯಲ್ಲಿದ್ದೇನೆಂದು ಹೇಳಿದನು.

ಎ1 ಆರೋಪಿ ತಿಮ್ಮೇಗೌಡ ಕೊಟ್ಟ ಹೇಳಿಕೆ ಆಧಾರದ ಮೇಲೆ ಚಿಕ್ಕಬಳ್ಳಾಪುರ ಹಾರೋಬಂಡೆ ಗ್ರಾಮದಲ್ಲಿದ್ದ ಎ2 ಆರೋಪಿ ಮುನಿಯಪ್ಪನನ್ನು ಬಂಧಿಸಿ ವಿಚಾರಣೆಯ ನಂತರ ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಒಳ್ಳೆಯವರಂತೆ ನಂಬಿಕೆ ಹುಟ್ಟಿಸಿ ಮನೆಯಲ್ಲಿಯೇ ತಿಂದು, ಉಂಡು ಅವರಿಂದಲೇ ಹಣವನ್ನು ಪಡೆದುಕೊಂಡು ಕೊನೆಗೆ ಹಣ ಕೇಳಿದಕ್ಕೆ ಅವರನ್ನೇ ಕೊಲೆ ಮಾಡಿದ ಈ ನಂಬಿಕೆ ದ್ರೋಹಿ ತಿಮ್ಮೇಗೌಡ ಮತ್ತು ಆತನ ಸ್ನೇಹಿತನಿಗೆ ತಕ್ಕ ಶಿಕ್ಷೆಯಾಗಬೇಕೆಂದು ಮೃತಳ ಕುಟುಂಬಸ್ಥರು ಮತ್ತು ನಂಬಿಗಾನಹಳ್ಳಿ ಹಾಗೂ ಹುಂಗೇನಹಳ್ಳಿಯ ಗ್ರಾಮಸ್ಥರು ಆಗ್ರಹಪಡಿಸಿದ್ದಾರೆ. ಮಾಲೂರು ಠಾಣೆಯ ಪಿಐ ವಸಂತ್ ನೇತೃತ್ವದ ತಂಡ ಯಶಸ್ವಿ ಕಾರ್ಯಾಚರಣೆ ನಡೆಸಿ ಅಪರಾಧಿಗಳನ್ನು ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾದ ತಂಡವನ್ನು ಎಸ್ಪಿ ನಿಖಿಲ್‌ರವರು ಶ್ಲಾಘಿಸಿದ್ದಾರೆ. ☯




ಮಹಾತ್ಮ
ಗಾಂಧೀಜಿಯವರ
155ನೇ
ಜನ್ಮದಿನಾಚರಣೆ



ಶ್ರೀ ಲಾಲ್ ಬಹದ್ದೂರ್
ಶಾಸ್ತ್ರಿ ಯವರ
120ನೇ
ಜನ್ಮದಿನಾಚರಣೆ

ಕರ್ನಾಟಕ ಸರ್ಕಾರ

ವಾರ್ತಾ ಮತ್ತು
ಸಾರ್ವಜನಿಕ
ಸಂಪರ್ಕ ಇಲಾಖೆ



ಮಹಾತ್ಮ ಗಾಂಧೀಜಿ
1869-1948


# ಸತ್ಯಕ್ಕಾಗಿ ಹೋರಾಟ...

## ಗಾಂಧೀಜಿ ಕಲಿಸಿದ ಪಾಠ

## "ಸತ್ಯಮೇವ ಜಯತೇ...

ಮಹಾತ್ಮ ಗಾಂಧೀಜಿಯವರಿಗೆ ಸತ್ಯವೇ ದೇವರು. ಸತ್ಯಶೋಧನೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು. ಅಸತ್ಯದ ಮೇಲೆ ಸತ್ಯ ಜಯಗಳಿಸುತ್ತದೆ ಎಂದು ದೃಢವಾಗಿ ನಂಬಿದ್ದರು. ಗಾಂಧೀಜಿಯವರ ಜೀವನ ತೆರೆದ ಪುಸ್ತಕದಂತೆ. ಅವರ ಸಂದೇಶಗಳು ಸರ್ವಕಾಲಿಕ ಸತ್ಯ. ಇಂದಿಗೂ ಪ್ರಸ್ತುತ. ನಮ್ಮ ಸರ್ಕಾರ ಸತ್ಯವನ್ನು ಎತ್ತಿ ಹಿಡಿಯುವಲ್ಲಿ ಮತ್ತು ಸಾಮಾಜಿಕ ನ್ಯಾಯವನ್ನು ಪರಿಪಾಲಿಸುವಲ್ಲಿ ಸದಾ ಗಾಂಧೀಜಿಯವರ ಮೌಲ್ಯಗಳನ್ನು ಅಳವಡಿಸಿಕೊಂಡು ಮುನ್ನಡೆದಿದೆ."

– ಸಿದ್ದರಾಮಯ್ಯ, ಮುಖ್ಯಮಂತ್ರಿ





ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ನುಡಿದಂತೆ ನಡೆದಿದ್ದೇವೆ...

ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಅನ್ನಭಾಗ್ಯ
10 kg

ಗೃಹಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಗೃಹಲಕ್ಷ್ಮಿ
₹2000

ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 | ₹1500

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES 16 POSTED AT BANGALORE PSO BG 560026 Every Tuesday Publishing Date : 6.10.2024

# ಭೈರಾದೇವಿ ರಿವೆಂಜ್ ಕಥೆಯಲ್ಲಿ ಅಘೋರಿ ಎಂಟ್ರಿ

ಇದೇ ಮೊದಲಬಾರಿಗೆ ರಾಧಿಕಾ ಕುಮಾರಸ್ವಾಮಿ ಅವರು ಹೆಣ್ಣು ಅಘೋರಿಯಾಗಿ ಅಭಿನಯಿಸಿರುವ ಭೈರಾದೇವಿ ಚಿತ್ರಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ನೊಂದ ಹೆಣ್ಣಿನ ಆತ್ಮವೊಂದರ ದ್ವೇಷದ ಕಥೆಯನ್ನು ನಿರ್ದೇಶಕ ಶ್ರೀಜೈ ಅವರು ಕುತೂಹಲಕರವಾಗಿ ನಿರೂಪಿಸಿದ್ದಾರೆ. ಈ ಕಥೆಗೆ ಅಘೋರಿ ಪಾತ್ರವನ್ನು ಲಿಂಕ್ ಮಾಡಿರುವುದೇ ವಿಶೇಷ. ಡಿಸಿಪಿ ಅರವಿಂದ್ (ರಮೇಶ್ ಅರವಿಂದ್), ಆತನ ಪತ್ನಿ ಶಾಲಿನಿ(ಅನು ಪ್ರಭಾಕರ್)ಆಕೆಯ ತಂಗಿ ಭೂಮಿಕ(ರಾಧಿಕಾ) ಈ ಮೂರು ಪಾತ್ರಗಳ ಸುತ್ತ ನಡೆಯುವ ಹಾರರ್ ರಿವೇಂಜ್ ಕಥೆಯನ್ನು ಥ್ರಿಲ್ಲಿಂಗ್ ಆಗಿ ಹೇಳುವ ಪ್ರಯತ್ನ ಮಾಡಲಾಗಿದೆ.



ಹೆತ್ತವರನ್ನು ಕಳೆದುಕೊಂಡಿದ್ದ ಭೂಮಿಕಾ, ಅಕ್ಕನ ಮನೆಯಲ್ಲೇ ಇರುತ್ತಾಳೆ. ಅದೇಕೋ ಭೂಮಿಕಾ ಮೇಲೆ ಅರವಿಂದ್‌ಗೆ ಪ್ರೀತಿ ಬೆಳೆಯುತ್ತಾ ಹೋಗುತ್ತೆ, ಆದರೆ ಭೂಮಿಕಾ ಅಕ್ಕ, ಭಾವನನ್ನು ತನ್ನತಂದೆ, ತಾಯಿ ಅಂತಲೇ ತಿಳಿದುಕೊಂಡಿರುತ್ತಾಳೆ. ಭೂಮಿಕಾ ಕಾಲೇಜೊಂದರಲ್ಲಿ ಪ್ಯಾರಾ ನಾರ್ಮಲ್ ಸೈನ್ಸ್ ವಿಭಾಗದ ಗೆಸ್ಟ್ ಲೆಕ್ಚರರ್ ಆಗಿ ಕೆಲಸ ಮಾಡುತ್ತಿರ್ತಾಳೆ. ತಮ್ಮನ್ನೇ ತಂದೆ, ತಾಯಿ ಎಂದುಕೊಂಡಿದ್ದ ಭೂಮಿಕಳನ್ನು ತನ್ನ ಗಂಡ ಬಯಸುತ್ತಿರುವುದು ಶಾಲಿನಿಗೆ ನುಂಗಲಾರದ ತುತ್ತಾಗುತ್ತದೆ. ಗಂಡನಿಗೆಷ್ಟು ತಿಳಿ ಹೇಳಿದರೂ ಅದನ್ನ ಕೇಳಿಸಿಕೊಳ್ಳುವ ಪರಿಸ್ಥಿತಿಯಲ್ಲಿ ಅರವಿಂದ್ ಇರಲ್ಲ. ಇದೇ ನೋವಿನಲ್ಲಿ ಶಾಲಿನಿ ತನ್ನ ಮನೆ ಮೇಲಿಂದ ಬಿದ್ದು ಸಾವನ್ನಪ್ಪುತ್ತಾಳೆ. ಅಕ್ಕನ ಸಾವಿನ ಹಿನ್ನೆಲೆ ಅರಿತ ಶಾಲಿನಿ, ಅದರ ಬಗ್ಗೆ ದೂರು ನೀಡಲು ಕಮೀಷನರ್ ಆಫೀಸ್‌ಗೆ ಹೋಗುವಾಗ ಸ್ಕೂಟರ್ ಅಪಘಾತದಲ್ಲಿ ಮರಣಿಸುತ್ತಾಳೆ. ನಂತರ ಅರವಿಂದ್ ಮಗಳನ್ನು ಬೋರ್ಡಿಂಗ್ ಶಾಲೆಗೆ ಸೇರಿಸುತ್ತಾನೆ. ಮನೆಯಲ್ಲಿ ಆಗಾಗ ನಡೆಯುವ ಚಿತ್ರ ವಿಚಿತ್ರ ಘಟನೆಗಳ ಬಗ್ಗೆ ವಿಚಾರಿಸಿದಾಗ ಶಾಲಿನಿಯೇ ಪ್ರೇತವಾಗಿ ಕಾಡುತ್ತಿದ್ದಾಳೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆಗ ಅರವಿಂದ್ ಜೀಪ್ ಡ್ರೈವರ್ ವೀರಯ್ಯ(ರಂಗಾಯಣ ರಘು) ವಾರಣಾಸಿಯಲ್ಲಿ ಪುರೋಹಿತರಾಗಿರುವ ವ್ಯಕ್ತಿ(ಶಿವರಾಮಣ್ಣ) ಯೊಬ್ಬರು ಎಂಥ ದೆವ್ವದ ಕಾಟವಾದರೂ ಅದಕ್ಕೆ ಪರಿಹಾರ ತೋರಿಸ್ತಾರೆ ಎಂದು ಸಲಹೆ ನೀಡುತ್ತಾನೆ.

ಇಬ್ಬರೂ ವಾರಣಾಸಿಗೆ ಹೋದಾಗ ಅವರು ಬಾಬಾ ಸ್ವಾಮಿನಾಥ(ರವಿಶಂಕರ್) ಮತ್ತವರ ಶಿಷ್ಯೆ ಭೈರಾದೇವಿ(ರಾಧಿಕಾ ಕುಮಾರಸ್ವಾಮಿ)ಯನ್ನ ಭೇಟಿ ಮಾಡಿಸುತ್ತಾರೆ. ಭಂಗಿ ಸೇದುವ, ಶವಭಕ್ಷಣೆ ಮಾಡುವ ಅಘೋರಿ ಬಾಬಾ ಬಳಿ ಅರವಿಂದ್ ತನ್ನ ಸಮಸ್ಯೆಯನ್ನು ಹೇಳಿಕೊಳ್ಳುತ್ತಾನೆ. ನಿಮ್ಮ ಸಮಸ್ಯೆಗೆ ಭೈರಾದೇವಿ ಪರಿಹಾರ ನೀಡುತ್ತಾಳೆಂದು ಆಕೆಯನ್ನು ಅರವಿಂದ್ ಜೊತೆ ಸ್ವಾಮಿನಾಥ ಕಳಿಸುತ್ತಾನೆ. ಮಂತ್ರ ಶಕ್ತಿಯಿಂದ ಆ ಅತೃಪ್ತ ಆತ್ಮವನ್ನು ಕಟ್ಟಿಹಾಕಲು ಮುಂದಾಗುವಾಗ ಭೈರಾದೇವಿಗೆ ಕಠೋರ ಸತ್ಯವೊಂದು ಕಂಡುಬರುತ್ತದೆ. ಆದರೆ ಆ ಆತ್ಮ ಯಾರದು... ಶಾಲಿನಿ ಸತ್ತಿದ್ದು ಹೇಗೆ... ಭೂಮಿಕ ಸಾವು ಆಕಸ್ಮಿಕವೇ, ಕೊಲೆಯೇ ಈ ಎಲ್ಲ ಘಟನೆಗಳಿಗೂ ಅರವಿಂದ್‌ಗೂ ಇರುವ ಸಂಬಂಧ ಏನು? ಈ ಎಲ್ಲ ಪ್ರಶ್ನೆಗಳಿಗೆ ಭೈರಾದೇವಿಯ ಕ್ಲೈಮ್ಯಾಕ್ಸ್‌ನಲ್ಲಿ ಉತ್ತರವಿದೆ.

ಇಡೀ ಚಿತ್ರದ ಕೇಂದ್ರಬಿಂದು ರಾಧಿಕಾ ಕುಮಾರಸ್ವಾಮಿ ಅವರ ಹೆಣ್ಣು ಅಘೋರಿಯ ಪಾತ್ರ, ಅವರು ಅಘೋರಿಯಾಗಿ ಪರಕಾಯ ಪ್ರವೇಶ ಮಾಡಿದ್ದಾರೆ. ವೇಷ , ಭೂಷಣದ ಜೊತೆಗೆ ಕಣ್ಣಲ್ಲೇ ತನ್ನ ನಟನಾ ಸಾಮರ್ಥ್ಯವನ್ನು ತೆರೆದಿಟ್ಟಿದ್ದಾರೆ. ನೃತ್ಯ, ಸಾಹಸ ದೃಶ್ಯಗಳಲ್ಲಿ ಅಬ್ಬರಿಸಿದ್ದಾರೆ. ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡಿರುವ ರಾಧಿಕಾ ಕುಮಾರಸ್ವಾಮಿ ಆ ಎರಡೂ ಪಾತ್ರಗಳನ್ನು ಅಷ್ಟೇ ಅಚ್ಚುಕಟ್ಟಾಗಿ ನಿರ್ವಹಿದ್ದಾರೆ. ರಮೇಶ್ ಅರವಿಂದ್ ಕೂಡ ನೆಗೆಟಿವ್ ಪಾತ್ರವನ್ನು ಚೆನ್ನಾಗಿಯೇ ನಿಭಾಯಿಸಿದ್ದಾರೆ. ನಟಿ ಅನು ಪ್ರಭಾಕರ್ ಕೂಡ ಅದ್ಭುತವಾಗಿ ಅಭಿನಯಿಸಿದ್ದಾರೆ. ಅಘೋರಿ ಬಾಬ ಆಗಿ ರವಿಶಂಕರ್ ಅವರು ತಮ್ಮ ಧ್ವನಿ, ಗತ್ತಿನಲ್ಲಿ ಅಬ್ಬರಿಸಿದ್ದಾರೆ. ಕಾಲೇಜು ವಿದ್ಯಾರ್ಥಿಯಾಗಿ ಸ್ಕಂದ ಅಶೋಕ್, ಟೀಚರ್ ಪಾತ್ರದಲ್ಲಿ ಮಾಳವಿಕಾ ಅವಿನಾಶ್, ಫಾದರ್ ಪಾತ್ರದಲ್ಲಿ ಸುಚೇಂದ್ರ ಪ್ರಸಾದ್ ಸೇರಿದಂತೆ ಎಲ್ಲರೂ ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ನಿರ್ದೇಶಕ ಶ್ರೀಜೈ ಆಯ್ಕೆ ಮಾಡಿಕೊಂಡಿರುವ ಕಥಾವಸ್ತುವೇ ವಿಭಿನ್ನವಾಗಿದ್ದು, ಮುಖವಾಡದ ಬದುಕಿನ ಹಿಂದಿನ ರಹಸ್ಯ, ಸಂಬಂಧಗಳಲ್ಲಿ ಆಗುವ ಏರುಪೇರು, ಸಾವು ನೋವುಗಳ ಹಿಂದಿರುವ ರಹಸ್ಯ, ಸುಳ್ಳಿನ ಹಿಂದಿರುವ ಸತ್ಯವನ್ನು ಶೋಧಿಸಿರುವ ಶೈಲಿ ಮೆಚ್ಚುವಂಥದ್ದು, ಅಘೋರಿಗಳ ನಡುವಳಿಕೆ, ಕಾರ್ಯವೈಖರಿ, ಆತ್ಮಗಳ ದ್ವೇಷ, ತಪ್ಪಿಸಿಕೊಳ್ಳುವ ತಂತ್ರಗಾರಿಕೆ ಗಮನ ಸೆಳೆಯುತ್ತದೆ. ಸ್ಮಶಾನದಲ್ಲಿ ಚಿತ್ರೀಕರಿಸಿರುವ ಹಾಡು, ಸಾಹಸ ದೃಶ್ಯ ಮೈರೋಮಾಂಚನಗೊಳಿಸುತ್ತದೆ. ಚಿತ್ರಕ್ಕೆ ಬೆನ್ನೆಲುಬಾಗಿ ರವಿರಾಜ್ ಹಾಗೂ ಯಾದವ್ ಸಾಥ್ ನೀಡಿದ್ದಾರೆ. ಸೆಂಥಿಲ್ ಪ್ರಶಾಂತ್ ಅವರ ಸಂಗೀತ ಅದ್ಭುತವಾಗಿದೆ. ವಾಲಿ ಅವರ ಕ್ಯಾಮೆರಾ ಕೈಚಳಕ ಅದ್ಭುತವಾಗಿದೆ.



# ಕನ್ನಡದ ಆ ನಟನೊಟ್ಟಿಗೆ ನಟಿಸುವ ಆಸೆಯಿದೆ

ಕರ್ನಾಟಕದ ಕರಾವಳಿ ಭಾಗದಿಂದ ಸಾಕಷ್ಟು ಜನ ನಟ-ನಟಿಯರು ಚಿತ್ರರಂಗಕ್ಕೆ ಬಂದಿದ್ದಾರೆ. ಬರುತ್ತಲೇ ಇದ್ದಾರೆ. ಮಂಗಳೂರು ಮೂಲದ ಕೃತಿ ಶೆಟ್ಟಿ ಈಗ ತೆಲುಗು, ತಮಿಳಿನಲ್ಲಿ ನಟಿಸುತ್ತಿದ್ದಾರೆ. ಕನ್ನಡ ಚಿತ್ರದಲ್ಲಿ ಕೂಡ ನಟಿಸುವ ಆಸೆ ವ್ಯಕ್ತಪಡಿಸಿದ್ದಾರೆ.

ಮಂಗಳೂರು ಮೂಲದ ಕೃತಿ ಶೆಟ್ಟಿ ತೆಲುಗಿನ 'ಉಪ್ಪೆನಾ' ಚಿತ್ರದಲ್ಲಿ ಮೋಡಿ ಮಾಡಿದ್ದರು. ಬಳಿಕ ಸಾಲು ಸಾಲು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದರು. ಮಂಗಳೂರು ಮೂಲದ ಚೆಲುವೆಗೂ ತುಳು ಮಾತನಾಡಲು ಬರುತ್ತದೆ. ಸದ್ಯ ಮೂರು ತಮಿಳು ಸಿನಿಮಾಗಳು ಆಕೆಯ ಕೈಯಲ್ಲಿದೆ.

ಮುಂಬೈನಲ್ಲಿ ಓದಿ ಬೆಳೆದಾಕೆ ಕೃತಿ. ಮೊದಲಿಗೆ ಹೃತಿಕ್ ರೋಷನ್ ನಟನೆಯ 'ಸೂಪರ್ 30' ಚಿತ್ರದ ಸಣ್ಣ ಪಾತ್ರದಲ್ಲಿ ನಟಿಸಿದ್ದರು. ಬಳಿಕ 'ಉಪ್ಪೆನಾ' ಸಿನಿಮಾ ಅವಕಾಶ ಸಿಕ್ಕಿತ್ತು. ಹಾಗಾಗಿ ಅಲ್ಲೇ ಹೆಚ್ಚು ಸಿನಿಮಾಗಳಲ್ಲಿ ನಟಿಸಿದರು. ಕೃತಿ ಪೋಷಕರು ಮಂಗಳೂರು ಮೂಲದವರು. ಹಾಗಾಗಿ ಬೆಂಗಳೂರು ಹಾಗೂ ಮಂಗಳೂರಿಗೆ ಆಕೆ ಆಗಾಗ್ಗೆ ಭೇಟಿ ಕೊಡುತ್ತಿರುತ್ತಾರೆ. ಆಕೆಯ ನೆಂಟರು ಸಾಕಷ್ಟು ಜನ ಬೆಂಗಳೂರಿನಲ್ಲಿ ಇದ್ದಾರಂತೆ. ಕನ್ನಡ ಮಾತನಾಡಲು ಬರಲ್ಲ, ಆದರೆ ಆದಷ್ಟು ಬೇಗ ಕಲಿಯುತ್ತೇನೆ ಎನ್ನುತ್ತಾರೆ. ಕನ್ನಡ ಚಿತ್ರದಲ್ಲಿ ನಟಿಸುವ ಆಸೆಯಿದೆ. ರಕ್ಷಿತ್ ಶೆಟ್ಟಿ ನನ್ನ ನೆಚ್ಚಿನ ಕನ್ನಡ ನಟ. ಅವರೊಟ್ಟಿಗೆ ಅವಕಾಶ ಸಿಕ್ಕರೆ ನಟಿಸುತ್ತೇನೆ. ಅದಕ್ಕೆ ಒಳ್ಳೆಯ ಕಥೆ ಬೇಕು ಎಂದಿದ್ದಾರೆ. ಕೃತಿ ಶೆಟ್ಟಿ ಈ ಹೇಳಿಕೆ ವೈರಲ್ ಆಗುತ್ತಿದೆ.

ರಕ್ಷಿತ್ ಶೆಟ್ಟಿ ನಟನೆಯ 'ಕಿರಿಕ್ ಪಾರ್ಟಿ' ಸಿನಿಮಾ ಬಹಳ ಇಷ್ಟ. ಮೂರು ಬಾರಿ ನೋಡಿದ್ದೇನೆ. ಅದರಲ್ಲಿ ರಕ್ಷಿತ್ ಶೆಟ್ಟಿ ನಟನೆ ಬಹಳ ಇಷ್ಟವಾಯಿತು ಎಂದು ಕೂಡ ಕೃತಿ ಹೇಳಿದ್ದರು. ಕನ್ನಡದಲ್ಲಿ ಆದಷ್ಟು ಬೇಗ ನಟಿಸಬೇಕು ಎನ್ನುವ ಇಂಗಿತ ವ್ಯಕ್ತಪಡಿಸಿದ್ದಾರೆ. ಕೃತಿ ಈಗಾಗಲೇ ಮಾಲಿವುಡ್‌ಗೆ ಎಂಟ್ರಿ ಕೊಟ್ಟಿದ್ದಾರೆ. ಮಲಯಾಳಂ 'ARM' ಚಿತ್ರದಲ್ಲಿ ಟೊವಿನೋ ಥಾಮಸ್ ಜೊತೆ ನಟಿಸಿದ್ದರು. ಬಹುಕೋಟಿ ವೆಚ್ಚದ ಆಕ್ಷನ್ ಅಡ್ವೆಂಚರಸ್ ಕಾಸ್ಟ್ಯೂಮ್ ಡ್ರಾಮಾದಲ್ಲಿ ಲಕ್ಷ್ಮಿ ಎನ್ನುವ ಪಾತ್ರದಲ್ಲಿ ಮಿಂಚಿದ್ದಾರೆ.

ಅಂದಾಜು 30 ಕೋಟಿ ರೂ. ಬಜೆಟ್ 'ARM' ಸಿನಿಮಾ 100 ಕೋಟಿ ರೂ.ಗೂ ಅಧಿಕ ಕಲೆಕ್ಷನ್ ಮಾಡಿದೆ. ಮಾಲಿವುಡ್‌ನಲ್ಲಿ ಭರ್ಜರಿ ಸಕ್ಸಸ್ ಕಂಡಿದೆ. ಇನ್ನು ಹಿಂದಿಯಲ್ಲಿ ರಣ್ವೀರ್ ಸಿಂಗ್, ತೆಲುಗಿನಲ್ಲಿ ರಾಮ್‌ಚರಣ್ ಜೊತೆ ನಟಿಸುವ ಆಸೆಯನ್ನು ಕೃತಿ ವ್ಯಕ್ತಪಡಿಸಿದ್ದಾರೆ.



# ಆತ ಸೆಟ್‌ನಲ್ಲಿ ಹೊಡೆದಿದ್ದ!

ಲಿಂಗ ತಾರತಮ್ಯದ ಕುರಿತು, ಪುರುಷರಿಗೆ ಹೆಚ್ಚು ಆದ್ಯತೆ ನೀಡಿ, ಮಹಿಳೆಯರನ್ನು ಕಡೆಗಣಿಸಲಾಗುತ್ತದೆ ಎಂಬ ವಾದಗಳು ಆಗಾಗ ಕೇಳಿಬರುತ್ತಿರುತ್ತವೆ. ಈ ವಾದ-ವಿವಾದ ಸಿನಿಮಾ ಕ್ಷೇತ್ರದಲ್ಲೇ ಹೆಚ್ಚುಪ್ಪಿ. ಚಿತ್ರರಂಗದಲ್ಲಿ ನಟರಿಗೆ ಇರುವ ಸಂಭಾವನೆ, ಅವಕಾಶಗಳು, ಭದ್ರತೆ ನಟಿಯರಿಗೆ ಸಿಗುವುದಿಲ್ಲ ಎಂಬ ಮಾತಿದೆ. ಇದೀಗ ಆ ವಿಚಾರ ಮತ್ತೆ ಮನ್ನೆಲೆಗೆ ಬಂದಿದೆ. ಕನ್ನಡದ 'ತಮಸ್ಸು', 'ಐದೊಂದ್ಲ ಐದು' ಸೇರಿ ಏಲು ಭಾಷೆಗಳಲ್ಲಿ ಮಿಂಚಿರುವ ನಟಿ ಪದ್ಮಪ್ರಿಯ ತಮಗಾದ ನೋವು ತೋಡಿಕೊಳ್ಳುವ ಮೂಲಕ ಲಿಂಗ ತಾರತಮ್ಯದ ವಿರುದ್ಧ ಕಹಳೆ ಊದಿದ್ದಾರೆ. '2007ರಲ್ಲಿ ತಮಿಳು ಚಿತ್ರದ ಶೂಟಿಂಗ್‌ನ ಕೊನೆಯ ದಿನದಂದು, ನಿರ್ದೇಶಕನೊಬ್ಬಪ್ಪಿ, ನೀನು ಸರಿಯಾಗಿ ನಟಿಸುತ್ತಿಲ್ಲ ಎಂಬ ಸೆಟ್‌ನಲ್ಲಿ ಎಲ್ಲರ ಮುಂದೆ ಕಪಾಳಕ್ಕೆ ಹೊಡೆದಿದ್ದಪ್ಪಿ. ಆ ಬಗ್ಗೆ ದ್ವನಿ ಎತ್ತಿದ್ದ ನನ್ನನ್ನೇ ಎಲ್ಲರೂ ದೂರಿದ್ದರು. ಜತೆಗೆ ಅದರಿಂದ ಅವಕಾಶಗಳೂ ಕಡಿಮೆಯಾದವು' ಎಂದು ಪದ್ಮಪ್ರಿಯ ಹೇಳಿಕೊಂಡಿದ್ದಾರೆ. ಹಾಗೇ, 'ನಟರಿಗೆ ಯೋಧ, ಗ್ಯಾಂಗ್‌ಸ್ಟರ್, ವಕೀಲ ಹೀಗೆ ನಾನಾ ಪತ್ರಗಳನ್ನು ನೀಡುತ್ತಾರೆ. ಆದರೆ, ನಟಿಯರನ್ನು ಕೇವಲ ಡ್ಯಾನ್ಸ್‌ಪ್ಪಿ, ಗ್ಲಾಮರ್‌ಗೆ ಸೀಮಿತ ಮಾಡುತ್ತಾರೆ. ಈ ತಾರತಮ್ಯದ ವಿರುದ್ಧ ದ್ವನಿ ಎತ್ತಿಪ್ಪಿ, ಮಹಿಳಾ ಪ್ರಾತಿನಿಧ್ಯ ಬಗ್ಗೆ ಮಾತನಾಡಬೇಕಿದೆ. ಈ ಬಗ್ಗೆ ಮಾತನಾಡದಿದ್ದರೆ ಮುಂದೆ ಇದೇ ನಿಮಗೆ ಮುಳುವಾಗಲಿದೆ' ಎಂದು ನಟಿಯರಿಗೆ ಎಚ್ಚರಿಕೆ ನೀಡಿದ್ದಾರೆ. ಎರಡು ವರ್ಷಗಳ ಹಿಂದೆ ತೆರೆಕಂಡಿದ್ದ 'ವಂಡರ್ ವುಮನ್' ಎಂಬ ಇಂಗ್ಲೀಷ್ ಸಿನಿಮಾ ಬಳಿಕ ಪದ್ಮಪ್ರಿಯ ಮತ್ತೆ ಕಾಣಿಸಿಕೊಂಡಿಲ್ಲಪ್ಪಿ.

Vol. 40 No. 18 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com